بِسْمِ اللّٰهِ الرَّحْمٰنِ الرَّحِيْمِ نَحْمَدُهٗ وَنُصَلِّيْ عَلٰى رَسُوْلِهِ الْكَرِيْمِ وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ಕನ್ನಡ
# ಬದರ್
ವಾರ ಪತ್ರಿಕೆ
WEEKLY BADAR QADIAN KANNADA

ವರ್ಷ: 03

ಸಂಚಿಕೆ: 38

ವಾರ್ಷಿಕ ಶುಲ್ಕ ರೂ.600/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

22 ಸೆಪ್ಟೆಂಬರ್ 2022, 22 ತಬೂಕ್ 1401 ಹಿಜರಿ ಶಮ್‌ಸಿ,
25 ಸಫರ್ 1444 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ۔

## ಅಲ್ಲಾಹನ ಉಪದೇಶ

وَاَنْذِرْ بِهِ الَّذِيْنَ يَخَافُوْنَ اَنْ يُّحْشَرُوْٓا
اِلٰى رَبِّهِمْ لَيْسَ لَهُمْ مِّنْ دُوْنِهٖ وَلِيٌّ
وَّلَا شَفِيْعٌ لَّعَلَّهُمْ يَتَّقُوْنَ

**(ಅಲ್ ಅನ್‌ಆಮ್ : 59)**

**ಅಂದರೆ: ತಮ್ಮ ಪ್ರಭುವಿನ ಸನ್ನಿಧಿಯಲ್ಲಿ ಒಂದುಗೂಡಿಸಲ್ಪಡಲಿದ್ದೇವೆಂದೂ ತಮಗೆ ಅವನ ಹೊರತು ರಕ್ಷಕನಾಗಿ ಅಥವಾ ಶಿಫಾರಸು ಸ್ವೀಕರಿಸುವವನಾಗಿ ಯಾರೂ ಇಲ್ಲವೆಂದೂ ಭಯಪಡುವವರಿಗೆ, ಇದರ (ಈ ಖುರ್‌ಆನ್) ಮೂಲಕ ಮುನ್ನೆಚ್ಚರಿಕೆ ನೀಡು-ಅವರು ಭಯಭಕ್ತಿಯುಳ್ಳವರಾಗಲಿಕ್ಕೋಸ್ಕರ.**

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ಒಳ್ಳೆಯ ಮತ್ತು ಕೆಟ್ಟ ಸಹವಾಸದ ಉದಾಹರಣೆಗಳು

(2101) ಹಝ್ರತ್ ಅಬುಮೂಸ(ರ) ವರದಿ ಮಾಡುತ್ತಾರೆ, ಪ್ರವಾದಿ(ಸ) ಅವರು ಹೇಳಿದರು: ಒಳ್ಳೆಯ ನೆರೆಹೊರೆಯುವರ ಮತ್ತು ಕೆಟ್ಟ ನೆರೆಹೊರೆಯವರ ಉದಾಹರಣೆಯು ಕಸ್ತೂರಿ ಅಂಗಡಿ ಮತ್ತು ಕಮ್ಮಾರನ ಕುಲುಮೆಯಂತಿದೆ. ಕಸ್ತೂರಿ ಇರುವವನಿಂದ ನೀವು (ಎರಡು ವಸ್ತುಗಳಲ್ಲಿ ಒಂದನ್ನು) ಖಾಲಿ ಬರುವುದಿಲ್ಲ, ನೀವು ಅವನಿಂದ ಖರೀದಿಸುತ್ತೀರಿ ಅಥವಾ ನೀವು ಅವನ ಸುವಾಸನೆಯನ್ನು ಅನುಭವಿಸುತ್ತೀರಿ. ಅದೇ ರೀತಿ ಕಮ್ಮಾರನ ಕುಲುಮೆಯು ನಿಮ್ಮ ದೇಹ ಮತ್ತು ನಿಮ್ಮ ಬಟ್ಟೆಗಳನ್ನು ಸುಡುತ್ತದೆ ಅಥವಾ ನೀವು ಅದರ ಕೆಟ್ಟ ವಾಸನೆಯನ್ನು ಅನುಭವಿಸುವಿರಿ.

### ಉಡುಗೋರೆಯನ್ನು ಮಾರಾಟ ಮಾಡುವುದು

(2104) ಹಝ್ರತ್ ಸಾಲಿಮ್ ಬಿನ್ ಅಬ್ದುಲ್ಲಾ ಬಿನ್ ಉಮರ್(ರ) ಅವರು ತಮ್ಮ ತಂದೆಯಿಂದ ವರದಿ ಮಾಡುತ್ತಾರೆ ಪ್ರವಾದಿ(ಸ) ಅವರು ಹಝ್ರತ್ ಉಮರ್(ರ) ಅವರಿಗೆ ರೇಷ್ಮೆಯ ಒಂದು ಬಟ್ಟೆಯನ್ನು ಕಳುಹಿಸಿದ್ದರು. ಪ್ರವಾದಿ(ಸ)ರವರು ಹಝ್ರತ್ ಉಮರ್(ರ)ರವರು ಅದನ್ನು ಧರಿಸಿರುವುದನ್ನು ಕಂಡು ಹೇಳಿದರು: ನಾನು ನಿಮಗೆ ಇದನ್ನು ನೀವು ಧರಿಸಲಿ ಎಂದು ಕಳುಹಿಸಲಿಲ್ಲ. ಪರಲೋಕದ ಅನುಗ್ರಹದಿಂದ ವಂಚಿತರಾದವರು ಮಾತ್ರ ಇದನ್ನು ಧರಿಸುತ್ತಾರೆ. ನಿಮಗೆ ಅದರಿಂದ ಪ್ರಯೋಜನವಾಗಲಿ ಎಂದು ಕಳುಹಿಸಿದ್ದೆ ಅಂದರೆ ಅದನ್ನು ಮಾರಲಿ ಎಂದು ಕಳುಹಿಸಿದ್ದೆ.

**(ಬುಖಾರಿ, ಸಂಪುಟ-4, ಕಿತಾಬ್ ಅಲ್-ಬುಯು, 2008 ರಲ್ಲಿ ಪ್ರಕಟಿತ, ಖಾದಿಯಾನ್)**

**MUSLIM TELEVISION AHMADIYYA INTERNATIONAL**
**www.mta.tv**

## ಇಂಜೀಲಿನ ಬೋಧನೆಯನ್ನು ಅಮಾನತುಗೊಳಿಸಲಾಗಿದೆ ಮತ್ತು ಪವಿತ್ರ ಖುರ್‌ಆನ್ ಅನ್ನು ಅನುಸರಿಸಲಾಗುತ್ತಿದೆ

### ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ಪವಿತ್ರ ಖುರ್‌ಆನ್‌ನ ಬೋಧನೆಯು ಬುದ್ಧಿವಂತಿಕೆಯನ್ನು ಒಳಗೊಂಡಿದೆ ಎಂದು ನಾನು ಈಗಾಗಲೇ ಹೇಳಿದ್ದೇನೆ. ಇದಕ್ಕೆ ವಿರುದ್ಧವಾಗಿ, ಇಂಜೀಲಿನ ಬೋಧನೆಗಳ ಕಡೆ ನೋಡಿ! ಒಂದು ಕೆನ್ನೆಗೆ ಬಾರಿಸಿದರೆ ಇನ್ನೊಂದು ಕೆನ್ನೆಯನ್ನು ತೋರಿಸುವುದು ಇತ್ಯಾದಿ. ಅದನ್ನು ಮರೆಮಾಚಲು ಸಾಧ್ಯವಿಲ್ಲ ಮತ್ತು ಅದರ ಸಾಂಸ್ಕೃತಿಕ ರೂಪವು ಸಾಧ್ಯವಾಗದಿರುವುದು ಎಷ್ಟು ಆಕ್ಷೇಪಾರ್ಹ. ಅತ್ಯಂತ ಸೌಮ್ಯ ಸ್ವಭಾವವುಳ್ಳ ಮತ್ತು ಪವಿತ್ರ ಪಾದ್ರಿಯು ಕೂಡ ಈ ಬೋಧನೆಯನ್ನು ಅನುಸರಿಸಲು ಸಾಧ್ಯವಿಲ್ಲ. ಈ ಇಂಜೀಲಿನ ಬೋಧನೆಯ ಪ್ರಾಯೋಗಿಕ ಪುರಾವೆಯನ್ನು ಪಡೆಯಲು ಯಾರಾದರೂ ಪಾದ್ರಿಯ ಮುಖದ ಮೇಲೆ ಕಪಾಳಮೋಕ್ಷ ಮಾಡಿದರೆ, ಅವನು ಇನ್ನೊಂದು ಕೆನ್ನೆಯನ್ನು ತಿರುಗಿಸುವ ಬದಲು ಪೊಲೀಸರ ಬಳಿ ಓಡಿಹೋಗಿ ಅವನನ್ನು ಅಧಿಕಾರಿಗಳಿಗೆ ಒಪ್ಪಿಸುತ್ತಾನೆ.

ಇದರಿಂದ ಇಂಜೀಲ್‌ನ ಬೋಧನೆಗಳನ್ನು ಅಮಾನತುಗೊಳಿಸಲಾಗಿದೆ ಮತ್ತು ಪವಿತ್ರ ಖುರ್‌ಆನ್ ಅನುಸರಿಸಲಾಗುತ್ತಿದೆ ಎಂಬುದು ಸ್ಪಷ್ಟವಾಗಿದೆ. ಬಾರ್ಲಿ ರೊಟ್ಟಿಯ ತುಂಡನ್ನು ಹೊಂದಿರುವ ಬಡ ಮತ್ತು ನಿರ್ಗತಿಕ ಮುದುಕ ಕೂಡ ಆ ತುಂಡಿನ ಒಂದು ಭಾಗವನ್ನು ನೀಡಿ **ಮಿಮ್ಮಾ ರಝುಕ್ನಾಹುಮ್** ಅನ್ನು ಪ್ರವೇಶಿಸಬಹುದು, ಆದರೆ ಇಂಜೀಲಿನ ಕಪಾಳಮೋಕ್ಷದ ನಂತರ ಇನ್ನೊಂದು ಕೆನ್ನೆಯನ್ನು ತೋರಿಸುವ ಬೋಧನೆಯಲ್ಲಿ ಪವಿತ್ರ ಪಾದ್ರಿಯೂ ಕೂಡ ಸೇರಲು ಸಾಧ್ಯವಿಲ್ಲ.

ಇಂಜೀಲ್ ಈ ಅಂಶದಲ್ಲಿ ಎಷ್ಟು ಕುಸಿದಿದೆ ಎಂದು ಸಾಬೀತಾಗಿದೆ ಎಂದರೆ ಸ್ವತಃ ಈಸ ಮಸೀಹರು ಸಹ ಅದನ್ನು ಸಂಪೂರ್ಣವಾಗಿ ಅನುಸರಿಸಲು ಸಾಧ್ಯವಿಲ್ಲ. ಅವರು ಸ್ವತಃ ಪ್ರಸ್ತುತಪಡಿಸಿದ ಬೋಧನೆಯು ಪ್ರಾಯೋಗಿಕ ಪರಿಭಾಷೆಯಲ್ಲಿ ಅವರು ಅರ್ಥಮಾಡಿಕೊಂಡಿದ್ದಾರೆ ಎಂದು ಸಾಬೀತುಪಡಿಸಿದರು, ಇಲ್ಲದಿದ್ದರೆ ಅವರು ಸೆರೆಹಿಡಿಯುವ ಮೊದಲು ತಮ್ಮನ್ನು ತಾವು ಸ್ವತಃ ಶತ್ರುಗಳಿಗೆ ಅರ್ಪಿಸಬೇಕಾಗಿತ್ತು ಮತ್ತು ಪ್ರಾರ್ಥಿಸುವ ಮತ್ತು ಆತಂಕವನ್ನು ತೋರಿಸುವ ಅಗತ್ಯತೆ ಏನಾಗಿತ್ತು?

**(ಮಲ್‌ಫೂಝಾತ್, ಸಂಪುಟ-1, ಪುಟ-395, ಪ್ರಕಟಿತ ಖಾದಿಯಾನ್ 2018)**

**ನ್ಯಾಯ ಎಂದರೆ ಸಮಾನತೆ ಎಂದರ್ಥ, ಅಂದರೆ ಒಬ್ಬ ವ್ಯಕ್ತಿಯು ತನ್ನನ್ನು ಹೇಗೆ ನಡೆಸಿಕೊಳ್ಳುತ್ತಾನೋ ಹಾಗೆಯೇ ಇತರರನ್ನು ನಡೆಸಿಕೊಳ್ಳಬೇಕು**
**ಸರ್ವಶಕ್ತನಾದ ಅಲ್ಲಾಹನಿಗೆ ನ್ಯಾಯ ಸಲ್ಲಿಸುವುದು ಎಂದರೆ ಅವನು ತನ್ನ ಅಲಾಹನ ಹಕ್ಕುಗಳನ್ನು ಅಲ್ಲಾಹನ ಹೊರತಾಗಿ ಇತರರಿಗೆ ನೀಡಬಾರದು ಮತ್ತು ಶಿರ್ಕ್‌ನಲ್ಲಿ ಭಾಗಿಯಾಗಬಾರದು.**
**ಇಹ್ಸಾನ್ (ದಯೆ) ಎಂದರೆ ಇತರರು ನಮ್ಮನ್ನು ಹೇಗೆ ನಡೆಸಿಕೊಳ್ಳುತ್ತಾರೆ ಎಂಬುದನ್ನು ನೋಡುವುದಲ್ಲ**
**ಬದಲಿಗೆ, ಅವರು ನಮ್ಮೊಂದಿಗೆ ಕೆಟ್ಟದಾಗಿ ವರ್ತಿಸಿದರೂ, ನಾವು ಅವರೊಂದಿಗೆ ಉತ್ತಮವಾಗಿ ನಡೆಸಿಕೊಳ್ಳಬೇಕು**
**ಇತಾಇಝಿಲ್ ಖುರ್‌ಬಾ ಎಂದರೆ ಮನುಕುಲವನ್ನು ಒಬ್ಬ ಸಂಬಂಧಿ ಇನ್ನೊಬ್ಬ ಸಂಬಂಧಿಯನ್ನು ಪರಿಗಣಿಸುವಂತೆ ಪರಿಗಣಿಸುವುದಾಗಿದೆ.**

ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಸೂರಃ ನಹಲ್ ಆಯತ್ 91 **ಇನ್ನಲ್ಲಾಹ ಯಅ್‌ಮುರು ಬಿಲ್ ಅದ್ಲಿ ವಲ್ ಇಹ್ಸಾನಿ ವಇತಾಇಝಿಲ್ ಖುರ್ಬಾ ವ ಯನ್‌ಹಾ ಅನಿಲ್ ಫಹ್‌ಶಾಇ ವಲ್‌ಮುನ್‌ಕರಿ ವಲ್‌ಬಗ್‌ಯಿ ಯಇಝುಕುಮ್ ಲಅಲ್ಲಕುಮ್ ತಝಕ್ಕರೂನ್** ನ ವ್ಯಾಖ್ಯಾನದಲ್ಲಿ ಹೇಳುತ್ತಾರೆ:

ನೋಡಿ ಆಯತ್ ಎಷ್ಟು ಚಿಕ್ಕದಾಗಿದೆ, ಆದರೆ ಅದರಲ್ಲಿ ಪೂರ್ಣಗೊಳಿಸುವಿಕೆಯ (ನಿರಾಕರಣೆ ಮತ್ತು ದೃಢೀಕರಣ) ಎರಡೂ ಅಂಶಗಳನ್ನು ಉತ್ತಮ ಮತ್ತು ಆಕರ್ಷಕವಾದ ರೀತಿಯಲ್ಲಿ

*(ಪುಟ ಸಂಖ್ಯೆ-09 ರಲ್ಲಿ ಮುಂದುವರಿಸಲಾಗಿದೆ)*

لَا اِلٰهَ اِلَّا اللّٰهُ مُحَمَّدٌ رَّسُوْلُ اللّٰهِ

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرٌّ مَا فِي الْعَالَمِ ۞ شَرَّ السُّمُوْمِ عَدَاوَةُ الصُّلَحَاءِ

**"ಇಜಾಝಿಯ" ಖಸೀದದ ಎದುರು ಬೇರೆ ಗ್ರಂಥ ಬರೆದು ತೋರಿಸಿದರೆ ಮೌಲ್ವಿ ಸನಾವುಲ್ಲಾ ಅವರಿಗೆ ಹತ್ತು ಸಾವಿರನ ರೂಪಾಯಿಗಳ ಗೌರವಾನ್ವಿತ ಬಹುಮಾನ.**

**ಇದೊಂದು ಮಹೋನ್ನತವಾದ ದೃಷ್ಟಾಂತವಾಗಿದೆ. ಆದುದರಿಂದ ನಾವು ಈ ದೃಷ್ಟಾಂತವನ್ನು ಹತ್ತು ಸಾವಿರ ರೂಪಾಯಿಗಳ ಬಹುಮಾನದೊಂದಿಗೆ ಮೌಲ್ವಿ ಸನಾವುಲ್ಲಾ ಮತ್ತು ಅವರ ಸಹಾಯಕರುಗಳ ಮುಂದೆ ಪ್ರಸ್ತುತಪಡಿಸುತ್ತಿದ್ದೇವೆ.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಈ ಗೌರವಾನ್ವಿತ ಬಹುಮಾನದ ಪಂಥಾಹ್ವಾನ ನಾವು ಅವರ ಗ್ರಂಥ "ಇಜಾಝ್ ಅಹ್ಮದಿ ಅನುಬಂಧ ನುಝೂಲುಲ್ ಮಸೀಹ್" ರೂಹಾನಿ ಖಝಾಈನ್ ಸಂಪುಟ-19 ರಿಂದ ಪ್ರಸ್ತುತಪಡಿಸುತ್ತಿದ್ದೇವೆ. ಹಿಂದಿನ ಸಂಚಿಕೆಯಲ್ಲಿ ನಾವು ಈ ಸವಾಲಿನ ಹಿನ್ನಲೆ ಮತ್ತು ಆ ಬಗ್ಗೆ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಸವಾಲು ಮತ್ತು ಅವರ ಅಧ್ಯಾಪನೆಗಳನ್ನು ಪ್ರಸ್ತುತಪಡಿಸಿದ್ದೇವೆ. ಈ ಸಂಚಿಕೆಯಲ್ಲಿ ನಾವು ಅದೇ ಸವಾಲಿನ ಬಗ್ಗೆ ಹಝ್ರತ್ ಮಸೀಹ್ ಮೌಊದ್(ಅ) ರವರ ಕೆಲವು ಅಧ್ಯಾಪನೆಗಳನ್ನು ಪ್ರಸ್ತುತಪಡಿಸುವೆವು.

ಅರಬಿ ಭಾಷೆಯ ನುಡಿಗಟ್ಟಿದೆ. **"ಇಝಾ ಲಮ್ ತಸ್ತಹ್‌ಈ ಫಫ್‌ಅಲ್ ಮಾಶೀತ"** ಅಂದರೆ ನಿನಗೆ ಮಾನ ಮರ್ಯಾದೆ ಇಲ್ಲದಿದ್ದರೆ ಏನಾದರೂ ಮಾಡು ಒಬ್ಬ ಮರ್ಯಾದಸ್ತ ಮನುಷ್ಯನು ವಿವೇಕದಿಂದ ಮಾತನಾಡುತ್ತಾನೆ ಮತ್ತು ವಿಚಾರ ಮಾಡಿ ಹೆಜ್ಜೆ ಇಡುತ್ತಾನೆ. ಆದರೆ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ವಿರೋಧದಲ್ಲಿ ಮೌಲ್ವಿಗಳು ಎಲ್ಲ ಮಿತಿಗಳನ್ನು ಮೀರಿದ್ದಾರೆ. ಮುಹಮ್ಮದ್ ಬಕ್ಷ್ ಝುಂಗಿ ಹೆಸರಿನಿಂದ ಪ್ರಸಿದ್ಧ ನಾಗಿದ್ದ ವ್ಯಕ್ತಿ ಹಝ್ರತ್ ಮಸೀಹ್ ಮೌಊದ್(ಅ) ರವರ ಕಡು ವೈರಿಯಾಗಿದ್ದನು. ಬಯ್ಗುಳಗಳಿಂದ ತುಂಬಿದ ಜಾಹೀರಾತುಗಳನ್ನು ಬರೆದು ಪ್ರಕಟಪಡಿಸುತ್ತಿದ್ದ ಮತ್ತು ಸುಳ್ಳು ಹೇಳುವುದರಲ್ಲಿ ಪ್ರಥಮ ದರ್ಜೆ ಪಡೆದಿದ್ದನು. ಲಾಹೋರ್ ನಿವಾಸಿಯಾಗಿದ್ದ. ಅವನೂ ಸಹ ಲಜ್ಜೆಗೆಟ್ಟು ಹೇಳಿದನು. ಹಝ್ರತ್ ಮಸೀಹ್ ಮೌಊದ್(ಅ) ರವರ ಯಾವ ಭವಿಷ್ಯವಾಣಿಯೂ ಪೂರ್ಣಗೊಂಡಿಲ್ಲ. ಇಜಾಝ್ ಅಹ್ಮದಿ ಬಗ್ಗೆ ಹೇಳಿದರು. ಐದು ದಿನಗಳಲ್ಲಿ ಪೂರ್ಣಗೊಳಿಸಿದ ದಾವೆ ತಪ್ಪಾಗಿದೆ. ಅದರ ರಚನೆ ಕವನ ಬರಹ ಮೊದಲೇ ಎಲ್ಲ ಸಿದ್ಧಗೊಂಡಿತ್ತು. ನಂತರ ಕೇವಲ ಕಾಲುಭಾಗ ಕೆಲಸ ಉಳಿದಿತ್ತು. ಅದನ್ನು ಸೇರಿಸಿ ಪೂರ್ಣಗೊಳಿಸಿದ್ದಾರೆ. ಮಲ್ಫೂಝಾತಿನಲ್ಲಿ ಬರೆಯಲಾಗಿದೆ.

28 ನವೆಂಬರ್ 1902 ಶುಕ್ರವಾರ ದಿನ ಮಗ್ರಿಬ್ ನಮಾಝ್ ನಂತರ ಹಝ್ರತ್ ಅಖ್‌ದಸ್ ಮಸೀದಿಯ ಒಂದು ಬದಿಗೆಸರಿದರು. ಜಾಫರ್ ಝುಂಗಿ ತನ್ನ ಪತ್ರಿಕೆಯಲ್ಲಿ ಬರೆದಿರುವ ವಿವರ ತಪ್ಪಾಗಿದೆ. ಅದೇನೆಂದರೆ ಇಜಾಝ್ ಅಹ್ಮದಿ ಐದು ದಿನಗಳಲ್ಲಿ ಸಿದ್ಧಗೊಂಡಿದೆ ಎಂದು, ಬದಲು ಅದರ ವಿಷಯ ಒಂದು ದೀರ್ಘ ಸಮಯದಿಂದ ಸಿದ್ಧಗೊಳ್ಳುತ್ತಿತ್ತು. ಕೇವಲ ಕಾಲು ಭಾಗದಷ್ಟು ಘಟನೆಗಳನ್ನು ಈ ದಿನಗಳಲ್ಲಿ ರಚಿಸಲಾಗಿದೆ. ಈ ಶುದ್ಧ ಸುಳ್ಳಿನ ಮೇಲೆ ಹಝ್ರತ್(ಅ) ಅವರು ಮುಗುಳ್ನಕ್ಕರು ಮತ್ತು ಆಶ್ಚರ್ಯಪಟ್ಟು ಹೇಳಿದರು ಈ ಜನರಿಗೆ ಅಷ್ಟೊಂದು ಸುಳ್ಳು ಹೇಳಲು ಹೇಗೆ ಧೈರ್ಯವಾಗುತ್ತದೆ? ಎಲ್ಲಾ ವಿಚಾರಗಳಿಗೆ ಒಂದು ಸಮಯ ಎಂಬುದು ಇರುತ್ತದೆ. ಎಲ್ಲಿಯತನಕ ಅಲ್ಲಾಹನು ಅವರಿಗೆ ಮುಂಬರಲು ಸಮಯ ನೀಡುವುದಿಲ್ಲ. ನಾವು ಸಹ ಮುಂದಾಗುವುದಿಲ್ಲ.
(ಮಲ್ಫೂಝಾತ್, ನಂಪುಟ-2, ಪುಟ-544 ಮುದ್ರಣ 2003 ಖಾದಿಯಾನ್)

ಮುದ್ ಭೂಮಿಯ ವಿನಾಶದ ಭವಿಷ್ಯವಾಣಿ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು ತಮ್ಮ ಖಸೀದದಲ್ಲಿ ಮುದ್ ಭೂಮಿಯ ವಿನಾಶದ ಭವಿಷ್ಯವಾಣಿಯನ್ನು ಪ್ರಸ್ತಾಪಿಸಿದ್ದರು, ಆರು ತಿಂಗಳ ಕಾಲ ನಂತರ ಪ್ಲೇಗ್ ಸಾಂಕ್ರಮಿಕ ರೋಗವು ಮುದ್ ಅನ್ನು ಅನ್ನು ಆವರಿಸಿತು. ಭವಿಷ್ಯವಾಣಿಯ ಪದಗಳು ಹೀಗಿವೆ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು ಪದ್ಯದ ರೂಪದಲ್ಲಿ ಹೀಗೆ ವಿವರಿಸಿದ್ದಾರೆ:

**ಅರಾ ಅರ್‌ಝು ಮಿದ್ದಿನ್ ಖದ್ ಉರೀದ ತಬಾರುಹಾ**
**ವಗಾದರಹುಮ್ ರಬ್ಬಿ ಕಗುಸ್‌ನಿನ್ ತುಜಿಝ್ಝುರು**

ಅಂದರೆ: ನಾನು ಮುದ್ ಭೂಮಿಯ ವಿನಾಶವನ್ನು ಸಮೀಪದಲ್ಲಿ ನೋಡುತ್ತಿದ್ದೇನೆ. ನನ್ನ ದೇವನು ಅದರ ಸ್ಥಿತಿ ಮುರಿದು ಬಿದ್ದ ಮರದ ಹಾಗೆ ಮಾಡಿರುವನು.

ಹಝ್ರತ್ ಮೌಲಾನಾ ಜಲಾಲುದ್ದೀನ್ ಶಮ್ಸ್ ಸಾಹಿಬ್(ರ) ಬರೆಯುತ್ತಾರೆ:

"ಮದ್ ಸ್ಥಳದಲ್ಲಿ ಚರ್ಚೆ ಏರ್ಪಟ್ಟಿತ್ತು. ಮತ್ತು ಅಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ಅವರಿಗೆ ಬಯ್ಯುಗಳನ್ನು ಹಾಕಲಾಗಿತ್ತು. ಧಿಕ್ಕರಿಸಲಾಗಿತ್ತು. ಮತ್ತು ಅಪಹಾಸ್ಯಕ್ಕೆ ಗುರಿ ಮಾಡಲಾಗಿತ್ತು. ಚರ್ಚೆ ಕಳೆದು ಐದು ಆರು ತಿಂಗಳ ನಂತರ ಅಲ್ಲಿ ಪ್ಲೇಗ್ ಮಹಾಮಾರಿ ಬಂತು ಮತ್ತು ಅಂದಾಜು ಎರಡು ಎರಡೂವರೆ ಸಾವಿರ ಜನಸಂಖ್ಯೆಯಲ್ಲಿ ಒಂದೂನೂರ ಇಪ್ಪತ್ತು ಜನರು ಪ್ಲೇಗ್ ಮಹಾಮಾರಿಗೆ ಗುರಿಯಾದರು. ಆ ಊರಿನ ಮಹಿಳೆಯರು ಮುಲ್ಲಾಗಳೆದರು ಕೋಪಕಾರಿದರು. ಅವರು ಮೌಲ್ವಿ ಸನಾವುಲ್ಲಾ ಮುಂತಾದವರನ್ನು ಕರೆದು ಮಿರ್ಝಾ ಸಾಹೇಬರಿಗೆ ಕಠಿಣವಾದ ಮಾತುಗಳನ್ನು ಆಡಿದ ಪರಿಣಾಮವೆ ಈ ಮಹಾಮಾರಿ ಹರಡಿದೆ ಎಂದರು. (ಅಲ್-ಹಕಮ್ 17 ಮೇ 1903) ಮತ್ತು ಆ ಬಗ್ಗೆ ಖಸೀದದಲ್ಲಿ ಹಝ್ರತ್ ಅಖದಸ್(ಅ) ಈ ಭವಿಷ್ಯವಾಣಿ ನುಡಿದಿದ್ದರು. (ತಾರುಫ್ ಕಿತಾಬ್ ಇಜಾಝ್ ಅಹ್ಮದಿ ಅನುಬಂಧ ನುಝೂಲುಲ್ ಮಸೀಹ್)

ಮೌಲ್ವಿ ಸನಾವುಲ್ಲಾ ಮತ್ತು ಅವರ ಎಲ್ಲ ಮೌಲ್ವಿಗಳು ಖಂಡಿತವಾಗಿಯೂ ಇಂತಹ ಖಸೀದ ಬರೆಯಲಾರರು. ಅಲ್ಲಾಹನು ಅವರ ಲೇಖನಿಗಳನ್ನು ಮುರಿದು ಹಾಕುವನು ಮತ್ತು ಅವರ ಹೃದಯಗಳನ್ನು ಮಂದಗೊಳಿಸುವನು ಎಂಬ ಈ ಭವಿಷ್ಯವಾಣಿಯೂ ಸಹ ಪೂರ್ತಿಯಾಯಿತು.

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ನಿಚ್ಚಳವಾಗಿ ಈ ಭವಿಷ್ಯವಾಣಿ ನುಡಿದಿದ್ದರು. ಮೌಲ್ವಿ ಸನಾವುಲ್ಲಾ ಅಮೃತ್ಸರಿ ಮತ್ತು ಅವರ ಎಲ್ಲ ಮೌಲ್ವಿಗಳು ಇಂತಹ ಖಸೀದ ರಚಿಸಲು ಸಾಧ್ಯವಿಲ್ಲ. ಏಕೆಂದರೆ ಅಲ್ಲಾಹನು ಅವರ ಲೇಖನಿಗಳನ್ನು ಮುರಿದು ಹಾಕುವನು ಮತ್ತು ಅವರ ಹೃದಯಗಳನ್ನು ಮಂದಗೊಳಿಸುವನು. ಮತ್ತು ಅವರು ತನ್ನ ಖಸೀದದಲ್ಲಿ ಹೇಳಿದರು:

**ಫಇನ್‌ಅಕು ಕಝ್ಝಾಬನ್ ಫಯಅ್‌ತಿ ಬಿಮಿಸ್ಲಿಹಾ**
**ವಇನ್‌ಅಕು ಮಿನ್ ರಬ್ಬಿ ಫಯುಗ್‌ಶಾ ವ ಯುಸ್‌ಬರು**

ಅಂದರೆ ನಾನು ಸುಳ್ಳುವಾದಿಯಾಗಿದ್ದರೆ ಸನಾವುಲ್ಲಾ ಇಂತಹ ಖಸೀದ ರಚಿಸುವನು. ನಾನು ಅಲ್ಲಾಹನ ಕಡೆಯಿಂದ ಬಂದವನಾದರೆ ಅವನ ಬುದ್ಧಿಯ ಮೇಲೆ ಮಂಕುಬೀಸುವುದು ಮತ್ತು ತಡೆಯಲ್ಪಡುವನು.

ಮೌಲ್ವಿ ಸನಾವುಲ್ಲಾ ಮೌನಧಾರಣೆ ಮಾಡಿ ಈ ಭವಿಷ್ಯವಾಣಿಯನ್ನು ಪೂರ್ತಿಗೊಳಿಸಿದ್ದಾನೆ. ಅಲ್ಲಾಹನು ಅವನ ಲೇಖನಿ ಮುರಿದುಬಿಟ್ಟನು ಮತ್ತು ಅವನ ಹೃದಯವನ್ನು ಮಂದಗೊಳಿಸಿದನು. ಅವರು ಇಂತಹ ಖಸೀದ ಬರೆಯಲು ಸಾಧ್ಯವು ಇರಲಿಲ್ಲ. ಏಕೆಂದರೆ ವಿದ್ಯೆ ಪ್ರಕಾಶದಿಂದ ಮತ್ತು ಮಾರ್ಗದರ್ಶನ ಪ್ರಕಾಶದಿಂದ ಯಾವ ಸಂಬಂಧವು ಇರಲಿಲ್ಲ. ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು.

**ವಮಾ ಮಸ್ಸಹು ನೂರುಮ್ಮಿನಲ್ ಇಲ್ಮಿ ವಲ್‌ಹುದಾ**
**ಫಯಾ ಅಜಬಮ್ ಮಿನ್ ಬಖ್ತಿನ್ ಯೂಸ್‌ತನ್‌ಸಿರು**

ಅಂದಹಾಗೆ ಸನಾವುಲ್ಲನಿಗೆ ಜ್ಞಾನ ಮತ್ತು ಮಾರ್ಗದರ್ಶನದಿಂದ ಕೊಂಚವು ಸಂಬಂಧವಿರಲಿಲ್ಲ. ಆದುದರಿಂದ ಆ ಸೊಳ್ಳೆಯ ಮೇಲೆ ಆಶ್ಚರ್ಯವಿದೆ. ಅವನು ಕರ್‌ಗಸ್ ಆಗ ಬಯಸುತ್ತಾನೆ.

ನಾವು ಹಿಂದಿನ ಸಂಚಿಕೆಯಲ್ಲಿ ಹೇಳಿದಂತೆ ಸನಾವುಲ್ಲ ಮೌನಧಾರಣೆ ಮಾಡಿದ್ದರಿಂದ "ತಿರ್‌ಯಾಖುಲ್ ಖುಲೂಬ್" ನ ಭವಿಷ್ಯವಾಣಿ ಪೂರ್ಣ ವೈಭವಯುತ್ತವಾಗಿ ಪೂರ್ಣಗೊಂಡಿದೆ. ಹಝ್ರತ್ ಮಸೀಹ್ ಮೌಊದ್(ಅ) ಅಲ್ಲಾಹನೊಂದಿಗೆ ಅತ್ಯಂತ ದುಃಖತಪ್ತನಾಗಿ ಒಂದು ದೃಷ್ಟಾಂತ ಬಯಸಿದ್ದರು ಮತ್ತು ಆ ದೃಷ್ಟಾಂತದ ಬಗ್ಗೆ ಹೇಳಿದರು. ಇದು ಡಿಸೆಂಬರ್ 1902 ರವರೆಗೆ ಜಾಹೀರಾಗುವುದಾಗಿದೆ. ಅವರು ಹೇಳಿದರು ಸನಾವುಲ್ಲಾ ಅಮೃತ್ಸರಿ ಈ ಖಸೀದದ ಮಾದರಿ ರಚಿಸಲಾರರು. ಆಗ ಅವರ ಕಡೆಯಿಂದ ಈ ದೃಷ್ಟಾಂತ ಪೂರ್ಣಗೊಳ್ಳುವುದು. ಹಾಗೆಯೇ

*(ಪುಟ 09 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ನೀವು ನಿಮ್ಮ ಭಗವಂತನಿಗೆ ವಿಧೇಯರಾಗಿರಬೇಕು, ನಿಮ್ಮ ಹಿರಿಯರಿಗೆ ಅವಿಧೇಯರಾಗಬಾರದು ಮತ್ತು ಅಲ್ಲಾಹನ ಸಂತೋಷಕ್ಕಾಗಿ ನಿಮ್ಮ ಉದ್ದೇಶಗಳನ್ನು ಶುದ್ಧವಾಗಿಟ್ಟುಕೊಳ್ಳಬೇಕು.**

**ಅಲ್ಲಾಹನ ವರದಾನಗಳು ಬಹಳಷ್ಟು ಇವೆ. ನಮ್ಮ ಸತ್ಕರ್ಮಗಳು ಅದಕ್ಕೆ ಬದಲಿಯಾಗದು. ಅಲ್ಲಾಹನು ನಿಮಗೆ ಔದಾರ್ಯ ಮಾಡಿದನು ಮತ್ತು ಏಕದೇವ ವಿಶ್ವಾಸದಲ್ಲಿ ನಿಮ್ಮನ್ನು ಒಟ್ಟುಸೇರಿಸಿದನು ಎಂಬುದಕ್ಕೆ ಅವನನ್ನು ಬಹಳವಾಗಿ ಸ್ತುತಿಗಾನ ಮಾಡಿರಿ...**

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ್, ಸಿದ್ದೀಖೆ ಅಕ್ಬರ್ ಹಝ್ರ‌ತ್ ಅಬೂಬಕರ್ ಸಿದ್ದೀಖ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

**ನಸೀರ್ ಅಹ್ಮದ್ ಸಾಹಿಬ್, ಶಹೀದ್ ಇಬ್ನ್ ಅಬ್ದುಲ್ ಘನಿ ಸಾಹಿಬ್ (ರಬ್ವಾ) ಹುತಾತ್ಮರಾದ ನಂತರ ಅವರ ಸದ್ಗುಣಗಳ ಪ್ರಸ್ತಾವನೆ ಹಾಗೂ ನಮಾಝೆ ಜನಾಝ ಗಾಯಿಬ್ ನಿರ್ವಹಣೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **19-08-2022** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُولُهٗ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ - بِسْمِ اللّٰهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعَالَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಬದರೀ ಸಹಾಬಿಯರ ಪ್ರಸ್ತಾಪದಲ್ಲಿ ಹಝ್ರ‌ತ್ ಅಬೂಬಕರ್(ರ)ರ ಖಿಲಾಫತ್ ಕಾಲಘಟ್ಟದಲ್ಲಿ ನಡೆದ ಘಟನೆಗಳ ಪರಂಪರೆಯಲ್ಲಿ ಇಂದು ನಾನು ಸಿರಿಯದ ಕಡೆ ನಡೆದ ಕಾರ್ಯಾಚರಣೆಗಳ ಬಗ್ಗೆ ಹೇಳುವೆನು. ಹಝ್ರ‌ತ್ ಅಬೂಬಕರ್(ರ) ದಂಗೆಗಾರರಾದ ಧರ್ಮತ್ಯಾಗಿಗಳನ್ನು ದಮನಿಸಿದ ನಂತರ ಅರೇಬಿಯ ಸುದೃಢಗೊಂಡಾಗ ಹೊರಗಿನಿಂದ ದಾಳಿ ನಡೆಸುವ ವಿರೋಧಿಗಳಲ್ಲಿ ಒಂದಾದ ರೋಮ್ ನಿವಾಸಿಗಳ ವಿರುದ್ಧ ಯುದ್ಧ ಮಾಡಲು ಯೋಚಿಸಿದರು. ಆದರೆ ಅದರ ಬಗ್ಗೆ ಯಾರಿಗೂ ತಿಳಿಸಲಿಲ್ಲ. ಈ ಜನರು ದ್ರೋಹಿಗಳಾದ ಸಮುದಾಯವಾಗಿತ್ತು. ಅವರು ಮುಸ್ಲಿಮರಿಗೆ ಕಿರುಕುಳ ನೀಡುತ್ತಿದ್ದರು. ಆಧುನಿಕ ಕಾಲದಲ್ಲಿ ಸಿರಿಯಾ ದೇಶದ ಸರ್ಕಾರವನ್ನು ರೋಮನ್ ಸಾಮ್ರಾಜ್ಯ ಎಂದು ಕರೆಯಲಾಗುತ್ತದೆ. ಅಲ್ಲಿನ ರಾಜನನ್ನು ಖೈಸರೆ ರೂಮ್ ಎಂದು ಕರೆಯಲಾಗುತ್ತಿತ್ತು.

ಯುದ್ಧ ಮಾಡುವುದರ ಬಗ್ಗೆ ಆಲೋಚಿಸುತ್ತಿರುವಾಗಲೇ ಹಝ್ರ‌ತ್ ಶುರಹ್‌ಬೀಲ್ ಬಿನ್ ಹಸನ(ರ) ಹಝ್ರ‌ತ್ ಅಬೂಬಕರ್(ರ)ರ ಸನ್ನಿಧಿಯಲ್ಲಿ ಹಾಜರಾಗಿ ಹೀಗೆ ಹೇಳಿದರು: ಹೇ ಖ಼ಲೀಫತುರ್‌ರಸೂಲ್, ನೀವು ಸಿರಿಯದಲ್ಲಿ ಯುದ್ಧ ಕಾರ್ಯಾಚರಣೆ ನಡೆಸಲು ಯೋಚಿಸುತ್ತಿದ್ದೀರಾ? ಹಝ್ರ‌ತ್ ಅಬೂಬಕರ್(ರ) ಹೇಳಿದರು: ಹೌದು, ಯೋಚಿಸುತ್ತಿದ್ದೇನೆ. ಆದರೆ ಯಾರಿಗೂ ಇಲ್ಲಿಯ ತನಕ ತಿಳಿಸಿಲ್ಲ. ನೀವು ಈ ಪ್ರಶ್ನೆಯನ್ನು ಕೇಳಲು ಕಾರಣವೇನು? ಅವರು ಹೇಳಿದರು: ನಾನೊಂದು ಕನಸನ್ನು ಕಂಡಿದ್ದೇನೆ. ಕನಸಿನಲ್ಲಿ ನೀವು ನಿಮ್ಮ ಸಹಚರರೊಂದಿಗೆ ಕಷ್ಟದಾಯಕವಾದ ಒಂದು ಪರ್ವತದ ಮಾರ್ಗವಾಗಿ ಹೋಗುತ್ತಿದ್ದೀರಿ. ಅನಂತರ ನೀವು ಒಂದು ಉನ್ನತ ಪರ್ವತ ಶಿಖರವನ್ನು ಏರುತ್ತೀರಿ ಮತ್ತು ಜನರ ಕಡೆಗೆ ನೋಡುತ್ತೀರಿ. ನಿಮ್ಮ ಜೊತೆಗೆ ನಿಮ್ಮ ಸಹಚರರು ಇದ್ದರು. ಅನಂತರ ನೀವು ಆ ಶಿಖರದಿಂದ ಇಳಿದು ಒಂದು ಮೃದು ಮತ್ತು ಹಸುರಾದ ಮೈದಾನಕ್ಕೆ ಬರುತ್ತೀರಿ. ಅದರಲ್ಲಿ, ಕೃಷಿ, ಕಾರಂಜಿಗಳು, ಗ್ರಾಮಗಳು ಮತ್ತು ಕೋಟೆಗಳು ಇದ್ದುವು. ಮುಶ್ರಿಕರ ಮೇಲೆ ದಾಳಿ ನಡೆಸುವುದಾದರೆ ವಿಜಯ ಮತ್ತು ಯುದ್ಧ ಸಂಪತ್ತು ಲಭಿಸುವುದು ಎಂದು ನಾನು ಖಾತರಿ ಪಡಿಸುತ್ತೇನೆ ಎಂದು ನೀವು ಮುಸ್ಲಿಮರೊಡನೆ ಹೇಳುತ್ತೀರಿ. ಆಗ ಮುಸ್ಲಿಮರು ದಾಳಿ ನಡೆಸುವರು ಮತ್ತು ನಾನು ಕೂಡ ಧ್ವಜದೊಂದಿಗೆ ಸೈನ್ಯದಲ್ಲಿ ಭಾಗಿಯಾಗಿದ್ದೆ. ನಾನೊಂದು ಗ್ರಾಮಕ್ಕೆ ಹೋದಾಗ ಅಲ್ಲಿಯ ನಿವಾಸಿಗಳು ನನ್ನೊಡನೆ ಅಭಯ ಯಾಚಿಸಿದರು. ನಾನು ಅವರಿಗೆ ಅಭಯ ನೀಡಿದೆ. ಅನಂತರ ನಾನು ನಿಮ್ಮ ಬಳಿಗೆ ಮರಳಿ ಬಂದಾಗ ನೀವು ಒಂದು ದೊಡ್ಡದಾದ ಕೋಟೆಯ ತನಕ ತಲುಪಿದ್ದೀರಿ. ನಿಮಗೆ ವಿಜಯ ದಯಪಾಲಿಸಲಾಗಿತ್ತು. ಅವರು ನಿಮ್ಮೊಡನೆ ಸಂಧಾನವನ್ನು ಮಾಡಿಕೊಳ್ಳಲು ಬೇಡಿದರು. ಅನಂತರ ನಿಮಗಾಗಿ ಒಂದು ಆಸನವನ್ನು ಇರಿಸಲಾಯಿತು. ನೀವು ಅದರಲ್ಲಿ ಕುಳಿತುಕೊಳ್ಳುತ್ತೀರಿ. ಅಲ್ಲಾಹನು ನಿಮಗೆ ವಿಜಯವನ್ನು ದಯಪಾಲಿಸಿದ್ದಾನೆ ಮತ್ತು ನಿಮಗೆ ನೆರವು ನೀಡಿದ್ದಾನೆ. ಆದ್ದರಿಂದ ನೀವು ನಿಮ್ಮ ಪ್ರಭುವಿಗೆ ಕೃತಜ್ಞತೆ ಅರ್ಪಿಸಿರಿ ಮತ್ತು ಅವನಿಗೆ ವಿಧೇಯರಾಗಿರಿ ಎಂದು ಒಬ್ಬ ಹೇಳುವವನು ನಿಮ್ಮೊಡನೆ ಹೇಳುತ್ತಾನೆ. ಅನಂತರ ಆ ವ್ಯಕ್ತಿ **"ಇಧಾ಼ ಜಾಅ ನಸ್ರುರುಲ್ಲಾಹಿ ವಲ್ ಫತ್‌ಹ್; ವರಐತನ್ನಾಸ ಯದ್‌ಖು಼ಲೂನ ಫೀ ದೀನಿಲ್ಲಾಹಿ ಅಫ್‌ವಾಜ; ಫಸಬ್ಬಿಗ್ ಬಿಹಮ್‌ದಿ ರಬ್ಬಿಕ ವಸ್‌ತಗ಼್ಫಿರುಹು ಇನ್ನಹೂ ಕಾನ ತವ್ವಾಬ** ಎಂಬ ವಚನವನ್ನು ಓದಿದರು. ಎಂದರೆ, ಅಲ್ಲಾಹನ ಸಹಾಯ ಮತ್ತು ವಿಜಯ ಬಂದರೆ ಜನರು ಗುಂಪು ಗುಂಪಾಗಿ ಅಲ್ಲಾಹನ ದೀನಿನ ಕಡೆಗೆ ಬರುವುದಾಗಿ ನೀನು ಕಾಣುವಿ. ಆಗ ನೀನು ನಿನ್ನ ಪ್ರಭುವಿನ ಸ್ತುತಿಯೊಂದಿಗೆ ಅವನ ಪರಿಶುದ್ಧಿಯನ್ನು ಕೊಂಡಾಡು ಹಾಗು ಅವನಿಂದ ಕ್ಷಮಾಪಣೆ ಬೇಡು. ಖಂಡಿತವಾಗಿಯೂ ಅವನು ಬಹಳವಾಗಿ ಪಶ್ಚಾತ್ತಾಪ ಸ್ವೀಕಾರ ಮಾಡುವವನಾಗಿದ್ದಾನೆ. ಇದರ ನಂತರ ನನ್ನ ಕಣ್ಣುಗಳು ತೆರೆದುವು.

ದೀರ್ಘವಾದ ಕನಸಿನ ವಿವರಣೆಯನ್ನು ಆಲಿಸಿದ ನಂತರ ಹಝ್ರ‌ತ್ ಅಬೂಬಕರ್(ರ) ಹೇಳಿದರು: ನಿಮ್ಮ ಕಣ್ಣುಗಳು ತಂಪಾಗಲಿ. ನೀವು ಉತ್ತಮ ಕನಸನ್ನು ಕಂಡಿದ್ದೀರಿ ಮತ್ತು ಉತ್ತಮವೇ ಆಗುವುದು. **ಇನ್‌ಶಾ ಅಲ್ಲಾಹ್**. ನೀವು ಈ ಕನಸಿನಲ್ಲಿ ವಿಜಯದ ಸುವಾರ್ತೆ ಮತ್ತು ನನ್ನ ಮರಣದ ಬಗ್ಗೆ ತಿಳಿಸಿದ್ದೀರಿ. ಈ ಮಾತನ್ನು ಹೇಳುವಾಗ ಅವರಿಗೆ ಕಣ್ಣೀರು ಬಂತು. ಅದರ ನಂತರ ಹಝ್ರ‌ತ್ ಅಬೂಬಕರ್(ರ) ಹೇಳಿದರು: ಕಲ್ಲುಗಳ ಪ್ರದೇಶಗಳ ಮಾರ್ಗವಾಗಿ ಪರ್ವತದ ಶಿಖರಕ್ಕೆ ಹೋಗಿ ಅಲ್ಲಿಂದ ಕೆಳಗೆ ಇಣುಕಿ ಜನರನ್ನು ನೋಡುವುದರ ಅರ್ಥವೇನೆಂದರೆ, ನಮಗೆ ಆ ಸೈನ್ಯದಿಂದ ತೊಂದರೆ ಅನುಭವಿಸಬೇಕಾಗುವುದು ಮತ್ತು ಅವರ ಸೈನ್ಯಕ್ಕೆ ವಿಪತ್ತು ಬರುವುದು. ಅನಂತರ ನಮಗೆ ಸುದೃಢತೆ ಮತ್ತು ವಿಜಯ ಲಭಿಸುವುದು. ಪರ್ವತದ ಶಿಖರದಿಂದ ಇಳಿದು ಹಸುರು ಪ್ರದೇಶಕ್ಕೆ ಹೋಗುವುದರ ಅರ್ಥವೇನೆಂದರೆ, ನಾವು ಮೊದಲಿಗಿಂತ ಹೆಚ್ಚು ಸೌಲಭ್ಯವನ್ನು ಪಡೆಯುವೆವು. ನಮಗೆ ಮೊದಲಿಗಿಂತ ಹೆಚ್ಚು ಹಸುರಾದ ಪ್ರದೇಶ ಲಭಿಸುವುದು. ಶತ್ರುಗಳ ಮೇಲೆ ದಾಳಿ ನಡೆಸಲು ನಾನು ಆದೇಶ ನೀಡುವುದರ ಅರ್ಥವೇನೆಂದರೆ, ಮುಸ್ಲಿಮರನ್ನು ಮುಶ್ರಿಕರ ದೇಶಗಳಿಗೆ ಕಳುಹಿಸುವುದಾಗಿದೆ ಮತ್ತು ಯುದ್ಧ ಮಾಡಲು ಹುರಿದುಂಬಿಸುವುದಾಗಿದೆ. ನಿಮ್ಮ ಬಳಿ ಇದ್ದ ಧ್ವಜದ ಅರ್ಥವೇನೆಂದರೆ, ಈ ಪ್ರದೇಶವನ್ನು ವಿಜಯಿಸುವ ನೇತಾರರಲ್ಲಿ ನೀವು ಕೂಡ ಒಬ್ಬರಾಗುತ್ತೀರಿ. ಅಲ್ಲಾಹನು ನಮ್ಮ ಕೈಗಳಲ್ಲಿ ವಿಜಯ ನೀಡುವನು. ಆ ಕೋಟೆಯ ಅರ್ಥವೇನೆಂದರೆ, ಅಲ್ಲಾಹನು ನನಗೆ ವಿಜಯ ನೀಡುವ ಪ್ರದೇಶವಾಗಿದೆ. ಆಸನದ ಅರ್ಥವೇನೆಂದರೆ, ಅಲ್ಲಾಹನು ನನಗೆ ಗೌರವ ಮತ್ತು ಉನ್ನತ ಸ್ಥಾನವನ್ನು ದಯಪಾಲಿಸುವನು ಮತ್ತು ಮುಶ್ರಿಕರನ್ನು ಅಪಮಾನಿತಗೊಳಿಸುವನು ಎಂದಾಗಿದೆ. ನನಗೆ ಸೂರಃ ನಸ್ರ್ ಓದಿ ಹೇಳಿದ ವ್ಯಕ್ತಿಯ ಅರ್ಥವೇನೆಂದರೆ, ಅವನು ನನಗೆ ನನ್ನ ನಿಧನದ ವಾರ್ತೆಯನ್ನು ತಿಳಿಸಿದ್ದಾನೆ. ಇದೇ ಸೂರಃ ಹಝ್ರ‌ತ್ ಪೈಗಂಬರ್(ಸ)ರಿಗೆ ಅವತೀರ್ಣವಾದಾಗ ಅದರಲ್ಲಿ ಅವರ ನಿಧನದ ವಾರ್ತೆಯನ್ನು ನೀಡಲಾಗಿತ್ತು. (ಅಲ್‌ಇಕ್ತಿಫಾಬಿಮಾ ತಝುಮನ....... ಸಂಒಉಟ-2, ಭಾಗ-1, ಪುಟ-109-110, ಆಲಿಮುಲ್ ಕುತುಬ್ ಬೈರೂತ್) (ತಾರೀಖ್ ದಮಿಷ್ಕ್ ಅಲ್‌ಕಬೀರ್, ಸಂಪುಟ-1, ಭಾಗ-2, ಪುಟ-44, ಝಿಕರ್ ಎಹ್ತಮಾಮ್ ಅಬೂಬಕರ್) (ಮರ್ದಾನೆ ಅರಬ್, ಭಾಗ-1 ಅಲ್ಲಾಮ ಅಬ್ದುಸ್ಸತ್ತಾರೆ ಹಮ್ದಾನಿ, ಪುಟ-108-109, ಪ್ರಕಟಿತ 2013)

ಹೀಗೆ ಹಝ್ರತ್ ಅಬೂಬಕರ್(ರ) ಈ ಕನಸನ್ನು ಹೀಗೆ ವ್ಯಾಖ್ಯಾನಿಸಿದರು.

ಹೇಗಿದ್ದರೂ ಹಝ್ರತ್ ಅಬೂಬಕರ್(ರ) ಸಿರಿಯಗಾಗಿ ಸೈನ್ಯವನ್ನು ತಯಾರು ಮಾಡಲು ನಿರ್ಧರಿಸಿದಾಗ ಅವರು ಸಮಾಲೋಚನೆಗಾಗಿ ಹಝ್ರತ್ ಉಮರ್(ರ), ಹಝ್ರತ್ ಉಸ್ಮಾನ್(ರ), ಹಝ್ರತ್ ಅಲಿ(ರ), ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ), ಹಝ್ರತ್ ತಲ್‌ಹ(ರ), ಹಝ್ರತ್ ಝುಬೇರ್(ರ), ಹಝ್ರತ್ ಸಅದ್ ಬಿನ್ ವಖಾಸ್(ರ), ಹಝ್ರತ್ ಅಬೂಉಬೈದ ಬಿನ್ ಜರ್ರಾಹ್(ರ) ಮತ್ತು ಬದ್ರೀ ಸಹಾಬರಾದ ಮುಹಾಜಿರ್ ಹಾಗೂ ಅನ್ಸಾರರಲ್ಲಿ ಶ್ರೇಷ್ಠ ಸಹಾಬಿಯರನ್ನು ಮತ್ತು ಇತರ ಸಹಾಬಿಯರನ್ನು ಕರೆದರು. ಆ ಸಹಾಬಿಯರು ಹಝ್ರತ್ ಅಬೂಬಕರ್(ರ)ರ ಸನ್ನಿಧಿಯಲ್ಲಿ ಹಾಜರಾದಾಗ, ಅವರು ಹೇಳಿದರು: ಅಲ್ಲಾಹನ ವರದಾನಗಳು ಬಹಳಷ್ಟು ಇವೆ. ನಮ್ಮ ಸತ್ಕರ್ಮಗಳು ಅದಕ್ಕೆ ಬದಲಿಯಾಗದು. ಅಲ್ಲಾಹನು ನಿಮಗೆ ಔದಾರ್ಯ ಮಾಡಿದನು ಮತ್ತು ಏಕದೇವ ವಿಶ್ವಾಸದಲ್ಲಿ ನಿಮ್ಮನ್ನು ಒಟ್ಟುಸೇರಿಸಿದನು ಎಂಬುದಕ್ಕೆ ಅವನನ್ನು ಬಹಳವಾಗಿ ಸ್ತುತಿಗಾನ ಮಾಡಿರಿ...

ಇಂದು ಅರೇಬಿಯರು ಒಂದು ಸಮುದಾಯ ಮತ್ತು ಒಂದೇ ತಾಯಿತಂದೆಯರ ಮಕ್ಕಳಾಗಿರುವರು. ಅವರನ್ನು ರೋಮನರ ವಿರುದ್ಧ ಯುದ್ಧ ಮಾಡಲು ಸಿರಿಯಗೆ ಕಳುಹಿಸಬೇಕು ಎಂಬುದಾಗಿದೆ ನನ್ನ ಅಭಿಪ್ರಾಯ. ಅವರಲ್ಲಿ ವಧಿಸಲ್ಪಡುವರು ಹುತಾತ್ಮರು ಮತ್ತು ಜೀವಂತವಾಗಿ ಉಳಿಯುವವರು ಇಸ್ಲಾಂ ಧರ್ಮದ ಸಂರಕ್ಷಣೆ ಮಾಡುತ್ತಾ ಜೀವಿಸುವರು.

ಹಝ್ರತ್ ಉಮರ್ ಬಿನ್ ಖತ್ತಾಬ್(ರ) ಹೇಳಿದರು: ಅಲ್ಲಾಹನಾಣೆ, ಒಳಿತಿನ ಯಾವುದೇ ವಿಷಯದಲ್ಲಿ ನಾವು ನಿಮಗಿಂತ ಮುಂದಾಗಲು ಬಯಸಿದರೂ ನೀವು ಸದಾ ನಮಗಿಂತ ಮುಂದಾಗಿತ್ತೀರಿ.

ಅಲ್ಲಾಹನಾಣೆ, ನೀವು ಈಗ ಹೇಳಿದ ಇದೇ ಉದ್ದೇಶಕ್ಕಾಗಿ ನಾನು ನಿಮ್ಮನ್ನು ಭೇಟಿಯಾಗಲು ಬಯಸುತ್ತಿದ್ದೆ. ಖಂಡಿತವಾಗಿಯೂ ನಿಮ್ಮ ಅಭಿಪ್ರಾಯ ಸರಿಯಾಗಿದೆ ಮತ್ತು ಅಲ್ಲಾಹನು ನಿಮಗೆ ಸರಿಯಾದ ಮಾರ್ಗದ ಅರಿವು ದಯಪಾಲಿಸಿದ್ದಾನೆ.

ತದನಂತರ ಸಭೆಯಲ್ಲಿ ಉಪಸ್ಥಿತರಿದ್ದ ಹಝ್ರತ್ ಉಸ್ಮಾನ್(ರ), ಹಝ್ರತ್ ಅಲಿ(ರ), ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ), ಹಝ್ರತ್ ತಲ್‌ಹ(ರ), ಹಝ್ರತ್ ಝುಬೇರ್(ರ), ಹಝ್ರತ್ ಸಅದ್ ಬಿನ್ ವಖಾಸ್(ರ), ಹಝ್ರತ್ ಅಬೂಉಬೈದ ಬಿನ್ ಜರ್ರಾಹ್(ರ) ಮತ್ತು ಬದ್ರೀ ಸಹಾಬರಾದ ಮುಹಾಜಿರ್ ಹಾಗೂ ಅನ್ಸಾರರಲ್ಲಿ ಶ್ರೇಷ್ಠ ಸಹಾಬಿಯರು ಎಲ್ಲರೂ ಹಝ್ರತ್ ಅಬೂಬಕರ್(ರ)ರ ಅಭಿಪ್ರಾಯವನ್ನು ಬೆಂಬಲಿಸುತ್ತಾ ಹೀಗೆ ಹೇಳಿದರು: ನಾವು ನಿಮ್ಮ ಮಾತನ್ನು ಆಲಿಸುವೆವು ಮತ್ತು ಅನುಸರಿಸುವೆವು, ಅವಿಧೇಯತೆ ತೋರಿಸಲಾರೆವು ಮತ್ತು ನಿಮ್ಮ ಯೋಜನೆಗಾಗಿ ಸಿದ್ಧರಾಗುವೆವು. ತದನಂತರ ಹಝ್ರತ್ ಅಬೂಬಕರ್(ರ) ಅವರು ಜನರನ್ನು ಉದ್ದೇಶಿಸಲು ಪುನಃ ಎದ್ದುನಿಂತು, ಅರ್ಹನಾದ ಅಲ್ಲಾಹನ ಸ್ತುತಿಗಳನ್ನು ಪಠಿಸಿದರು ಮತ್ತು ಪವಿತ್ರ ಪ್ರವಾದಿ(ಸ)ರವರ ಮೇಲೆ ದರೂದ್ ಕಳುಹಿಸಿದರು. ಮತ್ತೆ ಅವರು ಹೇಳಿದರು: ಓ ಜನರೇ! ನಿಸ್ಸಂದೇಹವಾಗಿ, ನಿಮಗೆ ಇಸ್ಲಾಂ ಧರ್ಮದ ಅನುಗ್ರಹವನ್ನು ನೀಡುವ ಮೂಲಕ ಸರ್ವಶಕ್ತನಾದ ಅಲ್ಲಾಹನು ನಿಮಗೆ ಹೆಚ್ಚು ಒಲವು ತೋರಿದ್ದಾನೆ. ಜಿಹಾದ್ ಮೂಲಕ ನಿಮ್ಮನ್ನು ಗೌರವಿಸಿದ್ದಾನೆ. ಇಸ್ಲಾಂ ಧರ್ಮದ ಮೂಲಕ ನಿಮಗೆ ಇತರ ಧರ್ಮಗಳಿಗಿಂತ ಶ್ರೇಷ್ಠತೆಯನ್ನು ನೀಡಲಾಗಿದೆ. ಆದುದರಿಂದ ಅಲ್ಲಾಹನ ಸೇವಕರೇ! ಸಿರಿಯಾದಲ್ಲಿ ರೋಮನ್ನರೊಂದಿಗೆ ಯುದ್ಧಕ್ಕೆ ಸಿದ್ಧರಾಗಿ. ಈಗ ನಾನು ನಿಮ್ಮ ಗಣ್ಯರನ್ನು ನೇಮಿಸಿ ಅವರನ್ನು ನಿಮ್ಮ ಸೇನಾಧಿಪತಿಗಳನ್ನಾಗಿ ಮಾಡುತ್ತೇನೆ.

ನೀವು ನಿಮ್ಮ ಭಗವಂತನಿಗೆ ವಿಧೇಯರಾಗಿರಬೇಕು, ನಿಮ್ಮ ಹಿರಿಯರಿಗೆ ಅವಿಧೇಯರಾಗಬಾರದು ಮತ್ತು ಅಲ್ಲಾಹನ ಸಂತೋಷಕ್ಕಾಗಿ ನಿಮ್ಮ ಉದ್ದೇಶಗಳನ್ನು ಶುದ್ಧವಾಗಿಟ್ಟುಕೊಳ್ಳಬೇಕು. ನಿಮ್ಮ ನಡವಳಿಕೆ ಮತ್ತು ಪಾತ್ರವನ್ನು ಸುಧಾರಿಸಿಕೊಳ್ಳಿ ಮತ್ತು ಆಹಾರವನ್ನು ಸರಿಯಾಗಿ ಇಟ್ಟುಕೊಳ್ಳಿ. ಅಲ್ಲಾಹನು ಧರ್ಮನಿಷ್ಠರನ್ನು ಮತ್ತು ಪರೋಪಕಾರಿಗಳನ್ನು ಬೆಂಬಲಿಸುತ್ತಾನೆ.

ಹಝ್ರತ್ ಅಬೂಬಕರ್(ರ)ರ ಆದೇಶ ಪ್ರಕಾರ ಹಝ್ರತ್ ಬಿಲಾಲ್(ರ) ಹೀಗೆ ಘೋಷಿಸಿದರು: ಎಲೈ ಜನರೇ, ರೋಮಿನ ನಿಮ್ಮ ಶತ್ರುಗಳ ವಿರುದ್ಧ ಯುದ್ಧ ಮಾಡಲು ಸಿರಿಯದ ಕಡೆಗೆ ಹೊರಡಿರಿ ಮತ್ತು ಮುಸ್ಲಿಮರ ನೇತಾರ ಹಝ್ರತ್ ಖಾಲಿದ್ ಬಿನ್ ಸಈದ್(ರ) ಆಗಿರುವರು. (ಅಲ್‌ಇಕ್ತಿಫಾ ಬಿಮಾ ಯಝ್ಮುನ್ನ..... ಸಂಪುಟ–2, ಭಾಗ–1, ಪುಟ–110–114, ಆಲಿಮುಲ್ ಕುತುಬ್ ಬೈರೂತ್ 1997)

ಸಿರಿಯಾ ದೇಶದ ವಿಜಯದ ಸರಣಿಯಲ್ಲಿ, ಹಝ್ರತ್ ಅಬುಬಕರ್ ಸಿದ್ದೀಕ್(ರ) ಮೊಟ್ಟಮೊದಲು ಹಝ್ರತ್ ಖಾಲಿದ್ ಬಿನ್ ಸಯೀದ್(ರ) ಅವರನ್ನು ಕಳುಹಿಸಿದರು, ಒಂದು ವರದಿಯ ಪ್ರಕಾರ, ಹಝ್ರತ್ ಅಬುಬಕರ್(ರ) ಹಜ್ ನಿರ್ವಹಿಸಿದ ನಂತರ ಮದೀನಾಕ್ಕೆ ಹಿಂದಿರುಗಿದಾಗ, ಅವರು 13 ಹಿಜರಿಯಲ್ಲಿ ಹಜ್ರತ್ ಖಾಲಿದ್ ಬಿನ್ ಸಯೀದ್(ರ) ಅವರನ್ನು ಸಿರಿಯಾದ ಕಡೆಗೆ ಸೈನ್ಯದೊಂದಿಗೆ ಕಳುಹಿಸಿದರು, ಕೆಲವರು ಹೇಳುತ್ತಾರೆ: ಹಝ್ರತ್ ಅಬೂಬಕರ್(ರ) ಹಝ್ರತ್ ಖಾಲಿದ್ ಬಿನ್ ವಾಲಿದ್(ರ) ಅವರನ್ನು ಇರಾಕ್‌ಗೆ ಕಳುಹಿಸಿದ ಸಂದರ್ಭದಲ್ಲಿಯೇ ಅವರು ಹಝ್ರತ್ ಖಾಲಿದ್ ಬಿನ್ ಸಯೀದ್(ರ) ಅವರನ್ನು ಸಿರಿಯಾಕ್ಕೆ ಕಳುಹಿಸಿದರು ಎಂದು ಹೇಳುತ್ತಾರೆ. ಆದ್ದರಿಂದ, ಸಿರಿಯಾದ ವಿಜಯಕ್ಕಾಗಿ ಹಾರಿಸಿದ ಮೊದಲ ಧ್ವಜ ಹಝ್ರತ್ ಖಾಲಿದ್ ಬಿನ್ ಸಯೀದ್(ರ) ಅವರದ್ದಾಗಿತ್ತು.

ಇದಲ್ಲದೆ, ಹಝ್ರತ್ ಅಬೂಬಕರ್(ರ) ರವರು ಧರ್ಮಭ್ರಷ್ಟರ ವಿರುದ್ಧ ಹನ್ನೊಂದು ಸೈನ್ಯಗಳನ್ನು ಸಿದ್ಧಪಡಿಸಿ ಕಳುಹಿಸಿದಾಗ, ಆ ಸಮಯದಲ್ಲಿ ಅವರು ಹಝ್ರತ್ ಖಾಲಿದ್ ಬಿನ್ ಸಯೀದ್(ರ) ರವರಿಗೆ ಸಿರಿಯಾದ ಗಡಿಗಳನ್ನು ರಕ್ಷಿಸಲು ತೈಮಾಗೆ ಹೋಗುವಂತೆ ಆದೇಶಿಸಿದರು ಮತ್ತು ನಿಮ್ಮ ಸ್ಥಳದಿಂದ ಕದಲಬೇಡಿ ಎಂದು ಅವರಿಗೆ ಸೂಚನೆ ನೀಡಿದ್ದರು ಎಂದು ಇನ್ನೊಂದು ವರದಿಯಿಂದ ತಿಳಿದುಬಂದಿದೆ. ನಿಮ್ಮನ್ನು ಭೇಟಿಯಾಗಲು ಸುತ್ತಮುತ್ತಲಿನ ಜನರನ್ನು ಆಹ್ವಾನಿಸಲು ಮತ್ತು ಧರ್ಮಭ್ರಷ್ಟರಾಗದವರನ್ನು ಮಾತ್ರ ನೇಮಿಸಿಕೊಳ್ಳಲು ಮತ್ತು ನನ್ನಿಂದ ಇನ್ನೊಂದು ಆದೇಶ ಬರುವವರೆಗೆ ನಿಮ್ಮೊಂದಿಗೆ ಹೋರಾಡುವವರನ್ನು ಮಾತ್ರ ಹೋರಾಡಲು ಆದೇಶಿಸಿದರು. ತೈಮಾ ಸಿರಿಯಾ ಮತ್ತು ಮದೀನಾ ನಡುವಿನ ಪ್ರಸಿದ್ಧ ನಗರವಾಗಿದೆ.(ಅಲ್–ಕಾಮಿಲ್ ಫಿ ಅಲ್–ತಾರಿಖ್, ಸಂಪುಟ–2, ಪುಟ–252, ದಾರ್ ಅಲ್–ಕುತುಬ್ ಅಲ್–ಇಲಾಮಿಯಾ ಬೈರುತ್ 2006) (ತಾರೀಖ್ ಅತ್ತಬರಿ, ಸಂಪುಟ–2, ಪುಟ–332, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2012) (ಫರ್ಹಂಗ್ ಸೀರತ್, ಪುಟ–78, ಝುವಾರ ಅಕಾಡಮಿ ಕರಾಚಿ)

ಹಝ್ರತ್ ಅಬೂಬಕರ್(ರ) ರೋಮನರ ವಿರುದ್ಧ ಯುದ್ಧಕ್ಕಾಗಿ ಮದೀನ ನಿವಾಸಿಗಳಲ್ಲದೇ ಇತರ ಪ್ರದೇಶಗಳ ಮುಸ್ಲಿಮರನ್ನು ಕೂಡ ತಯಾರು ಮಾಡಲು ಆರಂಭಿಸಿದರು ಮತ್ತು ಯುದ್ಧದಲ್ಲಿ ಭಾಗವಹಿಸಿವಂತೆ ಅವರನ್ನು ಹುರಿದುಂಬಿಸಿದರು. ಇದೇ ಉದ್ದೇಶದಿಂದ ಹಝ್ರತ್ ಅಬೂಬಕರ್(ರ) ಯಮನ್ ನಿವಾಸಿಗಳ ಕಡೆಗೆ ಒಂದು ಪತ್ರವನ್ನು ಬರೆದರು, ಅದರ ಪಠ್ಯವು ಹೀಗಿದೆ: ಪ್ರವಾದಿ(ಸ)ರವರ ಖಲೀಫ ಅವರಿಂದ, ಯೆಮನ್ ಜನರಲ್ಲಿ ಪ್ರತಿಯೊಬ್ಬ ಮುಮಿನ್ ಮತ್ತು ಮುಸ್ಲಿಮರಿಗೆ ಇದು ಪಠಿಸಿದರು, ನಿಮಗೆ ಶಾಂತಿ ಸಿಗಲಿ ನಾನು ನಿಮ್ಮ ಮುಂದೆ ಅಲ್ಲಾಹನನ್ನು ಸ್ತುತಿಸುತ್ತೇನೆ, ಅವನ ಹೊರತಾಗಿ ಯಾರು ಆರಾಧನೆಗೆ ಅರ್ಹನಲ್ಲ. ಸರ್ವಶಕ್ತನಾದ ಅಲ್ಲಾಹನು ಮುಸ್ಲಿಮರ ಮೇಲೆ ಜಿಹಾದ್ ಅನ್ನು ಕಡ್ಡಾಯಗೊಳಿಸಿದ್ದಾನೆ ಮತ್ತು ಅದಕ್ಕಾಗಿ ಸ್ವಲ್ಪ ಅಥವಾ ಸಂಪೂರ್ಣ ಸಿದ್ಧತೆಯೊಂದಿಗೆ ಹೊರಹೋಗುವಂತೆ ಆದೇಶಿಸಿದ್ದಾನೆ. ಸರ್ವಶಕ್ತನಾದ ಅಲ್ಲಾಹನು ಹೇಳಿದನು: **ವಜಾಹಿದೂ ಬಿಅಮ್ವಾಲಿಕುಮ್ ವ ಅನ್‌ಫುಸಿಕುಮ್ ಫೀ ಸಬೀಲಿಲ್ಲಾಹಿ** ಅಂದರೆ ಅಲ್ಲಾಹನ ಮಾರ್ಗದಲ್ಲಿ ನಿಮ್ಮ ಸಂಪತ್ತು ಮತ್ತು ನಿಮ್ಮ ಜೀವನದಿಂದ ಹೋರಾಡಿ. ಆದ್ದರಿಂದ, ಜಿಹಾದ್ ಒಂದು ಕಡ್ಡಾಯ ಕರ್ತವ್ಯವಾಗಿದೆ ಮತ್ತು ಅದರ ಪ್ರತಿಫಲವು ಅಲ್ಲಾಹನಲ್ಲಿ ಅದ್ಭುತವಾಗಿದೆ, ಮತ್ತು ನಾವು ಸಿರಿಯಾದಲ್ಲಿ ರೋಮನ್ನರ ವಿರುದ್ಧ ಜಿಹಾದ್ಗೆ ಸಿದ್ಧರಾಗಲು ಮುಸ್ಲಿಮರಿಗೆ ಆದೇಶಿಸಿದ್ದೇವೆ. ಅವರ ಉದ್ದೇಶಗಳು ಉತ್ತಮ ಮತ್ತು ಉನ್ನತವಾಗಿವೆ. ಆದ್ದರಿಂದ, ಓ ಅಲ್ಲಾಹನ ಜನರೇ! ನಿಮ್ಮ ಭಗವಂತನ ಕರ್ತವ್ಯ ಮತ್ತು ಅವನ ಪ್ರವಾದಿಯ ಸುನ್ನತ್ ಈ ಎರಡು ಸದ್ಗುಣಗಳಲ್ಲಿ ಒಂದರ ಕಡೆಗೆ ಮುಂದಾಗಿರಿ; ಹುತಾತ್ಮತೆ ಅಥವಾ ವಿಜಯ ಮತ್ತು ಯುದ್ಧದ ಸಂಪತ್ತಿಗೆ ತ್ವರೆಯಾಗಿರಿ. ಸರ್ವಶಕ್ತನಾದ ಅಲ್ಲಾಹನು ತನ್ನ ಸೇವಕನ ನಿಷ್ಪ್ರಯೋಜಕ ಮಾತುಗಳಿಂದ ತೃಪ್ತನಾಗುವುದಿಲ್ಲ, ಅಥವಾ ಅವನ ಶತ್ರುಗಳು ಸತ್ಯವನ್ನು ಸ್ವೀಕರಿಸುವವರೆಗೆ ಮತ್ತು ಪವಿತ್ರ ಖುರ್‌ಆನ್‌ನ ಆಜ್ಞೆಗಳನ್ನು ಪಾಲಿಸುವವರೆಗೆ ಜಿಹಾದ್ ತ್ಯಜಿಸುವುದರ ಬಗ್ಗೆ ಅವನು ಸಂತೋಷಪಡುವುದಿಲ್ಲ. ಅಲ್ಲಾಹನು ನಿಮ್ಮ ಧರ್ಮವನ್ನು ರಕ್ಷಿಸಲಿ ಮತ್ತು ನಿಮ್ಮ ಹೃದಯಗಳನ್ನು ಮಾರ್ಗದರ್ಶಿಸಲಿ ಮತ್ತು ನಿಮ್ಮ ಕಾರ್ಯಗಳನ್ನು ಶುದ್ಧೀಕರಿಸಲಿ ಮತ್ತು ಪರಿಶ್ರಮಿಸುವ ಮುಜಾಹಿದೀನ್‌ಗಳಂತೆ ನಿಮಗೆ ಪ್ರತಿಫಲ ನೀಡಲಿ.

ಹಝ್ರತ್ ಅಬುಬಕರ್(ರ) ರವರು ಈ ಪತ್ರವನ್ನು ಹಝ್ರತ್ ಅನಸ್ ಬಿನ್ ಮಾಲಿಕ್(ರ) ರವರೊಂದಿಗೆ ಕಳುಹಿಸಿದರು. ನಾನು ಯೆಮೆನ್ ತಲುಪಿದೆ ಮತ್ತು ಒಂದೊಂದು ಹಳ್ಳಿ ಮತ್ತು ಒಂದೊಂದು ಗೋತ್ರಗಳಿಂದ ಪ್ರಾರಂಭಿಸಿದೆ ಎಂದು ಹಝ್ರತ್ ಅನಸ್(ರ) ಹೇಳುತ್ತಾರೆ. ನಾನು ಅವರ ಮುಂದೆ ಹಝ್ರತ್ ಅಬೂಬಕರ್(ರ) ಅವರ ಪತ್ರವನ್ನು ಓದುತ್ತಿದ್ದೆ ಮತ್ತು ನಾನು ಪತ್ರವನ್ನು ಓದಿ ಮುಗಿಸಿದ ನಂತರ ಹೀಗೆ ಹೇಳುತ್ತಿದ್ದೆ: ಸಕಲ ಸ್ತುತಿಗಳು ಅಲ್ಲಾಹನಿಗಾಗಿ ಇವೆ ಮತ್ತು ನಾನು ಅಲ್ಲಾಹನ ಹೊರತು ಆರಾಧನೆಗೆ ಯಾರೂ ಅರ್ಹನಲ್ಲ ಮತ್ತು ಹಝ್ರತ್ ಮುಹಮ್ಮದ್(ಸ)ರವರು

ಅಲ್ಲಹನ ಪ್ರವಾದಿಯಾಗಿದ್ದಾರೆ ಎಂದು ಸಾಕ್ಷ್ಯ ನೀಡುತ್ತೇನೆ. ನಾನು ಅಲ್ಲಾಹನ ಸಂದೇಶವಾಹಕರ(ಸ) ಖಲೀಫ್ ಮತ್ತು ಮುಸ್ಲಿಮರ ಸಂದೇಶವಾಹಕನಾಗಿದ್ದೇನೆ. ಗಮನವಿಟ್ಟು ಕೇಳಿ! ನಾನು ಮುಸ್ಲಿಮರನ್ನು ಸೇನೆಯ ರೂಪದಲ್ಲಿ ಒಟ್ಟುಗೂಡಿಸುವ ಸ್ಥಿತಿಯಲ್ಲಿ ಬಿಟ್ಟಿದ್ದೇನೆ. ಅವರು ತಮ್ಮ ಶತ್ರುಗಳ ಕಡೆಗೆ ರವಾನಿಸಲು ನಿಮಗಾಗಿ ಮಾತ್ರ ಕಾಯುತ್ತಿರುವುದು (ಅಂದರೆ ಮದೀನಕ್ಕೆ ನಿಮ್ಮ ಆಗಮನಕ್ಕೆ ಕಾಯುತ್ತಿರುವುದು). ಆದ್ದರಿಂದ ನೀವು ನಿಮ್ಮ ಸಹೋದರರ ಕಡೆಗೆ ತ್ವರಿತವಾಗಿ ಹೊರಡಿರಿ. ಓ ಮುಸ್ಲಿಮರೇ! ಅಲ್ಲಾಹನು ನಿಮ್ಮ ಮೇಲೆ ಕರುಣಿಸಲಿ. (ಅಲ್-ಇಕ್ತಿಫಾ ಬಿಮಾ ತಝಿಮ್ಮನ ಮಿನ್ ಮುಘಾಜಿ ರಸುಲುಲ್ಲಾಹ್...., ಸಂಪುಟ-2, ಪುಟಗಳು 115-116, ಆಲಂ ಅಲ್-ಕುತುಬ್ 1997)

ಹಝ್ರತ್ ಅನಸ್(ರ) ಅವರು ಮದೀನಕ್ಕೆ ಹಿಂತಿರುಗಿ ಹಝ್ರತ್ ಅಬೂಬಕ್ಕರ್(ರ) ಅವರಿಗೆ ಜನರ ಆಗಮನದ ಒಳ್ಳೆಯ ಸುದ್ದಿಯನ್ನು ತಿಳಿಸುತ್ತ ಹೇಳಿದರು: ಯೆಮನ್‌ನ ಧೈರ್ಯಶಾಲಿ, ಕೆಚ್ಚೆದೆಯ ಮತ್ತು ಕುದುರೆ ಸವಾರರು ಕಳಂಕಿತ ಕೂದಲುಳ್ಳವರು ಮತ್ತು ಧೂಳನ್ನು ಆವರಿಸಿರುವವರು ನಿಮ್ಮ(ರ) ಬಳಿ ತಲುಪಲಿದ್ದಾರೆ. ಅವರು ತಮ್ಮ ಆಸ್ತಿ ಮತ್ತು ಹೆಂಡತಿ ಮಕ್ಕಳೊಂದಿಗೆ ಹೊರಟಿದ್ದಾರೆ. (ಸಯ್ಯದುನಾ ಅಬೂಬರ್ ಸಿದ್ದೀಖ್(ರ) ಶಖ್ಸಿಯ್ಯತ್ ಔರ್ ಕಾರ್ನಾಮೆ, ಅಲೀ ಮುಹಮ್ಮದ್ ಅಸ್ಸಲಾಬಿ, ಅನುವಾದ, ಪುಟ-439, ಅಲ್‌ಫುರ್ಖಾನ್ ಟ್ರಸ್ಟ್ ಖಾನ್‌ಗಡ್ ಪಾಕಿಸ್ತಾನ್)

ಮತ್ತೊಂದೆಡೆ ಹಝ್ರತ್ ಖಾಲಿದ್ ಬಿನ್ ಸಈದ್(ರ) ತೈಮಗೆ ತಲುಪಿ ಅಲ್ಲೇ ತಂಗಿದರು. ಸುತ್ತಮುತ್ತಲಿನ ಅನೇಕ ಸಂಘಗಳು ಅವರನ್ನು ಭೇಟಿಯಾದರು. ಮುಸ್ಲಿಮರ ಈ ಮಹತ್ತಾದ ಸೈನ್ಯದ ಬಗ್ಗೆ ರೋಮನರಿಗೆ ಗೊತ್ತಾದಾಗ, ಅವರು ತಮ್ಮ ಅಧೀನದಲ್ಲಿದ್ದ ಅರೇಬಿಯರೊಡನೆ ಯುದ್ಧಕ್ಕಾಗಿ ಸೈನಿಕರನ್ನು ಬೇಡಿದರು.

ಹಝ್ರತ್ ಖಾಲಿದ್ ಬಿನ್ ಸಈದ್(ರ)ರಿಗೆ ಹಝ್ರತ್ ಅಬೂಬಕರ್(ರ) ಹೀಗೆ ಪತ್ರ ಬರೆದರು: ನೀವು ಮುಂದಕ್ಕೆ ಹೋಗಿರಿ, ಅಲ್ಪವೂ ಗಾಬರಿಗೊಳ್ಳಬೇಡಿರಿ ಮತ್ತು ಅಲ್ಲಾಹನ ಸಹಾಯವನ್ನು ಬೇಡಿರಿ. ಹಝ್ರತ್ ಖಾಲಿದ್ ಬಿನ್ ಸಈದ್(ರ) ರೋಮನರ ಕಡೆಗೆ ಧಾವಿಸಿದರು. ಆದರೆ ರೋಮನರು ಚದುರಿಹೋದ ಕಾರಣದಿಂದ ಅವರು ರೋಮನರ ಪ್ರದೇಶವನ್ನು ವಶಪಡಿಸಿಕೊಂಡರು. ಮಾತ್ರವಲ್ಲ ಅವರ ಸುತ್ತ ಒಟ್ಟುಗೂಡಿದ್ದ ಅನೇಕರು ಮುಸ್ಲಿಮರಾದರು. ಇದರ ಬಗ್ಗೆ ಹಝ್ರತ್ ಅಬೂಬಕರ್(ರ)ರಿಗೆ ತಿಳಿಸಲಾದಾಗ ಹೀಗೆ ನಿರ್ದೇಶನ ಲಭಿಸಿತು: ನೀವು ಮುಂದಕ್ಕೆ ಹೋಗಿರಿ. ಆದರೆ ಹಿಂದಿನಿಂದ ಶತ್ರುಗಳಿಗೆ ದಾಳಿ ನಡೆಸಲು ಅವಕಾಶ ದೊರಕುವಷ್ಟು ಮುಂದಕ್ಕೆ ಹೋಗಬೇಡಿರಿ. ಹಝ್ರತ್ ಖಾಲಿದ್ ಬಿನ್ ಸಈದ್(ರ) ಮುಂದಕ್ಕೆ ಹೋಗುತ್ತಾ ಬಾಹಾನ್ ಎಂಬ ಹೆಸರಿನ ಪಾದ್ರಿ ಮತ್ತು ಅವನ ಸೈನ್ಯವನ್ನು ಸೋಲಿಸಿದರು ಮತ್ತು ಅನೇಕರನ್ನು ವಧಿಸಿದರು. ಬಾಹಾನ್ ಪರಾರಿಯಾಗಿ ಡಮಸ್ಕಸ್‌ನಲ್ಲಿ ಅಭಯ ಪಡೆದನು. ಇದರ ಬಗ್ಗೆ ಹಝ್ರತ್ ಅಬೂಬಕರ್(ರ)ರಿಗೆ ತಿಳಿಸುತ್ತಾ ಹಝ್ರತ್ ಖಾಲಿದ್ ಬಿನ್ ಸಈದ್(ರ) ಹೆಚ್ಚಿನ ಸಹಾಯಕ ಸೈನ್ಯವನ್ನು ಬೇಡಿದರು. ಆ ಸಮಯದಲ್ಲಿ, ಹಝ್ರತ್ ಅಬು ಬಕರ್(ರ) ರವರು ಸಿರಿಯಾದಲ್ಲಿ ಜಿಹಾದ್ ಉದ್ದೇಶಕ್ಕಾಗಿ ಯೆಮೆನ್‌ನಿಂದ ವಲಸೆ ಬಂದ ಜನರನ್ನು ಹೊಂದಿದ್ದರು. ಇದಲ್ಲದೇ ಮಕ್ಕಾ ಮತ್ತು ಯೆಮೆನ್ ನಡುಭಾಗದ ಜನರೂ ಬಂದಿದ್ದರು. ಈ ಜನರಲ್ಲಿ ಹಝ್ರತ್ ಧುಲ್-ಕಲಾ(ರ)ರವರು ಕೂಡ ಇದ್ದರು. ಕೆಲವು ಪ್ರದೇಶಗಳ ಇತರ ಜನರೊಂದಿಗೆ ಧರ್ಮಭ್ರಷ್ಟರ ವಿರುದ್ಧದ ಯುದ್ಧದಲ್ಲಿ ಯಶಸ್ವಿಯಾದ ನಂತರ ಹಝ್ರತ್ ಇಕ್ರಮಾ(ರ) ಕೂಡ ಹಝ್ರತ್ ಅಬುಬಕರ್(ರ)ರವರ ಬಳಿಗೆ ಮರಳಿದ್ದರು. ಇವರೆಲ್ಲರ ಬಗ್ಗೆ ಹಝ್ರತ್ ಅಬೂಬಕ್ಕರ್(ರ) ಅವರು ಸದಾಕತ್‌ನ ಮಹನೀಯರಿಗೆ ಪತ್ರ ಬರೆದು ಬದಲಾಯಿಸಲು ಬಯಸುವವರು ಬದಲಾಯಿಸಿರಿ, ಆಗ ಅವರೆಲ್ಲರೂ ಬದಲಾಗಬೇಕೆಂದು ಬಯಸಿದ್ದರು ಮತ್ತು ಅವರೆಲ್ಲರನ್ನು ಬದಲಾಯಿಸುವ ಮೂಲಕ ಹೊಸ ಸೈನ್ಯವನ್ನು ಸಿದ್ಧಪಡಿಸಲಾಯಿತು. ಅದಕ್ಕಾಗಿಯೇ ಈ ಸೈನ್ಯಕ್ಕೆ ಜೈಶ್ ಅಲ್-ಬಿದಾಲ್ ಎಂದು ಹೆಸರಿಸಲಾಯಿತು. ಈ ಪಡೆಗಳು ಹಝ್ರತ್ ಖಾಲಿದ್ ಬಿನ್ ಸಯೀದ್(ರ) ಅವರನ್ನು ತಲುಪಿದವು. ಅದರ ನಂತರವೂ ಹಝ್ರತ್ ಅಬೂಬಕರ್(ರ) ಜನರನ್ನು ಸಿರಿಯದ ಯುದ್ಧಕ್ಕಾಗಿ ಹುರಿದುಂಬಿಸುತ್ತಿದ್ದರು ಮತ್ತು ಹಝ್ರತ್ ವಲೀದ್ ಬಿನ್ ಉತ್ಬ(ರ)ರನ್ನು ಹಝ್ರತ್ ಖಾಲಿದ್ ಬಿನ್ ಸಈದ್(ರ)ರ ಸಹಾಯಕ್ಕಾಗಿ ಸಿರಿಯಗೆ ಹೋಗಲು ನಿರ್ದೇಶಿಸಿದರು. ಅವರು ಹಝ್ರತ್ ಖಾಲಿದ್ ಬಿನ್ ಸಈದ್(ರ)ರ ಬಳಿಗೆ ತಲುಪಿದಾಗ ಅವರು ಹೀಗೆ ಹೇಳಿದರು: ಮದೀನ ನಿವಾಸಿಗಳು ತಮ್ಮ ಸಹೋದರರ ಸಹಾಯವನ್ನು ಮಾಡಲಿಕ್ಕಾಗಿ ಆವೇಶದಿಂದ ಇದ್ದಾರೆ ಮತ್ತು ಹಝ್ರತ್ ಅಬೂಬಕರ್(ರ) ಸೈನ್ಯವನ್ನು ಕಳುಹಿಸಲು ಏರ್ಪಾಡು ಮಾಡುತ್ತಿದ್ದಾರೆ. ಇದನ್ನು ಕೇಳಿ ಅವರು ಅಪಾರವಾಗಿ ಸಂತೋಷಗೊಂಡರು. ರೋಮ್ ವಿಜಯದ ಗರಿ ಅವರ ಪಾಲಿಗೆ ಲಭಿಸಬೇಕೆಂಬ ಭಾವನೆಯಿಂದ ಅವರು ಹಝ್ರತ್ ವಲೀದ್ ಬಿನ್ ಉಖ್ಬರನ್ನು ಜೊತೆಗೆ ಸೇರಿಸಿ ರೋಮನರ ಮಹಾ ಸೈನ್ಯದ ಮೇಲೆ ದಾಳಿ ನಡೆಸಲು ಬಯಸಿದರು. ಅದರ ಸೇನಾಧಿಪತಿ ಬಾಹಾನ್ ಆಗಿದ್ದನು. (ಅಲ್‌ಕಾಮಿಲ್ ಫಿತ್ತಾರೀಖ್, ಸಂಪುಟ-2, ಪುಟ-252-253, ದಾರುಲ್ ಕುತುಬ್ ಇಲ್‌ಮಿಯ ಬೈರೂತ್) (ಅಲ್‌ಬಿದಾಯ ವನ್ನಹಾಯ, ಸಂಪುಟ-4, ಭಾಗ-7, ಪುಟ-4, ದಾರುಲ್ ಕುತುಬ್ ಇಲ್‌ಮಿಯ ಬೈರೂತ್) (ತಾರೀಖ್ ಅತ್ತಬರಿ, ಸಂಪುಟ-2, ಪುಟ-332, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್) (ಹಝ್ರತ್ ಸಯ್ಯದುನಾ ಅಬೂಬಕರ್ ಸಿದ್ದೀಖ್(ರ), ಮುಹಮ್ಮದ್ ಹುಸೈನ್ ಹೈಕಲ್ ಅನುವಾದಕ, ಪುಟ-340-341, ಬುಕ್ ಕಾರ್ನರ್ ಶೋರೂಮ್ ಜ್ಹೇಲಮ್)

ಖಾಲಿದ್ ಬಿನ್ ಸಈದ್(ರ) ದಾಳಿ ನಡೆಸುವಾಗ ವಿಜಯದ ಆವೇಶದಿಂದ ಖಲೀಫರ ನಿರ್ದೇಶನವನ್ನು ಕಡೆಗಣಿಸಿದರು ಮತ್ತು ತನ್ನ ಸೈನ್ಯದ ಹಿಂದಿನ ಭಾಗವನ್ನು ಸಂರಕ್ಷಿಸುವುದರ ಬಗ್ಗೆ ಅಸಡ್ಡೆ ತೋರಿಸಿದರು. ಇತರ ಸರದಾರರು ತಲುಪುವುದಕ್ಕೆ ಮುಂಚಿತವಾಗಿಯೇ ರೋಮನರ ವಿರುದ್ಧ ಅವರು ಯುದ್ಧವನ್ನು ಆರಂಭಿಸಿದರು. ಬಾಹಾನ್ ತನ್ನ ಸಂಗಡಿಗರೊಂದಿಗೆ ಅವರಿಗಿಂತ ಮುಂಚಿತವಾಗಿ ಹೊರಟು ಡಮಾಸ್ಕಸ್ ಕಡೆಗೆ ಹೋದನು. ಬಾಹಾನ್‌ನ ಹಿಮ್ಮೆಟ್ಟುವಿಕೆ ವಾಸ್ತವವಾಗಿ ಒಂದು ಉಪಾಯವಾಗಿತ್ತು. ಅವನು ಮುಸ್ಲಿಮರನ್ನು ಸುತ್ತುವರೆದು ಹಿಂದಿನಿಂದ ದಾಳಿ ಮಾಡಲು ಬಯಸಿದ್ದನು. ಹಝ್ರತ್ ಅಬುಬಕರ್(ರ) ಅವರಿಗೆ ಈ ಅಪಾಯದ ಬಗ್ಗೆ ಮುಂಚೆಯೇ ಎಚ್ಚರಿಕೆ ನೀಡಿದ್ದರು, ಆದರೆ ಯಶಸ್ಸಿನ ಉತ್ಸಾಹವು ಹಝ್ರತ್ ಖಾಲಿದ್ ಬಿನ್ ಸಯೀದ್(ರ) ಅವರನ್ನು ಆ ಕಾಲದ ಖಲೀಫರ ಈ ಎಚ್ಚರಿಕೆಯನ್ನು ಮರೆತುಬಿಡುವಂತೆ ಮಾಡಿತು ಮತ್ತು ಅವರನ್ನು ಮುಂದುವರಿಯಲು ಪ್ರೋತ್ಸಾಹಿಸಿತು. ಅವರು ಶತ್ರುಗಳ ಸೈನ್ಯದಲ್ಲಿ ಮುಂದಕ್ಕೆ ನುಗ್ಗುತ್ತಾ ಹೋದರು. ಆ ಸಮಯದಲ್ಲಿ ಅವರ ಜೊತೆಗೆ ಹಝ್ರತ್ ವಲೀದ್ ಬಿನ್ ಉಖ್ಬ(ರ) ಅಲ್ಲದೇ ಹಝ್ರತ್ ಧುಲ್‌ಕಲಾಅ್(ರ) ಮತ್ತು ಹಝ್ರತ್ ಇಕ್ರಿಮ(ರ) ಕೂಡ ಇದ್ದರು. ಅಲ್ಲಿ, ಹಝ್ರತ್ ಖಾಲಿದ್ ಬಿನ್ ಸಯೀದ್(ರ) ಅವರನ್ನು ಬಾಹಾನ್‌ನ ಮಿಲಿಟರಿ ಪೋಸ್ಟ್‌ಗಳು ಒಟ್ಟಾಗಿ ಸುತ್ತುವರೆದು ಅವರ ದಾರಿಯನ್ನು ನಿರ್ಬಂಧಿಸಿದವು. ಹಝ್ರತ್ ಖಾಲಿದ್ ಅವರಿಗೂ ಇದರ ಬಗ್ಗೆ ತಿಳಿದಿರಲಿಲ್ಲ. ಅದರ ನಂತರ ಬಾಹಾನ್ ಮುಂದುವರೆದು ಹಝ್ರತ್ ಖಾಲಿದ್ ಅವರ ಪುತ್ರ ಸಯೀದ್ ಕೆಲವು ಜನರೊಂದಿಗೆ ನೀರನ್ನು ಹುಡುಕುತ್ತಾ ಅಲೆದಾಡುವುದನ್ನು ಕಂಡು ಅವರೆಲ್ಲರನ್ನು ಕೊಂದನು. ಹಝ್ರತ್ ಖಾಲಿದ್ ಬಿನ್ ಸಯೀದ್(ರ) ರವರು ತಮ್ಮ ಮಗ ಮತ್ತು ಅವರ ಸಹಚರರನ್ನು ಶಹೀದನ್ನಾಗಿ ಮಾಡಿದರು ಎಂಬ ವಿಷಯ ತಿಳಿದಾಗ, ಅವರು ಕುದುರೆ ಸವಾರರ ಗುಂಪಿನೊಂದಿಗೆ ಅಲ್ಲಿಂದ ಓಡಿಹೋದರು ಮತ್ತು ಯುದ್ಧದ ಬದಲಿಗೆ ಆ ಸ್ಥಳವನ್ನು ತೊರೆದರು. ತದನಂತರ, ಅನೇಕ ಸಹಚರರು ಕುದುರೆಗಳು ಮತ್ತು ಒಂಟೆಗಳ ಮೇಲೆ ತಮ್ಮ ಸೈನ್ಯದಿಂದ ಬೇರ್ಪಟ್ಟರು. ಹಝ್ರತ್ ಖಲೀದ್(ರ)ರವರು ಸೋತು ಧುಲ್-ಮರ್ವಕ್ಕೆ ತಲುಪಿದರು, ಆದರೆ ಹಝ್ರತ್ ಇಕ್ರಿಮ(ರ) ತನ್ನ ಜಾಗದಿಂದ ಸರಿಯಲಿಲ್ಲ. ಬದಲಿಗೆ ಮುಸ್ಲಿಮರಿಗೆ ನೆರವು ನೀಡುತ್ತಾ ಹೋದರು. ಹಝ್ರತ್ ಖಾಲಿದ್ ಬಿನ್ ಸಈದ್(ರ)ರನ್ನು ಹಿಂಬಾಲಿಸುವುದರಿಂದ ಬಾಹಾನ್ ಮತ್ತು ಅವನ ಸೈನ್ಯವನ್ನು ಅವರು ತಡೆದರು. ಹಝ್ರತ್ ಖಾಲಿದ್ ಬಿನ್ ಸಈದ್(ರ) ಪರಾಜಿತಗೊಳ್ಳುತ್ತಾ ಮಕ್ಕ ಮತ್ತು ಮದೀನದ ನಡುವೆ ಇರುವ ಒಂದು ಪ್ರದೇಶವಾದ ಧುಲ್‌ಮರ್‌ವದ ತನಕ ತಲುಪಿದರು. ಹಝ್ರತ್ ಅಬೂಬಕರ್(ರ)ರಿಗೆ ಇದರ ಮಾಹಿತಿ ಲಭಿಸಿದಾಗ ಅವರು ಹಝ್ರತ್ ಖಾಲಿದ್ ಬಿನ್ ಸಈದ್(ರ)ರೊಡನೆ ಕೋಪಗೊಂಡರು ಮತ್ತು ಮದೀನದಲ್ಲಿ ಪ್ರವೇಶಿಸಲು ಅನುಮತಿ ಕೊಡಲಿಲ್ಲ. ಆದರೆ ಅನಂತರ ಅನುಮತಿ ಲಭಿಸಿದಾಗ ಮದೀನದಲ್ಲಿ ಪ್ರವೇಶಿಸಿ ಹಝ್ರತ್ ಅಬೂಬಕರ್(ರ)ರೊಡನೆ ತಾನು ಮಾಡಿದ ಕೃತ್ಯಕ್ಕೆ ಅವರು ಕ್ಷಮಾಪಣೆ ಬೇಡಿದರು. (ತಾರಿಖ್ ಅಲ್-ತಬಾರಿ, ಭಾಗ-2, ಪುಟಗಳು 333-334, ದಾರುಲ್ ಕುತುಬ್ ಅಲ್-ಇಲ್‌ಮಿಯಾ ಬೈರುತ್, ಲೆಬನಾನ್ 2012) (ಸಯ್ಯಿದುನಾ ಅಬುಬಕರ್ ಸಿದ್ದಿಕ್, ಹೈಕಲ್ ಅನುವಾದ, ಪುಟ-341) (ಫರ್ಹಂಗ್ ಸಿರತ್, ಪುಟಗಳು 56 ಮತ್ತು 269, ಝುವಾರ ಅಕಾಡೆಮಿ ಕರಾಚಿ)

ಹಝ್ರತ್ ಖಾಲಿದ್ ಬಿನ್ ಸಈದ್(ರ)ರ ಈ ಪರಾಜಯದ ನಂತರವೂ ಹಝ್ರತ್ ಅಬೂಬಕರ್(ರ)ರ ಧೈರ್ಯ ಮತ್ತು ದೃಢನಿರ್ಧಾರದಲ್ಲಿ ಯಾವುದೇ ವ್ಯತ್ಯಾಸ ಉಂಟಾಗಲಿಲ್ಲ. ಇಸ್ಲಾಮಿನ ಸೈನಿಕರನ್ನು ಶತ್ರುಗಳ ಮುಷ್ಟಿಯಿಂದ ರಕ್ಷಿಸಿ ಸಿರಿಯದ ಗಡಿಗಳಿಗೆ ಹಝ್ರತ್ ಇಕ್ರಿಮ(ರ) ಮತ್ತು ಹಝ್ರತ್ ಧುಲ್‌ಕಲಾಅ್(ರ) ಮರಳಿ ತಂದಿರುವರು ಮತ್ತು ಅಲ್ಲಿ ಸಹಾಯಕ್ಕಾಗಿ ಕಾಯುತ್ತಿರುವರು ಎಂಬ ಸುದ್ದಿ ಹಝ್ರತ್

ಅಬೂಬಕರ್(ರ)ರಿಗೆ ಮುಟ್ಟಿದಾಗ, ಅವರು ಒಂದು ಕ್ಷಣವನ್ನು ಕೂಡ ವ್ಯರ್ಥ ಮಾಡದೇ ಸಹಾಯಕ ಸೈನ್ಯವನ್ನು ಕಳುಹಿಸುವ ಏರ್ಪಾಡು ಆರಂಭಿಸಿದರು. ಹಝ್ರ‍ತ್ ಅಬೂಬಕರ್(ರ) ಈ ಸಂಬಂಧವಾಗಿ ನಾಲ್ಕು ದೊಡ್ಡ ಸೈನ್ಯಗಳನ್ನು ತಯಾರು ಮಾಡಿದರು. ಅವುಗಳನ್ನು ಸಿರಿಯದ ವಿವಿಧ ಪ್ರದೇಶಗಳಿಗೆ ಕಳುಹಿಸಿದರು.

ಸಹಾಯಕ ಸೈನ್ಯವಾಗಿ ಕಳುಹಿಸಲಾದ ಸೈನ್ಯಗಳಲ್ಲಿ ಮೊದಲ ಸೈನ್ಯವನ್ನು ಹಝ್ರ‍ತ್ ಯಝೀದ್ ಬಿನ್ ಅಬೂಸುಫ್‌ಯಾನಿನ ನೇತೃತ್ವದಲ್ಲಿ ಕಳುಹಿಸಿದರು. ಅವರು ಹಝ್ರ‍ತ್ ಮುಆವಿಯರ ಸಹೋದರರಾಗಿದ್ದರು. ಅಬೂಸುಫ್‌ಯಾನರ ಕುಟುಂಬದಲ್ಲಿ ಅತ್ಯುತ್ತಮ ವ್ಯಕ್ತಿಯಾಗಿದ್ದರು. ಅವರ ಸೈನ್ಯದ ಉದ್ದೇಶ ಡಮಸ್ಕಸನ್ನು ಜಯಿಸುವುದು ಮತ್ತು ಇತರ ಮೂರು ಸೈನ್ಯಗಳಿಗೆ ನೆರವು ನೀಡುವುದಾಗಿತ್ತು. ಇದರಲ್ಲಿ ಇದ್ದ ಸೈನಿಕರ ಸಂಖ್ಯೆ ಆರಂಭದಲ್ಲಿ 3 ಸಾವಿರವಾಗಿತ್ತು. ಅನಂತರ ಅದು ಸುಮಾರು 7 ಸಾವಿರವಾಯಿತು. ಹಝ್ರ‍ತ್ ಯಝೀದ್ ಬಿನ್ ಅಬುಸುಫ್‌ಯಾನರ ಈ ಸೈನ್ಯದಲ್ಲಿ ಮಕ್ಕದ ಜನರಲ್ಲಿ ಸುಹೈಲ್ ಬಿನ್ ಅಮ್ರ್ ಮತ್ತು ಅವರಂತಹ ಬುದ್ಧಿಶಾಲಿ ಹಾಗೂ ಗೌರವಾನ್ವಿತ ವ್ಯಕ್ತಿಗಳಿದ್ದರು. ಸುಹೈಲ್ ಬಿನ್ ಅಮ್ರ್ ಎಂಬವರು ಜಾಹಿಲಿಯ ಕಾಲದಲ್ಲಿ ಖುರೈಶಿನ ಹಿರಿಯ ಮತ್ತು ಬುದ್ಧಿಶಾಲಿ ಜನರಲ್ಲಿ ಒಬ್ಬರಾಗಿದ್ದರು. ಹುದೈಬಿಯ ಸಂಧಿಯ ಸಂದರ್ಭದಲ್ಲಿ ಹಝ್ರ‍ತ್ ಪೈಗಂಬರ್(ಸ)ರೊಂದಿಗೆ ಒಪ್ಪಂದ ಮಾಡುತ್ತಾ ಅವರು ಮಕ್ಕದ ಸತ್ಯನಿಷೇಧಿಗಳ ಪ್ರತಿನಿಧಿಯಾಗಿದ್ದರು. ಅವರು ಮಕ್ಕಾ ವಿಜಯದ ವೇಳೆ ಮುಸ್ಲಿಮರಾದರು. (ಸಯ್ಯಿದುನಾ ಅಬೂಬಕರ್ ಸಿದ್ದೀಖ್(ರ) ಶಖ್ಸಿಯ್ಯತ್ ಔರ್ ಕಾರ್ನಾಮೆ, ಅಲ ಮುಹಮ್ಮದ್ ಸಲಾಬಿ, ಅನುವಾದ ಪುಟ–441, ಅಲ್‌ಫುರ್ಖಾನ್ ಟ್ರಸ್ಟ್ ಖಾನ್‌ಗಡ್ ಪಾಕಿಸ್ತಾನ್) (ತಾರೀಖ್ ಅತ್ತಬರಿ, ಸಮಪುಟ–2, ಪುಟ–333, ದಾರುಲ್ ಕುತುಬ್ ಇಲ್‌ಮಿಯ ಬೈರೂತ್) (ಅಸದುಲ್ ಗಾಬ, ಸಂಪುಟ–2, ಪುಟ–585,586, ದಾರುಲ್ ಕುತುಬ್ ಇಲ್‌ಮಿಯ ಬೈರೂತ್)

ಹಝ್‌ರತ್ ಅಬೂಬಕರ್(ರ) ಅವರು ಹಝ್‌ರತ್ ಯಝೀದ್ ಬಿನ್ ಅಬು ಸುಫ್ಯಾನ್ ಅವರಿಗೆ ಧ್ವಜವನ್ನು ಕಟ್ಟಿದಾಗ ಅವರು ರಬಿಅ ಬಿನ್ ಅಮೀರ್ ಅವರನ್ನು ಕರೆದು ಅವರಿಗೂ ಧ್ವಜವನ್ನು ಕಟ್ಟಿದರು ಮತ್ತು ನೀವು ಯಝೀದ್ ಬಿನ್ ಅಬು ಸುಫ್ಯಾನ್ ಅವರೊಂದಿಗೆ ಹೋಗುತ್ತೀರಿ ಎಂದು ಹೇಳಿದರು. ಅವಿಧೇಯರಾಗಬೇಡಿ ಮತ್ತು ಅವರನ್ನು ವಿರೋಧಿಸಬೇಡಿ. ನಂತರ ಅವರು ಹಝ್‌ರತ್ ಯಝೀದ್ ಬಿನ್ ಅಬು ಸುಫ್ಯಾನ್‌ಗೆ ಹೇಳಿದರು, ನಿಮ್ಮ ಮುಖದ್ಮತ್ ಅಲ್ ಜೈಶ್‌ನ ಮೇಲ್ವಿಚಾರಣೆಯನ್ನು ರಬಿಯಾ ಬಿನ್ ಅಮೀರ್‌ಗೆ ವಹಿಸುವುದು ಸೂಕ್ತವೆಂದು ನೀವು ಭಾವಿಸಿದರೆ, ನೀವು ಹಾಗೆ ಮಾಡಬೇಕು. ಅವರು ಅರೇಬಿಯಾದ ಅತ್ಯುತ್ತಮ ಕುದುರೆ ಸವಾರರಲ್ಲಿ ಮತ್ತು ನಿಮ್ಮ ಜನರ ಶಾಂತಿ ತಯಾರಕರಲ್ಲಿ ಸೇರಿದ್ದಾರೆ ಮತ್ತು ಅವರು ಅಲ್ಲಾಹನ ನೀತಿವಂತ ಸೇವಕರಲ್ಲಿ ಒಬ್ಬರು ಎಂದು ನಾನು ಭಾವಿಸುತ್ತೇನೆ. ಈ ಬಗ್ಗೆ ಹಝ್‌ರತ್ ಯಝೀದ್ ಅವರು ಹೇಳಿದರು: ಅವರ ಬಗ್ಗೆ ತಮ್ಮ ಒಳ್ಳೆಯ ಅಭಿಪ್ರಾಯ ಮತ್ತು ಅವರ ಬಗ್ಗೆ ಅವರ ಭರವಸೆಯು ನನ್ನ ಹೃದಯದಲ್ಲಿ ಅವರ ಪ್ರೀತಿಯನ್ನು ಹೆಚ್ಚಿಸಿದೆ ಎಂದು ಹೇಳಿದರು. ನಂತರ ಹಝ್‌ರತ್ ಅಬುಬಕರ್(ರ) ಅವರು ಅವರೊಂದಿಗೆ ನಡೆಯಲು ಪ್ರಾರಂಭಿಸಿದರು, ನಂತರ ಹಝ್‌ರತ್ ಯಝೀದ್ ಹೇಳಿದರು, ಖಲೀಫತುರ್ರಸೂಲ್(ಸ)!! ಒಂದೋ ನೀವು ಸವಾರಿ ಮಾಡಿ ಅಥವಾ ನಿಮ್ಮೊಂದಿಗೆ ನಡೆಯಲು ನನಗೆ ಅವಕಾಶ ಮಾಡಿಕೊಡಿ ಏಕೆಂದರೆ ನನಗೆ ಸವಾರಿ ಮಾಡುವುದು ಮತ್ತು ನೀವು ನಡೆಯುವುದು ಇಷ್ಟವಿಲ್ಲ. ಈ ಬಗ್ಗೆ ಹಝ್‌ರತ್ ಅಬೂಬಕರ್(ರ) ಹೇಳಿದರು: ನಾನು ಸವಾರಿ ಮಾಡುವುದಿಲ್ಲ ಮತ್ತು ನೀವು ಸವಾರಿಯಿಂದ ಇಳಿಯುವುದಿಲ್ಲ. ನಾನು ಈ ಪಾದಗಳನ್ನು ಅಲ್ಲಾಹನ ಮಾರ್ಗದಲ್ಲಿ ಏರುತ್ತಿರುವಂತೆ ಪರಿಗಣಿಸುತ್ತೇನೆ.

ಈ ಸಂದರ್ಭದಲ್ಲಿ ಹಝ್ರ‍ತ್ ಯಝೀದ್(ರ)ರನ್ನು ಉಪದೇಶಿಸುತ್ತಾ ಹಝ್ರ‍ತ್ ಅಬೂಬಕರ್(ರ) ಹೀಗೆ ಹೇಳಿದರು: ಅಲ್ಲಾಹನಿಗೆ ಭಯಪಡಲು, ಅವನನ್ನು ಅನುಸರಿಸಲು ಅವನಿಗಾಗಿ ತ್ಯಾಗ ಮಾಡಲು ನಾನು ನಿಮ್ಮನ್ನು ಉಪದೇಶಿಸುತ್ತೇನೆ. ಶತ್ರುಗಳೊಡನೆ ಮುಖಾಮುಖಿಯಾಗಿ ಅಲ್ಲಾಹನು ನಿಮಗೆ ವಿಜಯವನ್ನು ದಯಪಾಲಿಸಿದರೆ, ನೀವು ಮೋಸಗಾರಿಕೆ ಮಾಡಬೇಡಿರಿ, ಶತ್ರುಗಳ ಮುಖಗಳನ್ನು ಕುರೂಪಗೊಳಿಸಬೇಡಿರಿ. ಅಂಜುಬುರುಕುತನ ತೋರಿಸಬೇಡಿರಿ. ಮಕ್ಕಳನ್ನು, ವೃದ್ಧರನ್ನು, ಮಹಿಳೆಯರನ್ನು ಕೊಲ್ಲಬೇಡಿರಿ. ಖರ್ಜೂರದ ಮರಗಳನ್ನು ನಾಶಮಾಡಬೇಡಿರಿ. ಯಾವುದಾದರೂ ಫಲದಾಯಕ ಮರಗಳನ್ನು ಕಡಿಯಬೇಡಿರಿ. ಆಹಾರಕ್ಕಾಗಿ ಅಲ್ಲದೇ ಜಾನುವಾರುಗಳನ್ನು ಕೊಯ್ಯಬೇಡಿರಿ. ಮತ್ತು ಅಲ್ಲಾಹನಿಗೆ ತಮ್ಮನ್ನು ಅರ್ಪಿಸಿಕೊಂಡ ಕೆಲವು ಜನರನ್ನು ನೀವು ಹಾದು ಹೋಗುತ್ತೀರಿ, ಆದ್ದರಿಂದ ಅವರನ್ನು ಮತ್ತು ಅವರು ತಮ್ಮನ್ನು ತಾವು ಅರ್ಪಿಸಿಕೊಂಡದ್ದನ್ನು ಬಿಟ್ಟುಬಿಡಿ. ಅದೇನೆಂದರೆ, ಸನ್ಯಾಸಿಗಳು, ಚರ್ಚ್‌ಗಳ ಪಾದ್ರಿಗಳು, ಮತ್ತು ಸೈತಾನನಿಂದ ತಲೆ ಕೂದಲನ್ನು ಸ್ವಚ್ಛಗೊಳಿಸಿದ ಕೆಲವು ಜನರನ್ನು ನೀವು ನೋಡುತ್ತೀರಿ. ಅವುಗಳ ತಲೆಯ ಮಧ್ಯ ಭಾಗವು ಮೊಟ್ಟೆಗಳನ್ನು ಇಡಲು ನೆಲದಲ್ಲಿ ರಂಧ್ರವನ್ನು ಅಗೆಯುವ ಫೆಸೆಂಟ್‌ನಂತೆ ಇರುತ್ತದೆ. ಒಂದು ವರದಿಯಲ್ಲಿ ಹೀಗೆ ಉಲ್ಲೇಖವಾಗುತ್ತದೆ ನಿಮಗೆ ತಲೆಯ ಮಧ್ಯ ಭಾಗದಲ್ಲಿ ಕೂದಲನ್ನು ಬೋಳಿಸಿಕೊಂಡವರು ಮತ್ತು ಎಲ್ಲಾ ಬದಿಗಳಲ್ಲಿ ಕೂದಲಿನ ಎಳೆಗಳನ್ನು ಬಿಡುವವರನ್ನು ನೀವು ಕಾಣಬಹುದು. ಆದ್ದರಿಂದ ನೀವು ಅವರ ತಲೆಯ ಸ್ವಚ್ಛಗೊಳಿಸಿದ ಭಾಗಗಳನ್ನು ಕತ್ತಿಯಿಂದ ಹೊಡೆಯಬೇಕು. ಕೊಲ್ಲಲು ಆದೇಶಿಸಿದವರ ಬಗ್ಗೆ ವಿಭಿನ್ನ ವರದಿಗಳಿವೆ. ಇದು ಸನ್ಯಾಸಿಗಳಲ್ಲದ ಕ್ರಿಶ್ಚಿಯನ್ನರ ಒಂದು ಗುಂಪಾಗಿದೆ, ಇವರು ಮುಸ್ಲಿಮರ ವಿರುದ್ಧ ಯುದ್ಧವನ್ನು ಪ್ರಚೋದಿಸುವವರು ಮತ್ತು ಮುಸ್ಲಿಮರ ವಿರುದ್ಧ ಯುದ್ಧದಲ್ಲಿ ಭಾಗವಹಿಸುವ ಧಾರ್ಮಿಕ ಮುಖಂಡರಾಗುದ್ದಾರೆ ಎಂದು ಹೇಳಲಾಗುತ್ತದೆ. ಅದಕ್ಕಾಗಿಯೇ ಹಝ್‌ರತ್ ಅಬೂಬಕರ್(ರ) ಅವರು ಸನ್ಯಾಸಿಗಳು, ಚರ್ಚ್‌ಗಳ ಒಳಗಿರುವವರಿಗೆ ಏನನ್ನೂ ಹೇಳುವುದಿಲ್ಲ, ಆದರೆ ಅಂತಹ ಜನರು ಮತ್ತು ಅವರನ್ನು ಅನುಸರಿಸುವವರು, ಯುದ್ಧವನ್ನು ಪ್ರಚೋದಿಸುವ ಮತ್ತು ಮುಸ್ಲಿಮರ ವಿರುದ್ಧ ಹೋರಾಡುವವರು ಅವರೊಂದಿಗೆ ಹೇಗಾದರೂ ಯುದ್ಧ ಮಾಡಬೇಕು. ಏಕೆಂದರೆ ಈ ಜನರು ಯುದ್ಧ ತಯಾರಕರು ಮತ್ತು ಯುದ್ಧಕ್ಕೆ ಪ್ರಚೋದಕರಾಗಿದ್ದಾರೆ. ಅವರು ಇಸ್ಲಾಂಗೆ ಮತಾಂತರಗೊಳ್ಳುವವರೆಗೆ ಅಥವಾ ಅಸಹಾಯಕರಾಗುವವರೆಗೆ ಮತ್ತು ಜಿಝ್ಯ ಪಾವತಿಸುವವರೆಗೆ ಅವರ ವಿರುದ್ಧ ಯುದ್ಧ ಮಾಡಬೇಕು ಎಂದು ಹೇಳಿದರು.

ಯಾರು ಅಲ್ಲಾಹ್ ಮತ್ತು ಅವನ ಸಂದೇಶವಾಹಕರಿಗೆ ಸಹಾಯ ಮಾಡುತ್ತಾರೋ, ಅಲ್ಲಾಹನು ಅವನಿಗೆ ಅದೃಶ್ಯದಿಂದ ಸಹಾಯ ಮಾಡುತ್ತಾನೆ. ಮತ್ತು ನಾನು ನಿಮಗೆ ನಮಸ್ಕರಿಸುತ್ತೇನೆ ಮತ್ತು ಅಲ್ಲಾಹನಿಗೆ ಒಪ್ಪಿಸುತ್ತೇನೆ. (ಅಲ್‌ಇಕ್ತಿಫಾ ಬಿಮಾ ತಝುಮನ್ನ..... ಸಂಪುಟ–2, ಭಾಗ–1, ಪುಟ–117–118, ಆಲಂ ಅಲ್–ಕುತುಬ್ ಬೈರುತ್ 1997) (ತಾರಿಖ್ ಅಲ್–ತಬರಿ, ಸಂಪುಟ–2, ಪುಟ–246, ದಾರ್ ಅಲ್–ಕುತುಬ್ ಅಲ್–ಇಲ್‌ಮಿಯಾ ಬೈರುತ್)

ಮತ್ತೊಂದು ವರದಿಯಲ್ಲಿ, ಅವರ ಜೊತೆಗೆ ಹೆಚ್ಚಿನ ಮಾರ್ಗದರ್ಶನದ ಉಲ್ಲೇಖವೂ ಇದೆ. ಹಝ್‌ರತ್ ಅಬೂಬಕರ್(ರ) ರವರು ಹಝ್‌ರತ್ ಯಝೀದ್ ಬಿನ್ ಅಬು ಸುಫ್ಯಾನ್(ರ) ರವರಿಗೆ ಹೇಳಿದರು: ನಾನು ನಿಮ್ಮನ್ನು ಮೇಲ್ವಿಚಾರಕರನ್ನಾಗಿ ನೇಮಿಸಿದ್ದೇನೆ ಅದು ಏಕೆಂದರೆ ನಿಮ್ಮನ್ನು ಪರೀಕ್ಷಿಸಲು ಮತ್ತು ನಿಮಗೆ ಹೊರಗೆ ತೆಗೆದು ತರಬೇತಿ ನೀಡಲು. ನಿಮ್ಮ ಕರ್ತವ್ಯವನ್ನು ನೀವು ಉತ್ತಮವಾಗಿ ನಿರ್ವಹಿಸಿದರೆ, ನಾನು ನಿಮ್ಮನ್ನು ನಿಮ್ಮ ಕೆಲಸಕ್ಕೆ ಮರು ನೇಮಕ ಮಾಡುತ್ತೇನೆ ಮತ್ತು ನಿಮಗೆ ಹೆಚ್ಚಿನ ಬಡತಿಯನ್ನು ನೀಡುತ್ತೇನೆ. ನೀವು ನಿರ್ಲಕ್ಷ್ಯದ ತಪ್ಪಿತಸ್ಥರಾಗಿದ್ದರೆ, ನಾನು ನಿಮ್ಮನ್ನು ಪದಚ್ಯುತಗೊಳಿಸುತ್ತೇನೆ. ಅಲ್ಲಾಹನ ಭಕ್ತಿಯನ್ನು ಕೈಗೊಳ್ಳಿರಿ. ಅವನು ನಿಮ್ಮ ಬಾಹ್ಯವನ್ನು ನೋಡುವ ಹಾಗೆಯೇ ಅಂತರಂಗವನ್ನು ನೋಡುತ್ತಾನೆ. ತನ್ನ ಸತ್ಕರ್ಮಗಳ ಮೂಲಕ ಅಲ್ಲಾಹನ ಸಾಮೀಪ್ಯವನ್ನು ಗಳಿಸುವ ವ್ಯಕ್ತಿಯು ಅಲ್ಲಾಹನಿಗೆ ಜನರಲ್ಲಿ ಅತ್ಯಂತ ಪ್ರಿಯನಾದವನು ಆಗಿರುತ್ತಾನೆ. ನಾನು ನಿಮ್ಮನ್ನು ಖಾಲಿದ್ ಬಿನ್ ಸಯೀದ್(ರ) ಅವರ ಸ್ಥಾನದಲ್ಲಿ ನೇಮಿಸಿದ್ದೇನೆ. ಅಜ್ಞಾನ ಪೂರ್ವಾಗ್ರಹವನ್ನು ತಪ್ಪಿಸುವುದು. ಅಲ್ಲಾಹನು ಈ ವಿಷಯಗಳನ್ನು ಮತ್ತು ಅವುಗಳನ್ನು ಮಾಡುವವರನ್ನು ಇಷ್ಟಪಡುವುದಿಲ್ಲ. ನೀವು ನಿಮ್ಮ ಸೈನ್ಯದ ಬಳಿಗೆ ತಲುಪುವಾಗ ಅವರೊಂದಿಗೆ ಉತ್ತಮವಾಗಿ ವರ್ತಿಸಿರಿ. ಅವರೊಂದಿಗೆ ಒಳಿತಿನಿಂದ ವರ್ತಿಸಿರಿ. ಅವರನ್ನು ಉಪದೇಶಿಸುವಾಗ ಸಂಕ್ಷಿಪ್ತವಾಗಿ ಉಪದೇಶಿಸಿರಿ. ಏಕೆಂದರೆ ಬಹಳವಾಗಿ ಮಾತನಾಡುವುದರಿಂದ ಅನೇಕ ಮಾತುಗಳು ಮರೆತು ಹೋಗುತ್ತವೆ. ನಿಮ್ಮನ್ನು ಸ್ವತಃ ಸರಿಯಾಗಿರಿಸಿದರೆ, ಜನರು ಸ್ವತಃ ಸರಿಯಾಗುವರು. ನಮಾಝುನ್ನು ಅದರ ಸರಿಯಾದ ಸಮಯದಲ್ಲಿ ರುಕೂಅ್ ಮತ್ತು ಸುಜೂದನ್ನು ಪೂರ್ತಿ ಮಾಡುತ್ತಾ ನಿರ್ವಹಿಸಿರಿ. ಅದರಲ್ಲಿ ನಮ್ರತೆ ಮತ್ತು ವಿನಯ ಪೂರ್ಣವಾಗಿ ಇರಬೇಕು. ಶತ್ರುಗಳ ರಾಯಭಾರಿ ನಿಮ್ಮ ಬಳಿಗೆ ಬಂದರೆ ಅವರನ್ನು ಕನಿಷ್ಠ ಸಮಯಕ್ಕೆ ತಂಗಲು ಬಿಟ್ಟು ಬೇಗನೇ ಮರಳಿ ಕಳುಹಿಸಿರಿ. ಅವರನ್ನು ತನ್ನ ಸೈನ್ಯದ ಗುಂಪಿನೊಂದಿಗೆ ಇರಿಸಿರಿ. ತನ್ನ ಜನರು ಅವರ ಜೊತೆಗೆ ಮಾತನಾಡುವುದನ್ನು ತಡೆಯಿರಿ. ನೀವು ಸ್ವತಃ ಅವರ ಜೊತೆಗೆ ಮಾತನಾಡುವಾಗ ತಮ್ಮ ರಹಸ್ಯವನ್ನು ಬಯಲು ಮಾಡಬೇಡಿರಿ. ಇಲ್ಲದಿದ್ದರೆ ನಿಮ್ಮ ಸಂಗತಿಗಳು ಅಲ್ಲೋಲಕಲ್ಲೋಲವಾಗುವುವು. ಯಾರೊಡನೆ ಸಲಹೆ ಪಡೆಯಲಾಗುತ್ತದೋ ಅವರಿಗೆ ಎಲ್ಲ ಸೂಕ್ಷ್ಮ ಸಂಗತಿಗಳನ್ನು ಕೂಡ ಹೇಳಬೇಕು. ಆಗಲೇ ಅವರಿಗೆ ಸರಿಯಾದ ಸಲಹೆ ನೀಡಲು ಸಾಧ್ಯವಾಗುವುದು

ಮತ್ತು ಇದರಿಂದ ಕಡಿಮೆ ನಷ್ಟ ಉಂಟಾಗುವುದು.

ಸಮಾಲೋಚನೆಗೆ ಒಳಪಡುವ ವ್ಯಕ್ತಿಗೆ ಪ್ರತಿಯೊಂದು ವಿವರವನ್ನು ತಿಳಿಸಬೇಕು, ಇದರಿಂದ ಅವನು ಸರಿಯಾದ ಸಲಹೆಯನ್ನು ನೀಡಬಹುದು ಮತ್ತು ಕನಿಷ್ಠ ಹಾನಿಯನ್ನುಂಟುಮಾಡಬಹುದು ಎಂಬ ನಿಯಮವೂ ಇದೆ.

ರಾತ್ರಿ ಸಮಯದಲ್ಲಿ ತನ್ನ ಗೆಳೆಯರೊಡನೆ ಮಾತನಾಡಿರಿ. ಇದರಿಂದ ಅನೇಕ ಸುದ್ದಿಗಳು ಲಭಿಸುವುವು. ಸುರಕ್ಷಾ ಸೇನೆಯಲ್ಲಿ ಹೆಚ್ಚಿನ ವ್ಯಕ್ತಿಗಳನ್ನು ಇರಿಸಬೇಕು. ಅವರನ್ನು ತನ್ನ ಸೈನ್ಯದಲ್ಲಿ ಹರಡಬೇಕು. ಹೆಚ್ಚಾಗಿ ಮಾಹಿತಿ ನೀಡದೇ ಅಚಾನಕ್ಕಾಗಿ ಅವರ ಸೇನಾ ಠಾಣಗಳ ಅವಲೋಕನ ನಡೆಸಬೇಕು. ಯಾರನ್ನು ತನ್ನ ಸುರಕ್ಷಾ ಠಾಣದಲ್ಲಿ ಅಸಡ್ಡೆಯಿಂದ ಕಾಣುವಿಯೋ ಅವರನ್ನು ಸರಿಯಾಗಿ ಶಿಕ್ಷಿಸಬೇಕು. ಶಿಕ್ಷೆಯನ್ನು ಕೊಡುವಾಗ ಮಿತಿಮೀರಬಾರದು. ರಾತ್ರಿಯ ಮೊದಲ ಭಾಗದ ಡ್ಯೂಟಿ ದೀರ್ಘವಾಗಿರಬೇಕು. ಏಕೆಂದರೆ ಆ ಸಮಯದಲ್ಲಿ ಎಚ್ಚರದಿಂದ ಇರುವುದು ಸುಲಭ. ರಾತ್ರಿಯ ಕೊನೆಯ ಭಾಗದ ಡ್ಯೂಟಿಯನ್ನು ಸ್ವಲ್ಪ ಕಡಿಮೆ ಇರಿಸಬೇಕು. ಶಿಕ್ಷೆಗೆ ಅರ್ಹರನ್ನು ಶಿಕ್ಷಿಸಲು ಭಯಪಡಬೇಡಿರಿ. ಅದರಲ್ಲಿ ಮೃದುತ್ವ ತೋರಿಸಬೇಡಿರಿ. ಶಿಕ್ಷೆ ನೀಡುವುದರಲ್ಲಿ ಅವಸರಪಡಲೂ ಬಾರದು ಪೂರ್ಣವಾಗಿ ಅಸಡ್ಡೆ ತೋರಿಸಲೂ ಬಾರದು. ಸೈನ್ಯದ ಬಗ್ಗೆ ಗಮನ ಹರಿಸದೇ ಇರಬೇಡಿರಿ. ಇದರಿಂದ ಅದು ಹಾಳಾಗುವುದು. ಅವರನ್ನು ಗುಟ್ಟಿನಲ್ಲಿ ಶೋಧನೆ ನಡೆಸಿ ಅವಮಾನಿಸಬಾರದು. ಅವರ ರಹಸ್ಯ ಸಂಗತಿಗಳನ್ನು ಜನರೊಡನೆ ಹೇಳಬೇಡಿರಿ. ಅವರ ಬಾಹ್ಯವನ್ನು ಮಾತ್ರ ನೋಡಿದರೆ ಸಾಕು. ವ್ಯರ್ಥವಾದ ಜನರ ಜೊತೆಗೆ ಕುಳಿತುಕೊಳ್ಳಬೇಡಿರಿ. ಸತ್ಯ ಮತ್ತು ಪ್ರಾಮಾಣಿಕ ಜನರೊಡನೆ ಕುಳಿತುಕೊಳ್ಳಬೇಕು. ಶತ್ರುಗಳೊಡನೆ ಮುಖಾಮುಖಿಯಾಗುವಾಗ ಧೈರ್ಯದಿಂದ ಇರಬೇಕು. ಅಂಜುಬುರುಕರಾಗಬೇಡಿರಿ, ಇದರಿಂದ ಜನರು ಕೂಡ ಹೇಡಿಯಾಗುವರು. ಯುದ್ಧ ಸಂಪತ್ತಿನಲ್ಲಿ ಮೋಸಗಾರಿಕೆ ಮಾಡಬೇಡಿರಿ. ಅದು ಬಡತನವನ್ನು ಸಮೀಪಗೊಳಿಸುವುದು ಹಾಗೂ ವಿಜಯ ಮತ್ತು ದೈವಿಕ ಸಹಾಯವನ್ನು ತಡೆಯುವುದು. ಚರ್ಚುಗಳಿಗೆ ತಮ್ಮನ್ನು ಅರ್ಪಿಸಿಕೊಂಡ ಜನರನ್ನು ನೀವು ಕಾಣಬಹುದು. ಆದ್ದರಿಂದ ನೀವು ಅವರನ್ನು ಮತ್ತು ಅವರು ತಮ್ಮನ್ನು ತಾವು ತೊಡಗಿಸಿಕೊಂಡಿರುವ ಕೆಲಸವನ್ನು ಬಿಟ್ಟುಬಿಡಿ. (ಅಲ್-ಕಮಲ್ ಫಿ ಅಲ್-ತಾರಿಖ್, ಸಂಪುಟ-2, ಪುಟ 253-254, ದಾರ್ ಅಲ್-ಕುತುಬ್ ಅಲ್-ಇಲ್‌ಮಿಯಾ ಬೈರುತ್ 2006)

ಆದ್ದರಿಂದ ಇದು ಸಂಪೂರ್ಣ ಕ್ರಿಯಾ ಯೋಜನೆಯಾಗಿದ್ದು, ಪ್ರತಿಯೊಬ್ಬ ನಾಯಕನಿಗೆ, ಪ್ರತಿಯೊಬ್ಬ ಹುದ್ದೆದಾರರಿಗೆ, ಕೆಲಸ ಮಾಡಲು, ಕಾರ್ಯನಿರ್ವಹಿಸಲು ಬಹಳ ಮುಖ್ಯವಾಗಿದೆ. ನಂತರ ಹಝ್ರತ್ ಅಬೂಬಕ್ಕರ್(ರ) ಅವರು ಹಝ್ರತ್ ಯಝೀದ್(ರ) ಅವರ ಕೈಯನ್ನು ಹಿಡಿದು ಅವರಿಗೆ ವಿದಾಯ ಹೇಳಿದರು: ನಾನು ಕೆಳಮಟ್ಟದ, ದುರ್ಬಲ, ಕೀಳರಿಮೆ ಅಥವಾ ಧಾರ್ಮಿಕವಾಗಿ ಅಲ್ಲದ ಮುಸಲ್ಮಾನರ ಗಣ್ಯವ್ಯಕ್ತಿಗಳ ಮೇಲೆ ಅಮೀರ್ ಆಗಿ ನೇಮಿಸಿದ ಮೊದಲ ವ್ಯಕ್ತಿ ನೀವಾಗಿದ್ದೀರಿ.

ಆದ್ದರಿಂದ ನೀವು ಅವರೊಂದಿಗೆ ಉತ್ತಮವಾಗಿ ವರ್ತಿಸಬೇಕು ಮತ್ತು ಅವರೊಂದಿಗೆ ಮೃದುವಾಗಿ ವರ್ತಿಸಬೇಕು ಮತ್ತು ನಿಮ್ಮ ತೋಳನ್ನು ಅವರ ಮೇಲೆ ಬಾಗಿಸಿ ಮತ್ತು ಪ್ರಮುಖ ವಿಷಯಗಳಲ್ಲಿ ಅವರನ್ನು ಸಂಪರ್ಕಿಸಿ, ಅವರೊಂದಿಗೆ ದಯೆ ತೋರಬೇಕು. ಸರ್ವಶಕ್ತನಾದ ಅಲ್ಲಾಹನು ನಿನ್ನ ಸಂಗಡಿಗರನ್ನು ದಯಪಾಲಿಸಲಿ ಮತ್ತು ನಂತರ ನಮ್ಮ ಖಲೀಫತ್ ಜವಾಬ್ದಾರಿಗಳನ್ನು ಪೂರೈಸಲು ನಮಗೆ ಸಹಾಯ ಮಾಡಲಿ ಎಂದು ಹೇಳಿದರು. ತದನಂತರ ಹಝ್ರತ್ ಯಝೀದ್ ತನ್ನ ಸೈನ್ಯವನ್ನು ತೆರೆದು ಸಿರಿಯಾಕ್ಕೆ ಹೊರಟರು.

ಹಝ್ರತ್ ಅಬುಬಕರ್(ರ) ರವರು ಪ್ರತಿದಿನ ಬೆಳಗ್ಗೆ ಫಜ್ರ್ ಮತ್ತು ಅಸರ್ ನಮಾಝಿನ ನಂತರ ಪ್ರಾರ್ಥಿಸುತ್ತಿದ್ದರು, ಓ ಅಲ್ಲಾಹನೇ! ನಾವು ಏನೂ ಇಲ್ಲದಿರುವಾಗ ನೀನು ನಮ್ಮನ್ನು ಸೃಷ್ಟಿಸಿದ್ದೀಯ. ನಂತರ ನೀನು ನಮ್ಮ ಮೇಲೆ ಕರುಣೆ ತೋರಿ ನಮ್ಮ ಬಳಿಗೆ ಸಂದೇಶವಾಹಕರನ್ನು ಕಳುಹಿಸಿದ್ದೀಯ, ನಂತರ ನಾವು ದಾರಿತಪ್ಪುತ್ತಿರುವಾಗ ನೀನು ನಮಗೆ ಮಾರ್ಗದರ್ಶನ ನೀಡಿದ್ದೀಯ ಮತ್ತು ನಾವು ನಂಬಿಕೆಯಿಲ್ಲದಿರುವಾಗ ನೀನು ನಮ್ಮ ಹೃದಯದಲ್ಲಿ ನಂಬಿಕೆಯ ಪ್ರೀತಿಯನ್ನು ಇಟ್ಟಿದ್ದೀಯ. ನಾವು ಕಡಿಮೆ ಸಂಖ್ಯೆಯಲ್ಲಿದ್ದೆವು ಮತ್ತು ನೀನು ನಮ್ಮನ್ನು ಅನೇಕರನ್ನಾಗಿ ಮಾಡಿದೀಯ. ನಾವು ಚದುರಿಹೋಗಿದ್ದೆವು ನೀನು ನಮ್ಮನ್ನು ಒಟ್ಟಿಗೆ ಸೇರಿಸಿದ್ದೀಯ. ನಾವು ದುರ್ಬಲರಾಗಿದ್ದೆವು ನೀನು ನಮಗೆ ಶಕ್ತಿಯನ್ನು ನೀಡಿದ್ದೀಯ. ನಂತರ ನೀನು ನಮ್ಮ ಮೇಲೆ ಜಿಹಾದ್ ಅನ್ನು ಕಡ್ಡಾಯಗೊಳಿಸಿದ್ದೀಯ ಮತ್ತು ಬಹುದೇವತಾವಾದಿಗಳು **ಲಾಇಲಾಹ ಇಲ್ಲಲ್ಲಾಹ್** ಎಂದು ಒಪ್ಪಿಕೊಳ್ಳುವವರೆಗೂ ಅವರ ವಿರುದ್ಧ ಹೋರಾಡಲು ನಮಗೆ ಆದೇಶಿಸಿದ್ದೀಯ ಮತ್ತು ಅವರು ತಮ್ಮ ಕೈಯಿಂದಲೇ ಜಿಝ್ಯವನ್ನು ಪಾವತಿಸುತ್ತಾರೆ ಮತ್ತು ಅವರು ಅಸಹಾಯಕರಾಗುತ್ತಾರೆ. ಅವರು ಮುಸ್ಲಿಮರಾಗಬೇಕು ಅಥವಾ ಜಿಝ್ಯವನ್ನುಯ ಪಾವತಿಸಬೇಕು. ಓ ಅಲ್ಲಾಹನೇ! ನಿನ್ನೊಂದಿಗೆ ಪಾಲುದಾರರನ್ನು ಹೊಂದಿರುವ ಮತ್ತು ನಿನ್ನ ಹೊರತಾಗಿ ಇತರ ದೇವರುಗಳನ್ನು ಪೂಜಿಸುವ ನಿನ್ನ ಈ ಶತ್ರುವಿನ ವಿರುದ್ಧ ಜಿಹಾದ್‌ಗೆ ಪ್ರತಿಯಾಗಿ ನಾವು ನಿನ್ನ ಸಂತೋಷವನ್ನು ಬಯಸುತ್ತೇವೆ. ಓ ಅಲ್ಲಾಹನೇ! ನಿನ್ನ ಹೊರತು ಬೇರೆ ಯಾರು ದೇವರಿಲ್ಲ. ನಿನ್ನ ಮಹಿಮೆ ಅದಕ್ಕಿಂತ ಹೆಚ್ಚಿನದು ಎನ್ನುತ್ತಾರೆ ದಬ್ಬಾಳಿಕೆಗಾರರು. ಓ ಅಲ್ಲಾಹನೇ! ತಮ್ಮ ವಿಗ್ರಹಾರಾಧಕ ಶತ್ರುಗಳ ವಿರುದ್ಧ ನಿನ್ನ ಮುಸ್ಲಿಂ ಸೇವಕರಿಗೆ ಸಹಾಯ ಮಾಡು. ಓ ಅಲ್ಲಾಹನೇ! ಅವರಿಗೆ ಸುಲಭ ಜಯವನ್ನು ನೀಡು ಮತ್ತು ಅವರಿಗೆ ಸಂಪೂರ್ಣವಾಗಿ ಸಹಾಯ ಮಾಡು. ಅವರಲ್ಲಿ ಧೈರ್ಯ ಕಡಿಮೆ ಇರುವವರನ್ನು ಧೈರ್ಯಶಾಲಿಯನ್ನಾಗಿ ಮಾಡು, ಅವರ ಪಾದಗಳನ್ನು ಸ್ಥಿರಗೊಳಿಸು ಮತ್ತು ಅವರ ಶತ್ರುಗಳನ್ನು ತತ್ತರಿಸು, ಅವರ ಹೃದಯದಲ್ಲಿ ಭಯವನ್ನು ಹುಟ್ಟುಹಾಕು, ಅವರನ್ನು ನಾಶಮಾಡು, ಅವರನ್ನು ಬೇರಿನಿಂದ ಕತ್ತರಿಸು, ಅವರ ಶತ್ರುಗಳನ್ನು ತತ್ತರಿಸುವಂತೆ ಮಾಡು ಮತ್ತು ಅವರ ಜಮೀನುಗಳು, ಅವರ ಮನೆಗಳು, ಅವರ ಸಂಪತ್ತು ಮತ್ತು ಅವರ ಸಂಕೇತಗಳಿಗೆ ನಮ್ಮನ್ನು ಉತ್ತರಾಧಿಕಾರಿಯನ್ನಾಗಿ ಮಾಡು ಮತ್ತು ನಮ್ಮ ರಕ್ಷಕ ಮತ್ತು ಕರುಣೆಯನ್ನು ನಮಗೆ ನೀಡು. ಮತ್ತು ನಮ್ಮ ವ್ಯವಹಾರಗಳನ್ನು ಸರಿಯಾಗಿ ಹೊಂದಿಸು. ನಿನ್ನ ಅನುಗ್ರಹದಲ್ಲಿ ಪಾಲ್ಗೊಳ್ಳಲು ಕೃತಜ್ಞರಾಗಿರುವ ಜನರಲ್ಲಿ ನಮ್ಮನ್ನು ಮಾಡು. ದಯವಿಟ್ಟು ನಮ್ಮನ್ನು ಮತ್ತು ವಿಶ್ವಾಸಿ ಪುರುಷರು ಮತ್ತು ವಿಶ್ವಾಸಿ ಮಹಿಳೆಯರನ್ನು ಮತ್ತು ಮುಸ್ಲಿಂ ಪುರುಷರು ಮತ್ತು ಮುಸ್ಲಿಂ ಮಹಿಳೆಯರನ್ನು ಕ್ಷಮಿಸು. ಬದುಕಿರುವವರಿಗೆ ಮತ್ತು ಸತ್ತವರಿಗೂ ಕ್ಷಮಿಸು. ಅಲ್ಲಾಹನು ನಮ್ಮನ್ನು ಮತ್ತು ನಿಮ್ಮನ್ನು ಇಹಲೋಕದಲ್ಲಿ ಮತ್ತು ಪರಲೋಕದಲ್ಲಿ ಸ್ಥಿರಗೊಳಿಸಲಿ. ನಿಜವಾಗಿಯು, ಅವನು ವಿಶ್ವಾಸಿಗಳಿಗೆ ಅತ್ಯಂತ ಕಾರುಣ್ಯನಿಧಿಯೂ ಮತ್ತು ಕರುಣಾಮಯಿಯೂ ಆಗಿದ್ದಾನೆ. (ಅಲ್-ಇಕ್ತಿಫಾ ಬಿಮಾ ತಝುಮ್ಮನ...... ಸಂಪುಟ-2, ಭಾಗ-1, ಪುಟಗಳು 118-119, ಆಲಂ ಅಲ್-ಕುತುಬ್ ಬೈರುತ್ 1997)

ಎರಡನೆಯ ಸೈನ್ಯವೆಂದರೆ ಶುರಾಹ್ಬೀಲ್ ಬಿನ್ ಹಸ್ನಾ ಅವರದ್ದಾಗಿತ್ತು. ಹಝ್ರತ್ ಶುರಹ್ಬೀಲ್ ಬಿನ್ ಹಸ್ನಾ ರವರ ತಂದೆಯ ಹೆಸರು ಅಬ್ದುಲ್ಲಾ ಬಿನ್ ಮುತಾಅ ಮತ್ತು ಅವರ ತಾಯಿಯ ಹೆಸರು ಹಸನಾ ಎಂದಾಗಿತ್ತು. ಅವರ ಉಪನಾಮ ಅಬು ಅಬ್ದುಲ್ಲಾ ಎಂದಾಗಿತ್ತು ಮತ್ತು ಹಝ್ರತ್ ಶುರಹ್ಬೀಲ್ ಅವರ ತಂದೆ ಅವರ ಬಾಲ್ಯದಲ್ಲಿ ನಿಧನರಾದರು ಮತ್ತು ಅವರ ತಾಯಿ ಹಸ್ನಾ ನಂತರ ಅವರನ್ನು ಶುರಹ್ಬೀಲ್ ಬಿನ್ ಹಸ್ನಾ ಎಂದು ಕರೆಯಲಾಯಿತು. ಹಝ್ರತ್ ಶುರಹ್ಬೀಲ್ ಇಸ್ಲಾಂಗೆ ಮತಾಂತರಗೊಂಡವರಲ್ಲಿ ಒಬ್ಬರಾಗಿದ್ದರು. ಅವರು ಖಿಲಾಫತೆ ರಾಶಿದಃದಲ್ಲಿ ಪ್ರಸಿದ್ಧ ಸೇನಾಧಿಪತಿಗಳಲ್ಲಿ ಒಬ್ಬರಾಗಿದ್ದರು. ಅವರು ಹದಿನೆಂಟು ಹಿಜ್ರಿಯಲ್ಲಿ ಅರವತ್ತಾರನೇ ವಯಸ್ಸಿನಲ್ಲಿ ನಿಧನರಾದರು. (ಅಸದುಲ್-ಗಾಬಾ ಫಿ ಮಾರಿಫತ್ ಅಲ್-ಸಹಾಬಾ, ಸಂಪುಟ-2, ಪುಟಗಳು 619-620, ದಾರುಲ್ ಕುತುಬ್ ಅಲ್-ಇಲಮಿಯಾ ಬೈರುತ್)

ಹಝ್ರತ್ ಶುರಹ್ಬೀಲ್ ಬಿನ್ ಹಸ್ನಾ(ರ) ರ ನಿರ್ಗಮನಕ್ಕಾಗಿ, ಹಝ್ರತ್ ಅಬುಬಕರ್(ರ) ಅವರು ಹಝ್ರತ್ ಯಝೀದ್ ಬಿನ್ ಅಬುಸುಫ್ಯಾನ್(ರ) ರವರ ನಿರ್ಗಮನದ ಮೂರು ದಿನಗಳ ನಂತರದ ದಿನಾಂಕವನ್ನು ನಿಗದಿಪಡಿಸಿದರು. ಮೂರನೇ ದಿನ ಕಳೆದಾಗ, ಅವರು ಹಝ್ರತ್ ಶುರಹ್ಬೀಲ್(ರ) ಅವರನ್ನು ಬೀಳ್ಕೊಟ್ಟು ಹೇಳಿದರು ಓ ಶುರಹ್ಬೀಲ್! ನಾನು ಯಝೀದ್ ಬಿನ್ ಅಬು ಸುಫ್ಯಾನ್(ರ)ಗೆ ಮಾಡಿದ ಉಯಿಲನ್ನು ನೀವು ಕೇಳಲಿಲ್ಲವೇ? ಹೌದು ಕೇಳಿಸಿಕೊಂಡಿದ್ದೇನೆ ಎಂದು ಹೇಳಿದರು. ಅದಕ್ಕೆ ಹಝ್ರತ್ ಅಬೂಬಕರ್(ರ) ಹೇಳಿದರು, ನಾನು ನಿಮಗೆ ಹಾಗೆಯೇ ಉಯಿಲು ನೀಡುತ್ತೇನೆ ಮತ್ತು ಯಝೀದ್ ಅವರಿಗೆ ಪ್ರಸ್ತಾಪಿಸಲು ಮರೆತಿರುವ ವಿಷಯಗಳನ್ನು ಸಹ ನಾನು ನೀಡುತ್ತೇನೆ.

ನಾನು ನಿಮಗೆ ಸಮಯಕ್ಕೆ ಸರಿಯಾಗಿ ನಮಾಝ್ ನಿರ್ವಹಿಸಲು ಉಪದೇಶಿಸುತ್ತೇನೆ ಮತ್ತು ನೀವು ವಿಜಯಶಾಲಿಯಾಗುವವರೆಗೆ ಅಥವಾ ಹುತಾತ್ಮರಾಗುವವರೆಗೆ ಯುದ್ಧದ ದಿನದಂದು ದೃಢವಾಗಿರಲು ಮತ್ತು ರೋಗಿಗಳನ್ನು ಭೇಟಿ ಮಾಡಲು ಮತ್ತು ಅಂತ್ಯಕ್ರಿಯೆಯಲ್ಲಿ ಪಾಲ್ಗೊಳ್ಳಲು ಮತ್ತು ಪ್ರತಿ ಪರಿಸ್ಥಿತಿಯಲ್ಲಿ ಅಲ್ಲಾಹನನ್ನು ಹೇರಳವಾಗಿ ಸ್ಮರಿಸುವಂತೆ ನಾನು ನಿಮಗೆ ಆಜ್ಞಾಪಿಸುತ್ತೇನೆ. ಯಝೀದ್ ಈಗಾಗಲೇ ಈ ಗುಣಲಕ್ಷಣಗಳನ್ನು ಅಳವಡಿಸಿಕೊಂಡಿದ್ದಾರೆ ಮತ್ತು ಸಿರಿಯಾಕ್ಕೆ ಹೋಗುವ ಮುಂಚೆಯೇ ಅವುಗಳನ್ನು ಮುಂದುವರೆಸುತ್ತಿದ್ದಾರೆ ಎಂದು ಅಬು ಸುಫ್ಯಾನ್(ರ) ಅವರನ್ನು ಹೇಳಿದರು. ಈಗ ಅವರು ಅದನ್ನು ಹೆಚ್ಚು ಅಗತ್ಯವಾಗಿ ಮಾಡುತ್ತಾರೆ ಇನ್‌ಶಾಅಲ್ಲಾಹ್. ಹಝ್ರತ್ ಶುರಹ್ಬೀಲ್

ಉತ್ತರಿಸಿದರು: ನಾವು ಸಹಾಯಕ್ಕಾಗಿ ಅಲ್ಲಾಹನನ್ನು ಕೇಳುತ್ತೇವೆ, ಅಲ್ಲಾಹನು ಬಯಸಿದಂತೆ ನಡೆಯುತ್ತದೆ. ತದನಂತರ ಅವರು ಹಝ್ರತ್ ಅಬೂಬಕರ್(ರ) ಅವರನ್ನು ಬೀಳ್ಕೊಟ್ಟರು ಮತ್ತು ಅವರ ಸೈನ್ಯದೊಂದಿಗೆ ಸಿರಿಯಾಕ್ಕೆ ತೆರಳಿದರು. ಹಝ್ರತ್ ಶುರಹ್ಬೀಲ್ ಅವರ ಸೈನ್ಯವು 3,000 ಮತ್ತು 4,000 ರ ನಡುವೆ ಇತ್ತು. ಅವರಿಗೆ ನೀವು ತಬೂಕ್ ಮತ್ತು ಬಲ್ಕಾಗೆ ಹೋಗಿ ನಂತರ ಬುಸ್ರಾಗೆ ತಿರುಗಲು ಆದೇಶಿಸಿದರು ಮತ್ತು ಇದು ಅಂತಿಮ ತಾಣವಾಗಿದೆ. ಬುಸ್ರಾ ಸಿರಿಯಾದ ಪ್ರಾಚೀನ ಮತ್ತು ಪ್ರಸಿದ್ಧ ನಗರವಾಗಿದೆ. ಹಝ್ರತ್ ಶುರಹ್ಬೀಲ್ ಬಲ್ಕಾಗೆ ಹೊರಟರು. ಯಾವುದೇ ಗಮನಾರ್ಹವಾದ ಘಟನೆ ಇಲ್ಲಿ ಸಂಭವಿಸಲಿಲ್ಲ. ಬಲ್ಕಾವು ಸಿರಿಯಾದ ಪ್ರದೇಶದಲ್ಲಿದೆ. ಅವರ ಸೈನ್ಯವು ಹಝ್ರತ್ ಅಬುಉಬೈದಾ ಬಿನ್ ಅಲ್‌ಜರಾಹ್(ರ) ಅವರ ಎಡಭಾಗದಲ್ಲಿ ಮತ್ತು ಬಲಭಾಗದಲ್ಲಿ ಅಮ್ರ್ ಬಿನ್ ಆಸ್(ರ)ರವರ ಸೈನ್ಯವು ನಡೆಯುತ್ತ ಬುಲ್ಕಾಗೆ ತಲುಪಿತು ಮತ್ತು ಬುಸ್ರಾಗೆ ತಲುಪಿ ಅದನ್ನು ಸ್ವಾಧೀನಪಡಿಸಿಕೊಂಡರು ಆದರೆ ವಿಜಯಶಾಲಿಯಾಗಲಿಲ್ಲ ಏಕೆಂದರೆ ಇದು ರೋಮನ್ನರ ಸಂರಕ್ಷಣೆ ಹಾಗೂ ಪ್ರಬಲವಾದ ಕೇಂದ್ರಗಳಲ್ಲಿ ಒಂದಾಗಿತ್ತು. (ಸಯ್ಯದುನಾ ಅಬೂಬಕರ್ ಸಿದ್ದೀಖ್(ರ) ಶಖ್ಸಿಯ್ಯತ್ ಔರ್ ಕಾರ್ನಾಮೆ, ಅಲಿ ಮುಹಮ್ಮದ್ ಅಲ್-ಸಲಾಬಿ, ಪುಟಗಳು 446-447, ಅಲ್-ಫುರ್ಕಾನ್ ಟ್ರಸ್ಟ್, ಖಾನ್‌ಗಡ್, ಪಾಕಿಸ್ತಾನ್) (ಅಲ್‌ಇಕ್ತಿಫಾ ಬಿಮಾ ತಝುಮನ್ನ ಮಿನ್ ಮಘಾಝಿ...... ಸಂಪುಟ-2, ಭಾಗ-1, ಪುಟ-120, ಆಲಿಮುಲ್ ಕುತುಬ್ ಬೈರೂತ್ 1997) (ಫರ್ಹಂಗ್ ಸೀರತ್, ಪುಟ 58,61, ಝುವಾರ ಅಕಾಡೆಮಿ ಕರಾಚಿ)

ಮೂರನೇ ಸೈನ್ಯವು ಅಬು ಉಬೈದಾ ಬಿನ್ ಜರ್ರಾಹ್(ರ)ರವರದ್ದಾಗಿತ್ತು. ಹಝ್ರತ್ ಅಬುಉಬೈದಾ ಬಿನ್ ಜರ್ರಾಹ್(ರ) ಅವರ ಹೆಸರು ಅಮೀರ್ ಬಿನ್ ಅಬ್ದುಲ್ಲಾ ಮತ್ತು ಅವರ ತಂದೆಯ ಹೆಸರು ಅಬ್ದುಲ್ಲಾ ಬಿನ್ ಜರ್ರಾಹ್ ಆಗಿತ್ತು. ಹಝ್ರತ್ ಅಬುಉಬೈದಾ(ರ) ತಮ್ಮ ಉಪನಾಮದಿಂದಾಗಿ ಹೆಚ್ಚು ಪ್ರಸಿದ್ಧರಾಗಿದ್ದಾರೆ ಮತ್ತು ಅವರ ವಂಶಾವಳಿಯು ಅವರ ಅಜ್ಜ ಜರ್ರಾಹ್ ಅವರೊಂದಿಗೆ ಸಂಬಂಧ ಹೊಂದಿದೆ. ಪೈಗಂಬರ್(ಸ) ಅವರು ತಮ್ಮ ಜೀವಿತಾವಧಿಯಲ್ಲಿ ಸ್ವರ್ಗದ ಸುವಾರ್ತೆಯನ್ನು ನೀಡಿದ ಹತ್ತು ಸಹಚರರಲ್ಲಿ ನೀವೂ ಸೇರಿದ್ದೀರಿ. ಇದನ್ನು ಅಶ್ರಾ ಮುಬಶ್ಶಿರ ಎಂದು ಕರೆಯಲಾಗುತ್ತದೆ. ಅವರು ಹಿಜ್ರಿ 18 ರಲ್ಲಿ ನಿಧನರಾದರು. ಆಗ ಅವರಿಗೆ ಐವತ್ತೆಂಟು ವರ್ಷ. (ಅಲ್-ಅಸಾಬಾ ಫಿ ತಮೀಜ್ ಸಹಬಾ, ಭಾಗ-3, ಪುಟ-475, ಆಮಿರ್ ಬಿನ್ ಅಬ್ದುಲ್ಲಾ, ದಾರ್ ಅಲ್-ಕುತುಬ್ ಅಲ್-ಇಲ್‌ಮಿಯಾ ಬೈರುತ್, ಲೆಬನಾನ್ 2005) (ಅಸದುಲ್‌ಗಾಬ ಫೀ ಮಾರಿಫತಿಸ್ಸಹಾಬ, ಸಂಪುಟ-3, ಪುಟ-126, ಆಮಿರ್ ಬಿನ್ ಅಬ್ದುಲ್ಲಾ, ದಾರುಲ್ ಕುತುಬ್ ಇಲ್‌ಮಿಯ 2008) (ಇಸ್ತಿಯಾಬ್, ಸಂಪುಟ-2, ಪುಟ-343, ದಾರ್ ಅಲ್-ಕುತುಬ್ ಅಲ್-ಇಲ್‌ಮಿಯಾ ಬೈರುತ್ 2002)

ಹಝ್ರತ್ ಅಬುಬಕರ್(ರ) ರವರು ಸಿರಿಯಾದ ಕಡೆಗೆ ಕಳುಹಿಸಿದ ಮೂರನೇ ಸೈನ್ಯ, ನಾನು ಹೇಳಿದಂತೆ, ಅದರ ಸೇನಾಧಿಪತಿ ಹಝ್ರತ್ ಅಬು ಉಬೈದಾ(ರ) ಆಗಿದ್ದರು. ಅವರನ್ನು ಹಿಮ್ಸ್‌ಗೆ ಕಳುಹಿಸಲಾಯಿತು. ಹಿಮ್ಸ್ ಡಮಾಸ್ಕಸ್ ಬಳಿಯ ಸಿರಿಯಾದ ಪ್ರಾಚೀನ ಮತ್ತು ದೊಡ್ಡ ನಗರವಾಗಿತ್ತು. ಹಝ್ರತ್ ಅಬು ಉಬೈದಾ(ರ) ಅವರ ಸೈನ್ಯವು ಏಳು ಸಾವಿರದಷ್ಟಿದ್ದರೆ, ಒಂದು ವರದಿಯ ಪ್ರಕಾರ ಅವರ ಸೈನ್ಯವು ಮೂರು ಸಾವಿರದಿಂದ ನಾಲ್ಕು ಸಾವಿರದವರೆಗೆ ಇತ್ತು. ಹಝ್ರತ್ ಅಬು ಉಬೈದಾ(ರ) ಅವರು ದಾರಿಯಲ್ಲಿ ಸಾಗುತ್ತಿರುವಾಗ ಬುಲ್ಕಾದ ಮಾಬ್ ಎಂಬ ಹಳ್ಳಿಯಿಂದ ಹಾದುಹೋದರು. ಇದು ಕೇವಲ ಒಂದು ನಗರವಿರಲಿಲ್ಲ ಬದಲಿಗೆ ಡೇರೆಗಳ ಹಳ್ಳಿಯಾಗಿತ್ತು. ನೀವು ಅಲ್ಲಿನ ಜನರೊಂದಿಗೆ ಯುದ್ಧ ಮಾಡಿದರು ಆದರೆ ಅವರು ನಿಮ್ಮನ್ನು ಸಂಧಾನ ಮಾಡಿಕೊಳ್ಳುವುದಾಗಿ ಕೇಳಿಕೊಂಡರು. ಆದ್ದರಿಂದ ಅವರೊಂದಿಗೆ ಸಂಧಾನ ಮಾಡಿಕೊಳ್ಳಲಾಯಿತು. ಇದು ಸಿರಿಯಾ ಪ್ರದೇಶದಲ್ಲಿ ನಡೆದ ಮೊದಲ ಸಂಧಾನವಾಗಿತ್ತು. (ತಾರಿಖ್ ಅಲ್-ತಬರಿ, ಸಂಪುಟ-2, ಪುಟ-333, 341, ದಾರುಲ್ ಕುತುಬ್ ಅಲ್-ಇಲ್‌ಮಿಯಾ ಬೈರುತ್ 2012) (ಸಯ್ಯದುನಾ ಅಬೂಬಕರ್ ಸಿದ್ದೀಖ್(ರ), ಸಲಾಬಿ, ಪುಟ-447)

ಹಝ್ರತ್ ಅಬುಬಕರ್(ರ) ರವರು ಹಝ್ರತ್ ಅಬು ಉಬೈದಾ(ರ) ರವರ ಜೊತೆಗೆ ಖೈಸ್ ಬಿನ್ ಹುಬಿರಾ ಅವರನ್ನು ಸಹ ಕಳುಹಿಸಿದರು. ಹಝ್ರತ್ ಅಬುಬಕರ್(ರ) ರವರು ಅಬು ಉಬೈದಾ ಅವರ ಬಗ್ಗೆ ಉಯಿಲು ಮಾಡುವಾಗ ಹೇಳಿದರು: ನಿಮ್ಮೊಂದಿಗೆ ಅರೇಬಿಯಾದ ಕುದುರೆ ಸವಾರರಲ್ಲಿ ದೊಡ್ಡ ಗೌರವ ಮತ್ತು ಸ್ಥಾನಮಾನದ ವ್ಯಕ್ತಿ ಇದ್ದಾರೆ.

ಜಿಹಾದ್ ವಿಷಯದಲ್ಲಿ ಇವರಿಗಿಂತ ಹೆಚ್ಚು ಯಾವುದೇ ಉತ್ತಮ ಉದ್ದೇಶವಿಲ್ಲ ಎಂದು ನಾನು ಭಾವಿಸುತ್ತೇನೆ. ಮುಸ್ಲಿಮರು ಅವರ ಅಭಿಪ್ರಾಯ ಮತ್ತು ಸಲಹೆ ಮತ್ತು ಹೋರಾಟದ ಶಕ್ತಿಗೆ ಅಸಡ್ಡೆ ಇರುವಂತಿರುವುದಿಲ್ಲ. ಅವನನ್ನು ನಿಮ್ಮ ಹತ್ತಿರ ಇಟ್ಟುಕೊಳ್ಳಿ ಮತ್ತು ಅವನನ್ನು ಸಂತೋಷದಿಂದ ನೋಡಿಕೊಳ್ಳಿ ಮತ್ತು ನಿಮಗೆ ಅವನ ಅಗತ್ಯವಿಲ್ಲ ಎಂದು ಭಾವಿಸುವಂತೆ ಮಾಡಬೇಡಿ. ಇದರಿಂದ ನಿಮ್ಮನ್ನು ಅವರ ಒಳ್ಳೆಯ ಇಚ್ಛೆಯಲ್ಲಿ ಇರಿಸುತ್ತದೆ ಮತ್ತು ಶತ್ರುಗಳ ವಿರುದ್ಧದ ಅವನ ಪ್ರಯತ್ನಗಳು ನಿಮ್ಮೊಂದಿಗೆ ಇರುತ್ತದೆ. ಹಝ್ರತ್ ಅಬು ಉಬೈದಾ(ರ) ಅಲ್ಲಿಂದ ಹೊರಟು ಹೋದಾಗ ಹಝ್ರತ್ ಅಬೂಬಕರ್(ರ) ಖೈಸ್ ಬಿನ್ ಹುಬೈರಾ ಅವರನ್ನು ಕರೆದು, "ನಾನು ನಿಮ್ಮನ್ನು ಉಮ್ಮತ್ತಿನ ಪಾರುಪತ್ಯಗಾರರಾದ ಅಬು ಉಬೈದಾ(ರ) ಅವರೊಂದಿಗೆ ಕಳುಹಿಸುತ್ತಿದ್ದೇನೆ" ಎಂದು ಹೇಳಿದರು. ಅವರನ್ನು ಯಾರಾದರು ಹಿಂಸಿಸಿದರೆ ಅವರು ಯಾರನ್ನು ಹಿಂಸಿಸುವಿದಿಲ್ಲ ಮತ್ತು ಯಾರಾದರು ಅವರೊಂದಿಗೆ ಕೆಟ್ಟದಾಗಿ ನಡೆಸಿಕೊಂಡರೆ ಅವರನ್ನು ಅವರು ಕ್ಷಮಿಸುತ್ತಾರೆ ಮತ್ತು ಯಾರಾದರು ಅವರೊಂದಿಗೆ ಸಂಬಂಧವನ್ನು ಮುರಿದು ಹಾಕಿದರೆ ಅವರು ಅದನ್ನು ಸರಿಪಡಿಸಲು ಪ್ರಯತ್ನಿಸುತ್ತಾರೆ. ಅವನು ವಿಶ್ವಾಸಿಗಳಿಗೆ ತುಂಬಾ ಕರುಣೆಯಿಂದ ವರ್ತಿಸುತ್ತಾರೆ ಆದರೆ ಅವಿಶ್ವಾಸಿಗಳೊಂದಿಗೆ ಕಠುವಾಗಿ ವರ್ತಿಸುತ್ತಾರೆ. ನೀವು ಅವರ ಆದೇಶಗಳಿಗೆ ಅವಿಧೇಯರಾಗಬೇಡಿ ಮತ್ತು ಅವರು ನಿಮಗೆ ಒಳ್ಳೆಯದನ್ನು ಮಾತ್ರ ಆದೇಶಿಸುತ್ತಾರೆ. ನಿಮ್ಮ ಮಾತನ್ನು ಕೇಳಬೇಕೆಂದು ನಾನು ಅವರಿಗೆ ಆಜ್ಞಾಪಿಸಿದ್ದೇನೆ. ಆದ್ದರಿಂದ, ನೀವು ಅಲ್ಲಾಹನ ಧರ್ಮನಿಷ್ಠೆಯಿಂದ ಅವರಿಗೆ ಸಲಹೆ ನೀಡಬೇಕು. ಬಹುದೇವತೆ ಮತ್ತು ಅಜ್ಞಾನದ ದಿನಗಳಲ್ಲಿ ನೀವು ಅನುಭವಿ ಯುದ್ಧ ನಾಯಕರಾಗಿದ್ದೀರಿ ಎಂದು ನಾವು ಕೇಳುತ್ತಿದ್ದೇವೆ, ಆದರೆ ಅಜ್ಞಾನದಲ್ಲಿ ಪಾಪ ಮತ್ತು ಅಪನಂಬಿಕೆ ಕಂಡುಬಂದಿದೆ. ಆದ್ದರಿಂದ ಇಸ್ಲಾಮಿನ ಸ್ಥಿತಿಯಲ್ಲಿ ನೀವು ನಿಮ್ಮ ಶಕ್ತಿ ಮತ್ತು ಶೌರ್ಯವನ್ನು ಅಲ್ಲಾಹನೊಂದಿಗೆ ಪಾಲುದಾರರನ್ನಾಗಿ ಮಾಡುವವರ ಮತ್ತು ಅವಿಶ್ವಾಸಿಗಳ ವಿರುದ್ಧ ಬಳಸಿ. ಇದರಲ್ಲಿ, ಸರ್ವಶಕ್ತನಾದ ಅಲ್ಲಾಹನು ನಿಮಗಾಗಿ ದೊಡ್ಡ ಪ್ರತಿಫಲವನ್ನು ಮತ್ತು ಮುಸ್ಲಿಮರಿಗೆ ಗೌರವ ಮತ್ತು ಪ್ರಾಬಲ್ಯವನ್ನು ನೀಡಿದ್ದಾನೆ. ಈ ಸಲಹೆಯನ್ನು ಕೇಳಿದ ಖೈಸ್ ಬಿನ್ ಹುಬೈರಾ ಹೇಳಿದರು, ನೀವು ಜೀವಂತವಾಗಿದ್ದರೆ ಮತ್ತು ನಾನು ಜೀವಂತವಾಗಿದ್ದರೆ ನೀವು ನನ್ನ ಬಗ್ಗೆ ಮುಸ್ಲಿಮರ ರಕ್ಷಣೆಗಾಗಿ ಮತ್ತು ಅವಿಶ್ವಾಸಿಗಳ ವಿರುದ್ಧ ಜಿಹಾದ್ಗಾಗಿ ಎಂತಹ ಸುದ್ದಿಗಳನ್ನು ಸ್ವೀಕರಿಸುವಿರಿ ಎಂದರೆ ಅದು ನಿಮ್ಮನ್ನು ಮೆಚ್ಚಿಸುತ್ತದೆ ಮತ್ತು ನಿಮಗೆ ಸಂತೋಷವನ್ನು ನೀಡುತ್ತದೆ. ಹಝ್ರತ್ ಅಬುಬಕರ್(ರ) ಹೇಳಿದರು: ನಿಮ್ಮಂತಹ ವ್ಯಕ್ತಿ ಮಾತ್ರ ಇದನ್ನು ಮಾಡಬಹುದು. ಜಾಬಿಯಾದಲ್ಲಿ ಹಝ್ರತ್ ಅಬೂಬಕರ್(ರ) ಅವರನ್ನು ರೊಮನ್ನರ ಎರಡು ಸೇನಾಧಿಪತಿಗಳನ್ನು ಕೊಂದಿದ ಸುದ್ದಿಯನ್ನು ಆಲಿಸಿದಾಗ ಅವರು ಹೇಳಿದರು: ಖೈಸ್ ತಮ್ಮ ಮಾತನ್ನು ನಿಜವಾಗಿಸಿದರು ಮತ್ತು ಅವರ ವಾಗ್ದಾನವನ್ನು ಪೂರೈಸಿದರು. (ತಾರೀಖ್ ದಮಿಶ್ಕ್ ಅಲ್‌ಕಬೀರ್ ಲಿಇಬ್ನೆ ಅಸಾಕರ್, ಭಾಗ-52, ಪುಟ-336-337, ದಾರ್ ಅಹ್ಯಾ ಅಲ್-ತುರಾಸುಲ್-ಅರಬಿ, ಬೈರುತ್, 2001)

ಈ ಪ್ರಸ್ತಾಪ ಮುಂದುವರೆಯುವುದು.

ಈಗ ನಾನು ಒಬ್ಬ ಶಹೀದ್‌ರ ಬಗ್ಗೆ ಪ್ರಸ್ತಾಪಿಸುವೆನು. ಆಗಸ್ಟ್ 12ರಂದು ರಬ್ವದಲ್ಲಿ ಶಹೀದ್ ಆದ ಸನ್ಮಾನ್ಯ ನಸೀರ್ ಅಹ್ಮದ್ ಸಾಹಿಬ್. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅಬ್ದುಲ್‌ಗನಿ ಸಾಹಿಬ್‌ರ ಮಗನಾಗಿದ್ದರು.

ವಿವರ ಪ್ರಕಾರ ನಸೀರ್ ಅಹ್ಮದ್ ಸಾಹಿಬ್ ಬಸ್‌ಸ್ಟಾಪ್‌ನಲ್ಲಿ ಪತ್ರಿಕೆಗಳನ್ನು ಮಾರಾಟ ಮಾಡುವ ಒಬ್ಬ ಸ್ನೇಹಿತನ ಸಮೀಪ ನಿಂತಿದ್ದರು. ಆಗ ಒಬ್ಬ ಧಾರ್ಮಿಕ ಹುಚ್ಚನಾದ ಹಾಫಿಝ್ ಶಹ್‌ಝಾದ್ ಹಸನ್ ಅಲ್ಲಿಗೆ ಬಂದನು. ನೀವು ಅಹ್ಮದಿಯಾಗಿರುವಿರಾ ಎಂದು ನಸೀರ್ ಸಾಹಿಬ್‌ರೊಡನೆ ಅವನು ಕೇಳಿದನು. ನನ್ನ ಸಂಬಂಧ ಅಹ್ಮದಿಯಾ ಜಮಾಅತಿನೊಂದಿಗೆ ಆಗಿದೆ ಎಂದು ನಸೀರ್ ಸಾಹಿಬ್ ಹೇಳಿದರು. ಆಗ ಜಮಾಅತಿನ ವಿರುದ್ಧ ಘೋಷಣೆ ಕೂಗಲು ಅವರೊಡನೆ ಹೇಳಿದರು. ನಿರಾಕರಿಸಿದಾಗ ಅವನು ತನ್ನ ಚೀಲದಿಂದ ಖಂಜರವನ್ನು ತೆಗೆದು ಘೋಷಣೆ ಕೂಗುತ್ತಾ ನಸೀರ್ ಅಹ್ಮದ್ ಸಾಹಿಬ್‌ರ ಮೇಲೆ ಹಲ್ಲೆ ನಡೆಸಿದನು. ಅನೇಕ ಬಾರಿ ಚೂರಿಯಿಂದ ಬೀಸಿದಾಗ ಕೆಲವೇ ಸೆಕೆಂಡ್‌ಗಳಲ್ಲಿ ಅವರ ಜೀವ ಹೋಯಿತು. ಶಹೀದ್ ಆದ ಸಮಯದಲ್ಲಿ ಅವರಿಗೆ 62 ವಯಸ್ಸಿತ್ತು. ಘಟನೆ ನಡೆದ ನಂತರ ಘಾತಕನು ತನ್ನ ಹೇಳಿಕೆಯಲ್ಲಿ ಹೀಗೆ ಹೇಳಿದನು: ನನಗೆ ಈ ಕೃತ್ಯದಲ್ಲಿ ಯಾವುದೇ ಪಶ್ಚಾತ್ತಾಪವಿಲ್ಲ. ಮುಂದೆಯೂ ಅವಕಾಶ ಲಭಿಸಿದರೆ, ಇಂತಹ ಕೆಲಸದಿಂದ ಹಿಂದೆ ಸರಿಯುವುದಿಲ್ಲ. ಎರಡು ಮೂರು

ನಿಮಿಷಗಳ ಒಳಗೆ ಆಸ್ಪತ್ರೆಗೆ ಕೊಂಡು ಹೋಗಲಾಗಿತ್ತು. ಆದರೆ ಅವರು ಶಹೀದ್ ಆದರು.

ಶಹೀದ್‌ರ ಕುಟುಂಬದಲ್ಲಿ ಅಹ್ಮದಿಯ್ಯತ್ತಿನ ಪ್ರವೇಶ ಅವರ ತಾತರಾದ ಫೀರೋಝುದ್ದೀನ್ ಸಾಹಿಬ್‌ರ ಮೂಲಕ ಉಂಟಾಗಿತ್ತು. ಅವರು 1935ರಲ್ಲಿ ಖ಼ಲೀಫತುಲ್ ಮಸೀಹ್ ಸಾನಿಯರ ಕಾಲದಲ್ಲಿ ಬೈಅತ್ ಮಾಡಿ ಅಹ್ಮದಿಯ್ಯತ್ ಪ್ರವೇಶಿಸಿದ್ದರು. ಪ್ರಾಥಮಿಕ ವಿದ್ಯಾಭ್ಯಾಸದ ನಂತರ ಅವರು ಕಲಿಕೆಯನ್ನು ಮುಂದುವರೆಸಲಿಲ್ಲ. ಹತ್ತು ವರ್ಷಗಳ ಹಿಂದೆ ವಿದೇಶಕ್ಕೂ ಹೋಗಿದ್ದರು. ಮಲೇಶ್ಯ ಮುಂತಾದ ದೇಶಗಳಲ್ಲಿ ನೌಕರಿ ಮಾಡುತ್ತಿದ್ದರು. ಅನಂತರ ಪಾಕಿಸ್ತಾನಕ್ಕೆ ಮರಳಿ ಬಂದರು. ಹೃದ್ರೋಗಿಯಾಗಿದ್ದರು. ಹೆಚ್ಚಿನ ಸಮಯ ಮೊಹಲ್ಲ ಮಟ್ಟದಲ್ಲಿ ಜಮಾಅತಿನ ಸೇವೆಗಳನ್ನು ಮಾಡುತ್ತಿದ್ದರು. ಅನೇಕ ಗುಣ ವೈಶಿಷ್ಟ್ಯಗಳನ್ನು ಹೊಂದಿದ್ದರು. ಮೊಹಲ್ಲದಲ್ಲಿ ಅನಾಥ ಮತ್ತು ಬಡವರ ಸಹಾಯಕ್ಕಾಗಿ ಸದಾ ತಯಾರಾಗಿರುತ್ತಿದ್ದರು. ಮಸೀದಿಯ ಶುಚಿಯ ಬಗ್ಗೆ ಬಹಳ ಕಾಳಜಿ ವಹಿಸುತ್ತಿದ್ದರು. ಅತ್ಯಂತ ಪ್ರಾಮಾಣಿಕ, ಪರಿಶ್ರಮಿ, ಧೈರ್ಯಶಾಲಿ ವ್ಯಕ್ತಿಯಾಗಿದ್ದರು. ಕಾಲಿನಲ್ಲಿ ಗಾಯವಾದ ಕಾರಣ ಫ್ರೇಕ್ಚರ್ ಆಗಿತ್ತು. ಆದರಿಂದ ನಡೆಯುವುದರಲ್ಲೂ ತೊಂದರೆ ಅನುಭವಿಸುತ್ತಿದ್ದರು. ಆದಾಗ್ಯೂ ರಾತ್ರಿ ಸಮಯದಲ್ಲೂ ಜಮಾಅತಿನ ಕಡೆಯಿಂದ ಡ್ಯೂಟಿ ಅಥವಾ ಕಾವಲು ನಿಲ್ಲಲಿಕ್ಕಾಗಿ ಕರೆಯಲಾದರೆ ಹಾಜರಾಗುತ್ತಿದ್ದರು. ಖುತ್ಬವನ್ನು ನಿಯತವಾಗಿ ಆಲಿಸುತ್ತಿದ್ದರು. ನಮಾಝ಼್‌ಗಳನ್ನು ನಿಯತವಾಗಿ ನಿರ್ವಹಿಸುತ್ತಿದ್ದರು. ಖಿ಼ಲಾಫತಿನೊಂದಿಗೆ ಅಪಾರವಾದ ಪ್ರೇಮವಿತ್ತು. ಫಜ್ರ್ ನಮಾಝಿ಼ನ ನಂತರ ಒಂದು ಗಂಟೆ ಮೊಬೈಲ್ ಫೋನಿನಲ್ಲಿ ತಿಲಾವತ್ ಆಲಿಸುತ್ತಿದ್ದರು. ಇದು ಅವರ ವಾಡಿಕೆಯಾಗಿತ್ತು. ಎಲ್ಲ ದಿನ ದುಆ ಮಾಡಲು ಬಹಿಶ್ತಿ ಮಖ಼್ಬರ ಖಬರ್‌ಸ್ತಾನಕ್ಕೆ ಹೋಗುತ್ತಿದ್ದರು.

ಶಹೀದ್‌ರ ಮಗಳಾದ ಮುಬಾರಕ ಸಾಹಿಬ ಹೇಳುತ್ತಾಳೆ: ಶಹೀದ್ ಆಗುವುದಕ್ಕೆ ಕೆಲವು ದಿನಗಳಿಗೆ ಮುಂಚೆ ಅವರೊಂದು ಕನಸನ್ನು ಕಂಡಿದ್ದರು. ಜನರು ಗುಂಪುಗೂಡಿದ್ದರು. ದುಃಖದ ವಾತಾವರಣವಾಗಿತ್ತು. ಅದಕ್ಕಾಗಿ ಸದಖ ಕೂಡ ಮಾಡಲಾಯಿತು.

ದಿವಂಗತರು ಪತ್ನಿಯಾದ ಪರ್ವೀನ್ ಅಖ್ತರ್ ಸಾಹಿಬ ಮತ್ತು ಮೂವರು ಪುತ್ರಿಯರನ್ನು ಅಗಲಿರುವರು. ಅಲ್ಲಾಹನು ಎಲ್ಲರಿಗೂ ಸಹನೆ ಮತ್ತು ಧೈರ್ಯ ನೀಡಲಿ. ಅವರ ಸಹೋದರ ತನ್ವೀರ್ ಅಖ್ತರ್ ಹೇಳುತ್ತಾರೆ: ಬಾಹ್ಯವಾದ ಮತ್ತು ಜಮಾಅತಿನ ಬಗ್ಗೆ ಅವರಿಗೆ ಹೆಚ್ಚಿನ ಅರಿವು ಇರಲಿಲ್ಲ. ಆದರೆ ಚಿಕ್ಕಂದಿನಿಂದಲೇ ಜಮಾಅತಿನ ಬಗ್ಗೆ ಅಪಾರವಾದ ಅಭಿಮಾನವಿತ್ತು ಮತ್ತು ಖಿ಼ಲಾಫತಿನೊಂದಿಗೆ ಅಪಾರವಾದ ಪ್ರೀತಿಯಿತ್ತು. ಒಬ್ಬ ಸರಳ ಹೃದಯಿ ಮತ್ತು ನಿಸ್ವಾರ್ಥ ವ್ಯಕ್ತಿಯಾಗಿದ್ದರು. ಇತರರ ಸಂತೋಷದಲ್ಲಿ ಸಂತೋಷವನ್ನು ಕಂಡುಕೊಳ್ಳುತ್ತಿದ್ದರು. ಲಾಹೋರಿನಿಂದ ಈದಿನ ಸಂದರ್ಭದಲ್ಲಿ ಮನೆಗೆ ಬರುವಾಗ ಅನೇಕ ಆಹಾರ ಪಾನಿಯಗಳನ್ನು ತರುತ್ತಿದ್ದರು. ಸದಾ ಬಹಳ ಉತ್ತಮ ಹೊಸ ಬಟ್ಟೆಯನ್ನು ಹೊಲಿದು ತನಗಾಗಿ ತರುತ್ತಿದ್ದರು. ಅದನ್ನು ಈದಿನ ದಿನ ಧರಿಸುತ್ತಿದ್ದರು ಮತ್ತು ಅದನ್ನು ವಖ್ಫೇ ಝಿ಼ಂದಗಿಯಾದ ನನಗೆ ಕೊಡುತ್ತಿದ್ದರು ಮತ್ತು ನನ್ನ ಹಳೆಯ ಬಟ್ಟೆ ನನ್ನಿಂದ ಪಡೆಯುತ್ತಿದ್ದರು.

ಅವರ ಸಹೋದರ ಪುತ್ರ ಹೇಳುತ್ತಾರೆ: ಜಮಾಅತಿನಲ್ಲಿ ಯಾರಿಗಾದರೂ ಸಹಾಯದ ಆವಶ್ಯ ಬರಬಹುದು ಎಂಬ ಕಾರಣಕ್ಕೆ ಫೋನನ್ನು ಸದಾ ತನ್ನ ಜೊತೆಗೆ  ಇರಿಸುತ್ತಿದ್ದರು. ರಾತ್ರಿ ಸಮಯದಲ್ಲೂ ಫೋನ್ ರಿಂಗಾದರೆ ಬೇಗನೇ ಎದ್ದು ಜಮಾಅತಿನ ಸೇವೆಗಾಗಿ ತಯಾರಾಗುತ್ತಿದ್ದರು. ರಬ್ವದ ಮೂಲೆ ಮೂಲೆಗೆ ಬೇಕಾದರೂ ಹೋಗಬೇಕಾಗಿ ಬಂದರೆ ಹೋಗುತ್ತಿದ್ದರು. ರಕ್ತದಾನಕ್ಕಾಗಿ ಸದಾ ತಯಾರಾಗುತ್ತಿದ್ದರು. ಈ ರೀತಿಯಾಗಿ ಅನೇಕ ಜನರ ಜೀವ ಉಳಿಸಲು ಕಾರಣಕರ್ತರಾಗಿದ್ದರು. ಹೃದ್ರೋಗದ ಬಗ್ಗೆ ಎಂದಿಗೂ ಪರಿವೆ ಮಾಡುತ್ತಿರಲಿಲ್ಲ. ನಿರ್ಗತಿಕರ ಸಹಾಯ ಮಾಡುವುದು ಅವರ ಪ್ರಕಾರ ನೈತಿಕ ಕರ್ತವ್ಯವಾಗಿತ್ತು. ತನ್ನ ರೋಗಕ್ಕಿಂತ ಅದಕ್ಕೆ ಪ್ರಾಮುಖ್ಯ ಕೊಡುತ್ತಿದ್ದರು.

ಅಲ್ಲಾಹನು ಶಹೀದ್‌ರ ಪದವಿಗಳನ್ನು ಉನ್ನತಗೊಳಿಸಲಿ. ಜನ್ನತುಲ್ ಫಿರ್ದೌಸಿನಲ್ಲಿ ಉನ್ನತ ಪದವಿಗಳನ್ನು ದಯಪಾಲಿಸಲಿ. ಅಗಲಿದವರಿಗೂ ಅಲ್ಲಾಹನ ಸಹಾಯಕನಾಗಲಿ. ಅವರ ಒಳಿತುಗಳನ್ನು ಜಾರಿಯಲ್ಲಿರಿಸಲು ಅವರ ಮಕ್ಕಳಿಗೆ ಸೌಭಾಗ್ಯ ನೀಡಲಿ.

ಜುಮುಅ ನಮಾಝಿ಼ನ ನಂತರ ಅವರ ಜನಾಝ಼ ಗಾಯಿಬ್ ನಿರ್ವಹಿಸುವೆನು. ಇನ್‌ಶಾ ಅಲ್ಲಾಹ್.

*********

**Love for All, Hatred for None**

**ಪ್ರೀತಿ ಎಲ್ಲರಲ್ಲೂ, ದ್ವೇಷವಿಲ್ಲ ಯಾರಲ್ಲೂ**

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಆಯಿತು ಮೌಲ್ವಿ ಸನಾವುಲ್ಲಾ ತುರ್‌ಯಾಖುಲ್ ಖುಲೂಬಿನ ಆ ಭವಿಷ್ಯವಾಣಿಯನ್ನು ಪೂರ್ಣಗೊಳಿಸಿದರು.

ಶಾಪದ ಭವಿಷ್ಯವಾಣಿಯು ಪೂರ್ಣಗೊಂಡಿತು

ಸಯ್ಯದ್‌ನಾ ಹಝ್ರ‌ರತ್ ಮಸೀಹ್ ಮೌಊದ್(ಅ) ಹೇಳಿದರು. ನನ್ನ ಕಡೆಯಿಂದ ಕೇವಲ ಹತ್ತು ಸಾವಿರ ರೂಪಾಯಿಗಳ ಬಹುಮಾನದ ವಾಗ್ದಾನ ಮಾತ್ರವಲ್ಲ. ಬದಲು ಆ ದುಷ್ಟನು ಬಯ್ಯುವುದರಿಂದ ಹಿಂದೆ ಬೀಳಲಿಲ್ಲ. ಅಪಹಾಸ್ಯ ಮಾಡಲು ಹಿಂಜರಿಯಲಿಲ್ಲ. ಅಪಮಾನ ಮಾಡುವುದರಿಂದ ತಡೆಯಲಿಲ್ಲ. ಎಲ್ಲಾ ಸಭೆಗಳಲ್ಲೂ ನನ್ನ ದೃಷ್ಟಾಂತಗಳನ್ನು ತಳ್ಳಿಹಾಕುತ್ತಿದ್ದ. ಅವನು ನಿಗದಿಪಡಿಸಿದ ಅವಧಿಯಲ್ಲಿ ಈ ದೃಷ್ಟಾಂತದ ಉದಾಹರಣೆಯನ್ನು ತೋರಿಸಬೇಕಾಗಿದೆ. ಇಲ್ಲದಿದ್ದರೆ ಶಾಶ್ವತವಾಗಿ ಇಹಲೋಕ ತ್ಯಜಿಸುವವರಿಗೆ ವಿವರಿಸಿದ ಶಾಪಗಳು ಆಕಾಶದಿಂದ ಅವನ ಮೇಲೆ ಬೀಳುವುವು. ವಿಶೇಷವಾಗಿ ಮೌಲ್ವಿ ಸನಾವುಲ್ಲಾ ಸಾಹಿಬ್ ಸ್ವಯಂ ಅವರೆ ನನ್ನ ಬಗ್ಗೆ ಹೇಳಿದ್ದರು. ಈ ವ್ಯಕ್ತಿಯ ಯಾವ ಗ್ರಂಥವು ಪವಾಡವಲ್ಲ ಅವರು ಎಚ್ಚರಗೊಳ್ಳಬೇಕಾಗಿದೆ. ಮೌನವಹಿಸಿಕೊಂಡು ಆ ಶಾಪಗಳಡಿಯಲ್ಲಿ ಬರದಿರುವಿಕೆ.” (ಇಜಾಝ್ ಅಹ್ಮದಿ ಪುಟ 149)

ಸಯ್ಯದ್‌ನಾ ಹಝ್ರ‌ರತ್ ಮಸೀಹ್ ಮೌಊದ್(ಅ) ಅವರು ಹತ್ತು ಶಾಪಗಳನ್ನು ಬರೆದಿದ್ದರು. ಹತ್ತನೆಯ ಶಾಪದ ನಂತರ ಬರೆದಿದ್ದರು. “ತಿಲ್ಕ ಅಶರತನ್ ಕಾಮಿಲನ್. ಇದು ಹತ್ತು ಪರಿಪೂರ್ಣಗೊಳಿಸಲಾಗಿದೆ. ಅವರ ಈ ಮೇಲಿನ ಸೂಕ್ತಗಳು ಭವಿಷ್ಯವಾಣಿಯ ರೂಪದಲ್ಲಿದ್ದವು. ಅದು ತನ್ನ ಪದಗಳಂತೆಯೇ ಪೂರ್ಣಗೊಂಡವು. ಇಹಲೋಕವು ತ್ಯಜಿಸುವವರೆಗೆ ಮೌಲ್ವಿ ಸನಾವುಲ್ಲಾ ಅಮೃತ್ಸರಿ ಅವರ ಮೇಲೆ ಆಕಾಶದಿಂದ ಶಾಪಗಳು ಬೀಳುತ್ತಿರುವುವು. ಯಾವ ರೀತಿ ಆ ಶಾಪಗಳು ಬಿದ್ದಿವೆ. ನಾವು ಹೇಳಬಹುದು ಅವರು ಶಾಪಗಳ ಅಡಿಯಲ್ಲಿ ತುಳಿಯಲ್ಪಟ್ಟರು.

ಮುಂದಿನ ಸಂಚಿಕೆಯಲ್ಲಿ ನಾವು ಇನ್‌ಶಾಲ್ಲಾಹ್ ಸಯ್ಯದ್‌ನಾ ಹಝ್ರ‌ರತ್ ಮಸೀಹ್ ಮೌಊದ್(ಅ) ರವರ ಇನ್ನೊಂದು ಬಹುಮಾನದ ಪಂಥಾಹ್ವಾನ ಓದುಗರ ಸೇವೆಯಲ್ಲಿ ಪ್ರಸ್ತುತಪಡಿಸುವೆವು.

**(ಮನ್ಸೂರ್ ಅಹ್ಮದ್ ಮಸ್ರೂರ್)**

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಸಂಗ್ರಹಿಸಲಾಗಿದೆ. ನ್ಯಾಯ, ದಯೆ ಮತ್ತು ಬಂಧುಗಳೊಂದಿಗೆ ದಯೆಯಿಂದ ವರ್ತಿಸುವುದು ಎಂಬ ಮೂರು ಕೆಲಸಗಳನ್ನು ಮಾಡಲು ಆದೇಶಿಸಲಾಗಿದೆ ಮತ್ತು ಮೂರು ವಿಷಯಗಳನ್ನು ಮಾಡುವುದನ್ನು ನಿಷೇಧಿಸಲಾಗಿದೆ, ಅಂದರೆ, ಅಶ್ಲೀಲತೆ, ಅವಿಧೇಯತೆ ಮತ್ತು ದಂಗೆ. ನ್ಯಾಯದ ಅರ್ಥವು ಸಮಾನತೆ, ಅಂದರೆ, ಒಬ್ಬ ವ್ಯಕ್ತಿಯು ತನ್ನನ್ನು ಹೇಗೆ ನೋಡಿಕೊಳ್ಳುತ್ತಾನೋ ಹಾಗೆಯೇ ಇತರರೊಂದಿಗೆಯೂ ವರ್ತಿಸಬೇಕು. ಆತನ ಮೆಲೆ ಹಿಂಸೆ ಆದರೆ, ತಪ್ಪಿತಸ್ಥನಷ್ಟೇ ಸೇಡು ತೀರಿಸಿಕೊಳ್ಳಬಹುದು, ಆದರೆ ಅದಕ್ಕಿಂತ ತೀವ್ರವಾಗಿ ನಡೆದುಕೊಳ್ಳಬಾರದು. ಒಬ್ಬ ವ್ಯಕ್ತಿಯು ಅವನೊಂದಿಗೆ ದಯೆಯಿಂದ ನಡೆಸಿಕೊಂಡರೆ, ಅವನನ್ನು ಕನಿಷ್ಠ ಪಕ್ಷ ದಯೆಯಿಂದ ನಡೆಸಿಕೊಳ್ಳುವುದು ಅವನ ಕರ್ತವ್ಯವಾಗಿದೆ.

ಸರ್ವಶಕ್ತನಾದ ಅಲ್ಲಾಹನಿಗೆ ನ್ಯಾಯ ಸಲ್ಲಿಸುವುದು ಎಂದರೆ ಸರ್ವಶಕ್ತನಾದ ಅಲ್ಲಾಹನು ಅವನೊಂದಿಗೆ ವ್ಯವಹರಿಸಿದ ಉತ್ತಮ ರೀತಿಯಲ್ಲಿ, ಅವನು ಸಹ ತನ್ನ ಹಕ್ಕನ್ನು ನೀಡಬೇಕು ಮತ್ತು ಅವನ ಅಸ್ತಿತ್ವದೊಂದಿಗೆ ಸರ್ವಶಕ್ತನಾದ ಅಲ್ಲಾಹನಿಗೆ ಆಕ್ಷೇಪಣೆಗಳಿಗೆ ಅವಕಾಶಗಳನ್ನು ಸೃಷ್ಟಿಸಬಾರದು. ಅದೇ ರೀತಿ ಅವನು ತನ್ನ ಹಕ್ಕುಗಳನ್ನು ಅಲ್ಲಾಹನ ಹೊರತಾಗಿ ಬೇರೆಯವರಿಗೆ ನೀಡಬಾರದು ಮತ್ತು ಶಿರ್ಕ್ ಮಾಡಬಾರದು, ಏಕೆಂದರೆ ಶಿರ್ಕ್ ಮಾಡುವುದು ಸರ್ವಶಕ್ತನಾದ ಅಲ್ಲಾಹನ ಹಕ್ಕನ್ನು ಕಸಿದುಕೊಂಡು ಬೇರೆಯವರಿಗೆ ಕೊಟ್ಟಂತೆಯಾಗಿದೆ, ಮತ್ತು ಇದು ದೌರ್ಜನ್ಯವಾಗಿದೆ. ಪವಿತ್ರ ಖುರ್‌ಆನ್‌ನಲ್ಲಿ ಶಿರ್ಕ್‌ನ ಹೆಸರನ್ನು ದೌರ್ಜನ್ಯ ಎಂದೂ ಕರೆಯಲಾಗುತ್ತದೆ. ಆದ್ದರಿಂದ, ಅಲ್ಲಾಹನ ಪುತ್ರ ಅಥವಾ ಹೆಂಡತಿ ಅಥವಾ ಅವನ ಸಂಗಾತಿಯನ್ನು ಘೋಷಿಸುವುದು ನ್ಯಾಯವಲ್ಲ. ಬದಲಿಗೆ ಅದು ದೌರ್ಜನ್ಯವಾಗಿದೆ. ಏಕೆಂದರೆ ದೌರ್ಜನ್ಯವು ಒಬ್ಬರ ಹಕ್ಕನ್ನು ಇನ್ನೊಬ್ಬರಿಗೆ ವಹಿಸಿಕೊಡಲು ಕರೆಯಲಾಗುತ್ತದೆ. ಅದೇ ರೀತಿ ಅಲ್ಲಾಹನ ಗುಣಲಕ್ಷಣಗಳನ್ನು ತನ್ನ ಕಡೆ ಹೇಳಿಕೊಳ್ಳುವುದು ಸಹ ಅನ್ಯಾಯವಾಗಿದೆ. ಉದಾಹರಣೆಗೆ, ಶರಿಯತ್ ರಚನೆ ಮತ್ತು ದೈವಿಕ ಸ್ಫೂರ್ತಿಯನ್ನು ಕಳುಹಿಸುವುದು ಸರ್ವಶಕ್ತನಾದ ಅಲ್ಲಾಹನ ಕಾರ್ಯವಾಗಿದೆ. ಈಗ, ಒಬ್ಬ ವ್ಯಕ್ತಿಯು ಬಹಾವುಲ್ಲಾ ಮತ್ತು ಇತರರು ಮಾಡಿದಂತೆ ಸ್ವತಃ ಶರಿಯಾವನ್ನು ಮಾಡಲು ಅಥವಾ ಇಲ್‌ಹಾಮ್ ಅನ್ನು ಕಳುಹಿಸಿದಂತೆ ನಟಿಸಿದರೆ, ಅವನು ನ್ಯಾಯವನ್ನು ಉಲ್ಲಂಘಿಸುತ್ತಾನೆ, ಒಬ್ಬ ವ್ಯಕ್ತಿಯು ಸರ್ವಶಕ್ತನಾದ ಅಲ್ಲಾಹನಿಗೆ ನ್ಯಾಯವನ್ನು ಮಾಡಿದರೆ, ಶಿರ್ಕ್ (ಬಹುದೇವಾರಾಧನೆ), ಅಪನಂಬಿಕೆ

ಮತ್ತು ಅವಿಧೇಯತೆಯು ನಿರ್ಮೂಲನೆಯಾಗುತ್ತದೆ.

ಉಪಕಾರವು ನ್ಯಾಯದ ಮೇಲಿನ ಎರಡನೇ ಹಂತವಾಗಿದೆ. ದಯೆಯ ಅರ್ಥವೇನೆಂದರೆ, ಇನ್ನೊಬ್ಬರು ನಮ್ಮನ್ನು ಹೇಗೆ ನಡೆಸಿಕೊಳ್ಳುತ್ತಾರೆ ಎಂಬುದನ್ನು ನಾವು ನೋಡಬಾರದು, ಆದರೆ ಅವರು ನಮ್ಮೊಂದಿಗೆ ಕೆಟ್ಟದಾಗಿ ವರ್ತಿಸಿದರೂ, ನಾವು ಅವರೊಂದಿಗೆ ಉತ್ತಮವಾಗಿ ನಡೆಸಿಕೊಳ್ಳಬೇಕು, ಈ ಮಟ್ಟವು ಮೊದಲ ಮಟ್ಟಕ್ಕಿಂತ ಶ್ರೇಷ್ಠವಾಗಿದೆ, ಬಡವರಿಗೆ ಸಹಾಯ ಮಾಡುವುದು, ದಾನ ಮತ್ತು ರಾಷ್ಟ್ರೀಯ ಸೇವೆಗಳು ಇತ್ಯಾದಿ ಒಳ್ಳೆಯ ಕಾರ್ಯಗಳು ಎಲ್ಲವು ಅದರಲ್ಲಿ ಸೇರಿಸಲಾಗಿದೆ.

ವಿಜ್ಞಾನಗಳ ಅಭಿವೃದ್ಧಿ ಮತ್ತು ಸುಧಾರಣೆಗೆ ಶ್ರಮಿಸುವುದು ಸಹ ಅದರೊಳಗೆ ಬರುತ್ತದೆ ಏಕೆಂದರೆ ಅದರ ಫಲಿತಾಂಶಗಳು ಒಬ್ಬರ ಸ್ವಂತ ಮತ್ತು ಹೊರಗಿನವರಿಗೆ ದೈಹಿಕ ಮತ್ತು ಆಧ್ಯಾತ್ಮಿಕ ಪ್ರಯೋಜನ ಮತ್ತು ಸೌಕರ್ಯವನ್ನು ತರುತ್ತವೆ.

ಮೂರನೇ ಮಟ್ಟವು **"ಈತಾ ಇಝಿಲ್ ಖುರ್ಬಾ"** ಎಂದು ಹೇಳಲಾಗುತ್ತದೆ, ಇದರರ್ಥ "ಸಂಬಂಧಿಗಳಿಗೆ ನೀಡುವುದು ಅಥವಾ ಸಂಬಂಧಿಗಳು ನೀಡುವುದು." ಮತ್ತು ಆಯತ್‌ನ ಅರ್ಥವು ಒಬ್ಬ ಸಂಬಂಧಿ ಇನ್ನೊಬ್ಬ ಸಂಬಂಧಿಯನ್ನು ಪರಿಗಣಿಸುವಂತೆ ಮಾನವಕುಲವನ್ನು ಪರಿಗಣಿಸುವುದಾಗಿದೆ.

ಈ ನಡವಳಿಕೆಯು ದಯೆ ಎಂದರ್ಥವಲ್ಲ ಏಕೆಂದರೆ ದಯೆಯನ್ನು ಈಗಾಗಲೇ ಉಲ್ಲೇಖಿಸಲಾಗಿದೆ. ಈ ನಡವಳಿಕೆಯು ಯಾವುದೇ ವಿನಿಮಯದ ಆಲೋಚನೆಯಿಲ್ಲದೆ ದೈಹಿಕ ಪ್ರೀತಿಯಿಂದ ಮಾಡುವ ನಡವಳಿಕೆಯನ್ನು ಅರ್ಥೈಸುತ್ತದೆ. ಉಪಕಾರ ಮಾಡುವಾಗ, ಒಬ್ಬ ವ್ಯಕ್ತಿಯು ಅಂತಹ ವ್ಯಕ್ತಿ ನನ್ನೊಂದಿಗೆ ಉತ್ತಮವಾಗಿ ವರ್ತಿಸಿದ್ದಾನೆ ಎಂದು ಭಾವಿಸುತ್ತಾನೆ. ಆದ್ದರಿಂದ ನಾನು ಸಹ ಒಳ್ಳೆಯ ಹೆಸರನ್ನು ಹೊಂದಲು ಉತ್ತಮವಾಗಿ ವರ್ತಿಸಬೇಕು ಅಥವಾ ಪಾಪಿಯ ಪಾಪಗಳನ್ನು ಕ್ಷಮಿಸುವಾಗ, ನಾನು ಅವನೊಂದಿಗೆ ಉತ್ತವಾಗಿ ನಡೆಸಿಕೊಳ್ಳುತ್ತೇನೆ ಹೀಗೆ ನಾನು ವರ್ತಿಸಿದರೆ ಅವನ ಮನಸ್ಸಿನಿಂದ ಅಸೂಯೆ ಹೊರಹೋಗುವುದು ಮತ್ತು ಇವನು ನನ್ನ ಸ್ನೇಹಿತನಾಗಿ ನನ್ನನ್ನು ಬಲಪಡಿಸುವನು ಎಂದು ಅವನು ಭಾವಿಸುತ್ತಾನೆ. ಆದರೆ ಓರ್ವ ತಾಯಿ ತನ್ನ ಮಗುವನ್ನು ಪ್ರೀತಿಸುತ್ತಾಳೆ ಮತ್ತು ಅವನಿಗಾಗಿ ತ್ಯಾಗ ಮಾಡುವ ತಾಯಿಗೆ ಪ್ರತಿಫಲದ ಕಿಂಚಿತ್ತೂ ಆಸೆ ಇರುವುದಿಲ್ಲ, ಆದರೆ ಅವಳ ಪ್ರೀತಿಯು ತನ್ನ ಸ್ವಂತ ತ್ಯಾಗದ ಮೇಲೆ ನಿಂತಿದೆ. ಹೆಣ್ಣಿಗೆ ಮಕ್ಕಳಿಲ್ಲದಿದ್ದಾಗ ಅವಳ ಹೃದಯದಲ್ಲಿ ನನಗೆ ಗಂಡು ಮಗು ಜನಿಸಿದರೆ ಆ ಮಗು ನನ್ನ ಸೇವೆ ಮಾಡುತ್ತಾನೆ ಎಂದು ಯೋಚಿಸುವುದಿಲ್ಲ, ಬದಲಿಗೆ ಅವಳಿಗೆ ಮಗು ಜನಿಸಿದರೆ ನಾನು ಅವನನ್ನು ಬೆಳೆಸುತ್ತೇನೆ, ಅವನಿಗೆ ಸೇವೆ ಮಾಡುತ್ತೇನೆ, ಅವನಿಗೆ ಬಟ್ಟೆ ಕೊಡುತ್ತೇನೆ, ಮದುವೆ ಮಾಡಿಸುತ್ತೇನೆ, ಆತನ ಮಕ್ಕಳನ್ನು ಪೋಷಿಸುತ್ತೇನೆ ಎಂಬ ಭಾವನೆ ಅವಳಲ್ಲಿ ಇರುತ್ತದೆ. ಆದುದರಿಂದ ಮಕ್ಕಳ ಬಯಕೆಯ ಸಮಯದಲ್ಲಿ ತಾಯಿಯ ಹೃದಯದಲ್ಲಿ ಕಿಂಚಿತ್ತೂ ತನ್ನ ಸೇವೆಮಾಡಿಸಿಕೊಳ್ಳ ಬೇಕೆಂಬ ಸೇವಾ ಮನೋಭಾವನೆ ಇರುವುದಿಲ್ಲ. ಆದರೆ ಈ ಆಸೆಗೆ ಮಕ್ಕಳ ಸೇವೆ ಮಾಡುವ ಹಂಬಲವೇ ಕಾರಣ. ಈ ಸದ್ಭಾವನೆಯೇ ಮನುಷ್ಯನಿಗೆ ಶ್ರೇಷ್ಠ ಭಾವನೆಯಾಗಿರುತ್ತದೆ. ಇದನ್ನು ಪಡೆದ ನಂತರ ಮನುಷ್ಯನ ನೈತಿಕ ಅಸ್ತಿತ್ವವು ಪೂರ್ಣಗೊಳ್ಳುತ್ತದೆ. ದಯೆಯ ಸ್ಥಾನವನ್ನು ಪಡೆದ ನಂತರ, ನೀವು ಸ್ವೀಕರಿಸುವುದಕ್ಕಿಂತ ಹೆಚ್ಚಿನದನ್ನು ನೀಡಲು ಬಯಸಿದಾಗ, ಒಳ್ಳೆಯತನದ ಸ್ಥಾನವನ್ನು ಪಡೆದುಕೊಳ್ಳಿ ಎಂದು ಸರ್ವಶಕ್ತನಾದ ಅಲ್ಲಾಹನು ನುಡಿಯುತ್ತಾನೆ. ಇದರಿಂದ ಎಲ್ಲಾ ಮಾನವರು ನಿಮಗೆ ನಿಮ್ಮ ಮಕ್ಕಳಂತೆ ಕಾಣಿಸಿಕೊಳ್ಳಲು ಪ್ರಾರಂಭಿಸುತ್ತಾರೆ ಮತ್ತು ನಿಮ್ಮಲ್ಲಿ ಅವರ ಸೇವೆ ಮಾಡುವ ಉತ್ಸಾಹವು ಓರ್ವ ತಾಯಿಯು ತನ್ನ ಮಗುವಿನ ಮೇಲಿನ ಪ್ರೀತಿಯಂತೆಯೇ ಸಂಯೋಜನೆಗೊಳ್ಳಲು ಪ್ರಾರಂಭಿಸುತ್ತದೆ. **(ತಫ್ಸೀರ್ ಕಬೀರ್, ಸಂಪುಟ-4, ಪುಟ-220, ಪ್ರಕಟಿತ ಖಾದಿಯಾನ್ 2010)**

## ಅಂತಿಮ ವಿಜಯ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ: ಪ್ರಾಯಶಃ ಕೊನೆಗೆ ಕ್ರೈಸ್ತ ಧರ್ಮ ಲೋಕದಾದ್ಯಂತ ವ್ಯಾಪಿಸುವುದೆಂದು ಅಥವಾ ಬೌದ್ಧ ಧರ್ಮ ಲೋಕವನ್ನೆಲ್ಲ ಆವರಿಸುವುದೆಂದು ಭೂಲೋಕದ ಜನರು ಆಲೋಚಿಸುತ್ತಿರಬಹುದು. ಆದರೆ ಅವರ ಈ ಯೋಚನೆ ತಪ್ಪಾಗಿದೆ. ಆಕಾಶದಲ್ಲಿ ದೇವನಿಂದ ನಿರ್ಧರಿಸಲ್ಪಡುವವರೆಗೆ ಯಾವುದೇ ಕಾರ್ಯವು ಭೂಮಿಯಲ್ಲಿ ಸಂಭವಿಸಲಾರದು. ಅಂತಿಮವಾಗಿ ಇಸ್ಲಾಮ್ ಧರ್ಮ ಜನರ ಹೃದಯಗಳನ್ನು ಜಯಿಸುವುದು ಎಂದು ಆಕಾಶ ಭೂಮಿಗಳ ಅಧಿಪತಿಯಾದ ದೇವನು ನನಗೆ ತಿಳಿಸಿರುವನು.

**(ಬರಾಹೀನೆ ಅಹ್ಮದಿಯಾ, ಭಾಗ 5; ರೂಹಾನೀ ಖಝಾಇನ್ ಸಂಪುಟ 21, ಪುಟ 427)**

**ವಾಖಿಫೀನೆ ಝಿಂದಗಿ ಹಾಗೂ ಧರ್ಮೋಪದೇಶ ಮತ್ತು ತರಬೇತಿಯ ಕರ್ತವ್ಯವನ್ನು ನಿರ್ವಹಿಸಬಲ್ಲ ಧಾರ್ಮಿಕ ಜ್ಞಾನವನ್ನು ಹೊಂದಿರುವವರ ಅಗತ್ಯವು ಹೆಚ್ಚುತ್ತಿದೆ. ಆದ್ದರಿಂದ, ಈ ಕೆಲಸವನ್ನು ವಿಶೇಷವಾಗಿ ಮಾಡುವ ಒಂದು ಗುಂಪು ಇರಬೇಕು.**

**ನಿಮ್ಮ ಮಕ್ಕಳನ್ನು ಜಾಮಿಯ ಅಹ್ಮದೀಯಾದಲ್ಲಿ ಶಿಕ್ಷಣವನ್ನು ಪಡೆಯಲು ಅರ್ಪಿಸಿ**

ಹಝ್ರತ್ ಅಮೀರ್-ಉಲ್-ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರು ನುಡಿಯುತ್ತಾರೆ:

ಜಮಾಅತ್ತಿನ ಅಗತ್ಯಗಳು ಹೆಚ್ಚಾದಂತೆ ತಬ್ಲೀಗಿನ ಕ್ಷೇತ್ರ ಮತ್ತು ಇತರ ಸೇವಾ ಕ್ಷೇತ್ರಗಳಲ್ಲಿ ವಾಖಿಫೀನೆ ಝಿಂದಗಿಯರ ಮತ್ತು ಮುಬಲ್ಲಿಗೀನರ (ಪ್ರಚಾರಕರು) ಅಗತ್ಯವಿದೆ. ಈ ವಿಸ್ತರಣೆಯಾಗುತ್ತಿದ್ದಂತೆ ಕೆಲಸವು ಸಹ ಹೆಚ್ಚುತ್ತಿದೆ, ಅಹ್ಮದಿಯತ್‌ನ ಸಂದೇಶ ಹರಡುತ್ತಿದೆ. ಜಗತ್ತು ಕೂಡ ಅಹ್ಮದಿಯತ್ ಅನ್ನು ಸ್ವೀಕರಿಸುತ್ತಾ ಇದೆ. ಇದರೊಂದಿಗೆ, ವಾಖಿಫೀನೆ ಝಿಂದಗಿ ಹಾಗೂ ಧರ್ಮೋಪದೇಶ ಮತ್ತು ತರಬೇತಿಯ ಕರ್ತವ್ಯವನ್ನು ನಿರ್ವಹಿಸಬಲ್ಲ ಧಾರ್ಮಿಕ ಜ್ಞಾನವನ್ನು ಹೊಂದಿರುವವರ ಅಗತ್ಯವು ಹೆಚ್ಚುತ್ತಿದೆ......... ಜಮಾಅತ್ತಿನ ಪ್ರತಿಯೊಬ್ಬ ವ್ಯಕ್ತಿಯು ಯಾವಾಗಲೂ ತಬ್ಲೀಗ್‌ನಲ್ಲಿ ಅಥವಾ ತರಬೇತಿ ನೀಡುವುದರಲ್ಲಿ ನಿರತರಾಗಿರುಲು ಸಾಧ್ಯವಿಲ್ಲ ಆದ್ದರಿಂದ, ಈ ಕೆಲಸವನ್ನು ವಿಶೇಷವಾಗಿ ಮಾಡುವ ಒಂದು ಗುಂಪು ಇರಬೇಕು ಎಂದು ಅಲ್ಲಾಹನು ಹೇಳಿರುವನು. ಇನ್ನೊಂದು ಸ್ಥಳದಲ್ಲಿ, ಉಮ್ಮತ್ತಿನ ಪ್ರತಿಯೊಬ್ಬ ವ್ಯಕ್ತಿಗೂ ಒಳ್ಳೆಯ ಕಾರ್ಯಗಳನ್ನು ಹರಡುವ, ಕೆಟ್ಟದ್ದನ್ನು ತಡೆಯುವ ಮತ್ತು ಅಲ್ಲಾಹನ ಕಡೆಗೆ ಅಹ್ವಾನಿಸುವ ಕರ್ತವ್ಯವನ್ನು ಪೂರೈಸುವ ಜವಾಬ್ದಾರಿಯನ್ನು ವಹಿಸಲಾಗಿದೆ. ಆದರೆ ಮತ್ತೆ ಹೇಳಿರುವುದು ಏಕೆಂದರೆ ಪ್ರಪಂಚದ ವ್ಯವಸ್ಥೆಯನ್ನು ಸಹ ನಡೆಸಬೇಕಾಗಿದೆ, ಆದ್ದರಿಂದ ಅದರಲ್ಲಿ ತೊಡಗಿರುವವರು ಯಾವಾಗಲೂ ಸಮಯವನ್ನು ನೀಡಲು ಸಾಧ್ಯವಿಲ್ಲ. ಧರ್ಮೋಪದೇಶ ಮತ್ತು ತರಬೇತಿಯ ಕೆಲಸವನ್ನು ಅತ್ಯುತ್ತಮ ರೀತಿಯಲ್ಲಿ ಮಾಡುವ ಮನೋಧರ್ಮ ಎಲ್ಲರಿಗೂ ಇರುವುದಿಲ್ಲ. ಮತ್ತು ಉಮ್ಮತ್ತಿನ ಎಲ್ಲಾ ಸದಸ್ಯರು ಧರ್ಮ ಮುಬಲ್ಲಿಗ್ ಮತ್ತು ಮುರಬ್ಬಿಯವರಿಗೆ ಅಗತ್ಯವಾದ ಧರ್ಮದ ತಿಳುವಳಿಕೆಯನ್ನು ಪಡೆಯಲು ಸಾಧ್ಯವಿಲ್ಲ. ಮತ್ತು ಎಲ್ಲಾ ಜನರಿಗೆ ವಿಶೇಷ ಗಮನದಿಂದ ತರಬೇತಿಯು ಸಹ ನೀಡಲು ಸಾಧ್ಯವಾಗುವುದಿಲ್ಲ. ಆದ್ದರಿಂದ, ಸರ್ವಶಕ್ತನಾದ ಅಲ್ಲಾಹನ ಆದೇಶಗಳನ್ನು, ಅನುಸರಿಸಬೇಕಾದ ಆಜ್ಞೆಗಳನ್ನು ಮತ್ತು ತಡೆಯಬೇಕಾದ ನಿಷೇಧಗಳನ್ನು ಪರಿಚಯ ಮಾಡಿಕೊಳ್ಳಲು, ಮತ್ತು ಅದರ ಆಳವಾದ ಬುದ್ಧಿವಂತಿಕೆಯನ್ನು ಕಲಿಯಲು ಮತ್ತು ನಂತರ ಅದನ್ನು ಹರಡಲು. ಧರ್ಮವನ್ನು ಪೂರ್ಣ ಗಮನದಿಂದ ಕಲಿಯುವ ಒಂದು ವಿಷೇಶ ಗುಂಪು ಇರಬೇಕು. ಮಾಶಾಅಲ್ಲಾಹ್, ತಮ್ಮ ಅಭಿರುಚಿ ಮತ್ತು ಹವ್ಯಾಸಗಳಿಂದ ಲೌಕಿಕ ಶಿಕ್ಷಣದ ಜೊತೆಗೆ ಧಾರ್ಮಿಕ ಜ್ಞಾನದ ಬಗ್ಗೆ ಉತ್ತಮ ತಿಳುವಳಿಕೆಯನ್ನು ಹೊಂದಿರುವ ಅನೇಕ ಜನರು ಜಮಾತ್‌ನಲ್ಲಿದ್ದಾರೆ. ಆದರೆ ಕೆಲವೊಮ್ಮೆ ಅಥವ ಸಾಮಾನ್ಯವಾಗಿಯೇ ಅವರ ಇತರ ಕಾರ್ಯಗಳ ಕಾರಣದಿಂದಾಗಿ ಸಮಯವನ್ನು ನೀಡುಲು ನಿರಂತರವಾಗಿ ಸಾಧ್ಯವಾಗುವುದಿಲ್ಲ. ಅದಾಗ್ಯೂ, ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ, ಧರ್ಮದ ಕೆಲಸಕ್ಕಾಗಿ ವಾಖಿಫೀನೆ ಝಿಂದಗಿಯರ ಗುಂಪು ಇರಬೇಕು ಮತ್ತು ಇಸ್ಲಾಂ ಸಾರ್ವತ್ರಿಕ ಧರ್ಮವಾಗಿರುವುದರಿಂದ ಅದು ಪ್ರತಿಯೊಂದು ಪಂಗಡದಿಂದ, ಅಂದರೆ ಪ್ರತಿಯೊಂದು ಗುಂಪಿನಿಂದ, ಪ್ರತಿ ವರ್ಗದಿಂದ, ಪ್ರತಿಯೊಂದು ವಿಭಾಗದಿಂದ ಜನರ ಜನರ ಗುಂಪು ಇರಬೇಕು. ತದನಂತರ ಮತ್ತಷ್ಟು ವಿಸ್ತರಿಸಿದರೆ, ಪ್ರತಿಯೊಂದು ಖೌಮಿನ(ಗೋತ್ರದಿಂದ) ಜನರು ಧರ್ಮವನ್ನು ಕಲಿಯಬೇಕು ಮತ್ತು ಮುಂದೆ ಕಲಿಸಬೇಕು ಎಂದು ಹೇಳಿರುವನು. ಪ್ರತಿಯೊಂದು ಖೌಮಿನವರು ಮತ್ತು ಪ್ರತಿಯೊಂದು ವರ್ಗವು ವಿಭಿನ್ನ ಮನೋಧರ್ಮ, ಮನೋವಿಜ್ಞಾನ ಮತ್ತು ವಿಧಾನವನ್ನು ಹೊಂದಿದೆ. ಅದಕ್ಕೆ ತಕ್ಕಂತೆ ಉಪದೇಶ ಮಾಡುವ ವಿಧಾನವನ್ನು ಕೈಗೊಳ್ಳಬೇಕು. ಈ ರೀತಿಯಲ್ಲಿ, ತಬ್ಲೀಗ್ ಮತ್ತು ತರಬೇತಿಯು ಸುಲಭವಾಗುತ್ತದೆ. ಏನೇ ಇರಲಿ, ಸರ್ವಶಕ್ತನಾದ ಅಲ್ಲಾಹನು ತಬ್ಲೀಗಿಗಾಗಿ ಮತ್ತು ತರಬೇತಿಗಾಗಿ ಕಾರ್ಯವನ್ನು ನಿರ್ವಹಿಸುವ ವಿಶ್ವಾಸಿಗಳ ಗುಂಪು ಇರಬೇಕು ಮತ್ತು ನಂತರ ಪ್ರತಿಯೊಂದು ಖೌಮು ಮತ್ತು ಪ್ರತಿಯೊಂದು ವರ್ಗದ ಜನರು ಇರಬೇಕು ಇದರಿಂದ ಈ ಕಾರ್ಯವನ್ನು ಸುಗಮಗೊಳಿಸಬಹುದು ಎಂದು ನಮಗೆ ಮಾರ್ಗದರ್ಶನ ನೀಡಿರುವನು.

ಆದುದರಿಂದ ಅಹ್ಮದಿಯಾ ಜಮಾಅತ್ ಈ ತತ್ವದಡಿಯಲ್ಲಿ ಧರ್ಮಕ್ಕಾಗಿ ತನ್ನ ಜೀವನವನ್ನು ಮುಡಿಪಾಗಿಡುವ ವ್ಯವಸ್ಥೆಯನ್ನು ಹೊಂದಿದೆ. ಮತ್ತು ನಾನು ಹೇಳಿದಂತೆ, ಅಲ್ಲಾಹನ ಅನುಗ್ರಹದಿಂದ ವಿವಿಧ ಖೌಮುಗಳು ಮತ್ತು ವರ್ಗಗಳ ಜನರು ಈಗ ಈ ವ್ಯವಸ್ಥೆಯ ಭಾಗವಾಗಿದ್ದಾರೆ ಮತ್ತು ಆಗುತ್ತಿದ್ದಾರೆ. ಮತ್ತು ನಾನು ಹೇಳಿದಂತೆ, ಜಮಾಅತ್ತಿನ ಅಗತ್ಯತೆಗಳು ಹೆಚ್ಚಾದಂತೆ, ಈ ಸಂಖ್ಯೆಯ ಅಗತ್ಯವು ಹೆಚ್ಚಾಗುತ್ತದೆ ಮತ್ತು ಈ ಅಗತ್ಯವು ಬೆಳೆಯುತ್ತಲೇ ಇರುತ್ತದೆ. ಇದೀಗ ಪ್ರಸ್ತುತ ಕಾಲದಲ್ಲಿ ಅಗತ್ಯವಿರುವುದು ಮಾತ್ರವಲ್ಲದೆ ಭವಿಷ್ಯದಲ್ಲಿಯು ಇದರ ಅಗತ್ಯವು ಹೆಚ್ಚಾಗಲಿದೆ.

**(ಖುತ್‌ಬ ಜುಮುಅ, ಅಕ್ಟೋಬರ್ 22, 2010)**

**(ಇಂಚಾರ್ಜ್ ನಖ್ಫೆ ನೌ ವಿಭಾಗ ಭಾರತ)**

## ಝುಕಾತ್ ಒಂದು ಕಡ್ಡಾಯ ಪ್ರಮುಖ ಕರ್ಮವಾಗಿದೆ. ಅದರ ಪಾಲನೆಯ ಕಡೆ ವಿಶೇಷ ಗಮನವಹಿಸಬೇಕು!

ಜವಾಅತ್ ಬಂಧುಗಳು ತಿಳಿದವರೇ ಆಗಿದ್ದಾರೆ. ಪವಿತ್ರ ಖುರ್‌ಆನ್‌ನಲ್ಲಿ ನಮಾಝ್ ನಿರ್ವಹಣೆ ಜೊತೆ ಜೊತೆಯಲ್ಲಿ ಝುಕಾತಿನ ನಿರ್ದೇಶನವಿದೆ. ಆದುದರಿಂದ ಎಲ್ಲಾ ಅರ್ಹ ಬಂಧು ಭಗಿನಿಯರಲ್ಲಿ ವಿನಂತಿಸಿ ಕೊಳ್ಳುವುದೇನೆಂದರೆ ಅವರು ಈ ಪ್ರಮುಖ ಕಡ್ಡಾಯ ನಿರ್ವಹಣೆಯತ್ತ ಗಮನ ಹರಿಸಬೇಕಾಗಿದೆ.

ಝುಕಾತ್ ಇಸ್ಲಾಮಿನ ಮೂಲಭೂತ ಸಿದ್ಧಾಂತವಾಗಿದೆ. ಅದು ಎಲ್ಲಾ ನಿಗದಿತ ಅರ್ಹ ಜನರಿಗೆ ಕಡ್ಡಾಯವಾಗಿದೆ. ಆ ಪೈಕಿ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಓ ಎಲ್ಲಾ ನನ್ನ ಜಮಾಅತಿಗೆ ಸೇರಿದವರೆಂದು ಹೇಳುವ ಜನರೇ! ನೀವು ಆಕಾಶದಲ್ಲಿ ನಿಜವಾಗಿಯೂ ಭಯಭಕ್ತಿಯ ಮಾರ್ಗಗಳಲ್ಲಿ ನಡೆದವರಾದಾಗ ಮಾತ್ರ ನನ್ನ ಜಮಾಅತಿಗೆ ಸೇರಿದವರಾಗುವಿರಿ. ಆದುದರಿಂದ ತನ್ನ ಐದು ಹೊತ್ತಿನ ನಮಾಝುಗಳನ್ನು ಎಂಥ ಭಯ ಮತ್ತು ಆತ್ಮೀಯವಾಗಿ ನಿರ್ವಹಿಸಬೇಕೆಂದರೆ, ಅಲ್ಲಾಹನು ನಿಮ್ಮನ್ನು ನೋಡುತ್ತಿದ್ದಾನೆ ಎಂದಾಗಿರಬೇಕು. ಅಂತೆಯೇ ತನ್ನ ಉಪವಾಸಗಳನ್ನು ಅಲ್ಲಾಹನಿಗೋಸ್ಕರ ಪೂರ್ಣ ಶ್ರದ್ಧೆಯಿಂದ ಪಾಲಿಸುವವರಾಗಿರಿ. ಝುಕಾತ್‌ಗೆ ಅರ್ಹರಾದ ಪ್ರತಿಯೊಬ್ಬರು ಝುಕಾತ್ ನೀಡಬೇಕು.

**(ಕಿಶ್ತಿ ನೂಹ್, ರೂಹಾನಿ ಖಝಾಈನ್, ಸಂಪುಟ–19, ಪುಟ–15)**

ಆಭರಣಗಳ ಝುಕಾತ್ ನೀಡುವಿಕೆ ಕುರಿತು ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ನೀವು ಉಪಯೋಗಿಸುವ ಆಭರಣಗಳು ಮತ್ತು ಒಮ್ಮೊಮ್ಮೆ ಬಡ ಸ್ತ್ರೀಯರಿಗೆ ಉಪಯೋಗಿಸಲು ನೀಡುವ ಆಭರಣಗಳು ಕುರಿತು ಕೆಲವರು ಭಾವಿಸುವುದೇನಂದರೆ ಅದರ ಮೇಲೆ ಝುಕಾತ್ ಕಡ್ಡಾಯವಲ್ಲ ಎಂದು. ಮತ್ತು ಯಾವ ಆಭರಣಗಳು ಉಪಯೋಗಿಸಲಾಗುತ್ತದೆಯೋ ಮತ್ತು ಇತರರಿಗೆ ಬಳಸಲು ಕೊಡುವುದಿಲ್ಲವೋ ಆ ಆಭರಣಗಳ ಮೇಲೆ ಝುಕಾತ್ ಕೊಡಬೇಕಾಗಿದೆ ಎಂದು. ಏಕೆಂದರೆ ಅದು ತನ್ನ ಸ್ವಂತಕ್ಕಾಗಿ ಬಳಸಲ್ಪಡುತ್ತದೆ. ನಮ್ಮ ಮನೆಗಳಲ್ಲಿ ಅದೇ ತರಹ ಕ್ರಮಬದ್ಧರಾಗಿರುತ್ತಾರೆ. ಮತ್ತು ಪ್ರತಿ ವರ್ಷ ತನ್ನ ಆಭರಣಗಳ ಝುಕಾತನ್ನು ನೀಡುತ್ತಾರೆ. ಮತ್ತು ಯಾವ ಆಭರಣಗಳು ರೂಪಾಯಿಗಳಂತೆ ಜಮಾ ಮಾಡಿ ಇಡುತ್ತಾರೋ. ಅದರ ಝುಕಾತ್ ಕೊಡುವುದರಲ್ಲಿ ಯಾರಿಗೂ ತಕರಾರು ಇಲ್ಲ.

**(ಅಲ್–ಹಕಮ್ 17 ನವೆಂಬರ್ 1905, ಪುಟ 11)**

ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: "ನೆನಪಿಡಬೇಕಾದ ವಿಷಯವೇನೆಂದರೆ ಈ ತೆರಿಗೆಯನ್ನು ನಾವು 'ಝುಕಾತ್' ಎನ್ನುತ್ತೇವೆ. ಇದು ಆದಾಯದ ಮೇಲೆ ನಿರ್ಧಾರವಲ್ಲ. ಬದಲು ಬಂಡವಾಳ ಹಾಗೂ ಲಾಭ ಎಲ್ಲವೂ ಸೇರಿಸಿ ನೀಡಲಾಗುತ್ತದೆ. ಅದೇ ರೀತಿ 2.50% ವಾಸ್ತವದಲ್ಲಿ ಕೆಲ ಸಂಧರ್ಭಗಳಲ್ಲಿ ಲಾಭದ 50% ದಷ್ಟಾಗುತ್ತದೆ"

**(ಅಹ್ಮದಿಅತ್ ಯಾನಿ ಹಖೀಖಿ ಇಸ್ಲಾಮ್, ಅನ್ವಾರುಲ್ ಉಲೂಮ್, ಸಂಪುಟ–8, ಪುಟ–306)**

ಆಭರಣಗಳು ಮತ್ತು ನಗದು ರೂಪಾಯಿಯ ಝುಕಾತಿಗೆ ನಿರ್ಧರಿತ ಕ್ರಮದ ಕುರಿತು ಸಯ್ಯದ್‌ನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಅಲ್–ಖಾಮಿಸ್(ಅಬಿಅ) ಹೇಳುತ್ತಾರೆ. ಬೆಳ್ಳಿಗ್ಗೆ ಬೆಳ್ಳಿ ಮತ್ತು ಚಿನ್ನಕ್ಕೆ ಚಿನ್ನವೇ ನಿರ್ಧರಿತ ಕ್ರಮವಾಗಿರುವುದು. ಅದು ರಸೂಲುಲ್ಲಾಹ್(ಸ) ರವರ ಪರಿಶುದ್ಧ ಕಾಲದಲ್ಲಿ ರಸೂಲುಲ್ಲಾಹ್(ಸ) ಸ್ವಯಂ ಜಾರಿಗೆ ತಂದಿದ್ದರು. ಎಲ್ಲಿಯವರೆಗೆ ನಗದು ರೂಪಾಯಿಗಳ ನಿರ್ಧರಿತ ಕ್ರಮದ ಪ್ರಶ್ನೆ ಇದೆಯೋ ಅದನ್ನು ಪ್ರಸಕ್ತ ಸಮಯ ಲೋಕವು ಚಿನ್ನವನ್ನೇ ಬಂಡವಾಳ ಎಂದು ಒಪ್ಪಿಕೊಂಡಿದೆ. ಆದುದರಿಂದ ನಗದು ರೂಪಾಯಿಗಳ ಝುಕಾತ್ ಕೂಡ ಚಿನ್ನದ ಮಾನದಂಡದಂತೆಯೇ ಕೊಡಲಾಗುತ್ತದೆ. (ಮಕ್ತೂಬ್ ಹುಝೂರ್(ಅತಬಿಅ) ಬನಾಮ್ ಸದರ್ ಸಾಹಿಬ್ ಮಜ್ಲಿಸ್ ಇಫ್ತಾಹ್)

ರಸೂಲುಲ್ಲಾಹ್(ಸ) ಬೆಳ್ಳಿಗೋಸ್ಕರ 52 ವರೆ ತೊಲ (52.5) ಚಿನ್ನಕ್ಕೊಸ್ಕರ ಏಳುವರೆ ತೊಲ (7.5) ನಿಗದಿಪಡಿಸಲಾಗಿದೆ.

* ಯಾರ ಬಳಿ ಐವತ್ತೆರಡುವರೆ (52.5) ತೊಲ 612 ಗ್ರಾಂ ಬೆಳ್ಳಿ ಇದೆಯೋ ಮತ್ತು ಅದು ಅವರ ಬಳಿ ಒಂದು ವರ್ಷ ಆದರೆ. ಆಗ ಅದರ 1/40 ಭಾಗ ಅಂದರೆ ಎರಡುವರೆ ಪ್ರತಿಶತ ಝುಕಾತ್ ನೀಡುವುದು ಕಡ್ಡಾಯವಾಗಿರುತ್ತದೆ.

ಅದೇ ರೀತಿ ಯಾರ ಬಳಿ ಎಳುವರೆ (7.5) ತೊಲ 87 ಗ್ರಾಂ ಚಿನ್ನವಿರುತ್ತದೆ. ಅಥವಾ ಅದಕ್ಕೆ ಸಮನಾದ ನಗದು ಹಣದ ರಾಶಿಯಿರುತ್ತದೆ. ಅದರ ಮೇಲೆ ಒಂದು ವರ್ಷ ಅವಧಿ ಕಳೆದರೆ ಆಗ ಅದರ ಮೇಲೆಯೂ 1/40 ಭಾಗ ಅಂದರೆ ಎರಡುವರೆ ಪ್ರತಿಶತ ಝುಕಾತ್ ನೀಡುವುದು ಫರ್ಝ್ (ಕಡ್ಡಾಯ) ಆಗಿರುತ್ತದೆ.

* ಝುಕಾತ್ ರೂಪದಲ್ಲಿ ಪಡೆದ ಒಟ್ಟು ಮೊತ್ತ ಕೇಂದ್ರಕ್ಕೆ ರವಾನಿಸುವುದು ಅವಶ್ಯಕವಾಗಿದೆ.

ಅಲ್ಲಾಹನು ನಮಗೆಲ್ಲರಿಗೂ ಈ ಪ್ರಮುಖ ಕರ್ತವ್ಯವನ್ನು ಪಾಲಿಸಲು ಭಾಗ್ಯ ದಯಪಾಲಿಸಲಿ ಮತ್ತು ಜಮಾಅತಿನ ಎಲ್ಲಾ ಬಂಧುಗಳ ಸಂಪತ್ತು ಹಾಗೂ ಆತ್ಮಗಳಲ್ಲಿ ತನ್ನ ಅನುಗ್ರಹ ದಯಪಾಲಿಸಲಿ. **ಆಮೀನ್**

**(ಪತ್ರಿಕಾಂಗ)**

## ದಿವ್ಯದೂತರು (ಮಲಾಯಿಕ)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ: "ಒಬ್ಬ ಮಹತ್ವಶಾಲಿ ವ್ಯಕ್ತಿ ದೇವನ ಪ್ರಾತಿನಿಧ್ಯದ ಉಡುಗೆಯಿಂದ ಭೂಷಿತರಾಗಿ (ದೇವನ ಖಲೀಫರಾಗಿ) ಮತ್ತು ದೇವವಾಣಿಯಿಂದ ಅನುಗ್ರಹೀತರಾಗಿ ಭೂಮಿಗೆ ಇಳಿಯುವಾಗ ದಿವ್ಯದೂತರ ಮತ್ತು ಪವಿತ್ರಾತ್ಮದ ಅವತರಣ ಅಥವಾ ಭೂಮಿಗೆ ಇಳಿಯುವಿಕೆ ಉಂಟಾಗುತ್ತದೆ.ಪವಿತ್ರಾತ್ಮ ವಿಶಿಷ್ಟವಾಗಿ ದೇವನ ಪ್ರತಿನಿಧಿಗೆ ಲಭಿಸುತ್ತದೆ."

***(ಫತ್‌ಹೆ ಇಸ್ಲಾಮ್; ರೂಹಾನೀ ಖ಼ಝ಼ಾಇನ್ ಸಂಪುಟ 3, ಪುಟ 12)***

## ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ರಕ್ಷಿಸಿರಿ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಕಾಲದ ಸ್ಮರಣೀಯ ಪತ್ರಿಕೆ. **"ಅಖ್ಬಾರ್ ಬದರ್"** 1952 ರಿಂದ ಸತತವಾಗಿ ಖಾದಿಯಾನ್ ದಾರುಲ್‌ಅಮಾನಿನಿಂದ ಪ್ರಕಟಗೊಳ್ಳುತ್ತಿದೆ ಮತ್ತು ಅಹ್ಮದೀಯರ ಆಧ್ಯಾತ್ಮಿಕ ಅವಶ್ಯಕತೆಗಳನ್ನು ಪೂರೈಸುತ್ತಿದೆ. ಇದರಲ್ಲಿ ಪವಿತ್ರ ಖುರ್‌ಆನಿನ ಆಯತ್‌ಗಳು, ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರ ಹದೀಸ್‌ಗಳು, ಹಝ್ರತ್ ಮಸೀಹ್ ಮೌಊದ್(ಅ)ರ ಮಲ್‌ಫೂಝಾತ್ ಮತ್ತು ಬರವಣಿಗೆಗಳಲ್ಲದೆ ಹುಝೂರ್ ಅನ್ವರ್(ಅತಬಿಅ)ರವರ ಹೊಸ ಖುತ್‌ಬ ಜುಮುಆ, ಉಪನ್ಯಾಸಗಳು, ಸಂದೇಶಗಳು, ಖುತ್‌ಬ ಜುಮುಆ ಪ್ರಶ್ನೋತ್ತರದ ರೂಪದಲ್ಲಿ ಮತ್ತು ಹುಝೂರ್ ಅನ್ವರ್‌ರವರ ಪ್ರವಾಸದ ವರದಿಗಳು, ಅದೇ ರೀತಿ ಆಧ್ಯಾತ್ಮಿಕ ಮತ್ತು ಲೌಕಿಕ ಜ್ಞಾನಗಳ ಸಂಪತ್‌ಭರಿತ ವರದಿಗಳು ಇರುತ್ತದೆ. ಅವುಗಳನ್ನು ಅಧ್ಯಯನ ಮಾಡುವುದು, ಅವುಗಳನ್ನು ಅನ್ಯರಿಗೆ ತಲುಪಿಸುವುದು ಮತ್ತು ಅದರಿಂದ ತಮ್ಮ ಮತ್ತು ತಮ್ಮ ಮಕ್ಕಳ, ಕುಟುಂಬದವರ ತರಬೇತಿ ಮಾಡುವುದು ನಮ್ಮ ಕರ್ತವ್ಯವಾಗಿದೆ. ಈ ಎಲ್ಲಾ ಉದ್ದೇಶಗಳನ್ನು ಪಡೆಯುವುದಕ್ಕೆ ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ಕಾಪಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಆಧ್ಯಾತ್ಮಿಕ ಜ್ಞಾನ ಮತ್ತು ತರಬೇತಿಯನ್ನೂ ಒಳಗೊಂಡಿರುವ ಈ ಪವಿತ್ರವಾದ ಪತ್ರಿಕೆಯ ಅವಶ್ಯಕತೆ ಏನೆಂದರೆ ಅದನ್ನು ಗೌರವಿಸಬೇಕು. ಆದ್ದರಿಂದ ಇದನ್ನು ರದ್ದಿಗೆ ಹಾಕುವುದು ಅದರ ಪಾವಿತ್ರ್ಯತೆಯನ್ನು ಚದುರಿಸುವ ಸಮಾನವಾಗಿದೆ. ಅದನ್ನು ರಕ್ಷಿಸಲು ಕಷ್ಟವಾಗುತ್ತಿದ್ದರೆ ಅದನ್ನು ಎಚ್ಚರಿಕೆಯಿಂದ ನಾಶಮಾಡಿರಿ. ಏಕೆಂದರೆ ಹೀಗೆ ಆ ಪವಿತ್ರ ಬರಹಗಳು ಅವಮಾನವಾಗಬಾರದು. ಅಹ್ಮದಿ ಸದಸ್ಯರೆಲ್ಲರೂ ಈ ಬಗ್ಗೆ ವಿಶೇಷ ಗಮನ ಹರಿಸುತ್ತೀರ ಮತ್ತು ಇದರಿಂದ ಉಪಯೋಗ ಗಳಿಸುವಿರೀ ಎಂದು ಆಶಿಸುತ್ತೇವೆ.

**(ಸಂಪಾದಕರು)**

## ಖಾದಿಯಾನ್ ದಾರುಲ್ ಅಮಾನ್‌ನಲ್ಲಿ ವಾರ್ಷಿಕ ಇಜ್ತೆಮಾ ನಡೆಯುವ ದಿನಾಂಕಗಳು

ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಆಝೀಝ್‌ರವರು ಭಾರತದಲ್ಲಿ ಅಂಗ ಸಂಸ್ಥೆಗಳ (ಮಜ್ಲಿಸ್ ಅನ್ಸರುಲ್ಲಾ, ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ, ಲಜ್ನಾ ಇಮಾಇಲ್ಲಾ) ರಾಷ್ಟ್ರೀಯ ವಾರ್ಷಿಕ ಕೂಟಗಳನ್ನು (ಇಜ್ತೆಮಾ) 21, 22 ಮತ್ತು 23ನೇ ಅಕ್ಟೋಬರ್ 2022 ರಂದು (ಶುಕ್ರವಾರ, ಶನಿವಾರ, ಭಾನುವಾರ) ಆಯೋಜಿಸಲು ಅನುಮತಿ ನೀಡಿದ್ದಾರೆ.

ಎಲ್ಲಾ ಉಪ ಸಂಸ್ಥೆಗಳ ಸದಸ್ಯರು ಖಾದಿಯಾನಿನಲ್ಲಿ ಈ ಆಧ್ಯಾತ್ಮಿಕ ಪರಿಸರದಲ್ಲಿ ಆಯೋಜಿಸಲಾಗುವಂತಹ ಇಜ್ತೆಮಾಗಳಲ್ಲಿ ಪಾಲ್ಗೊಳ್ಳಲು ಇಂದಿನಿಂದಲೆ ತಯಾರಿ ಪ್ರಾರಂಭಿಸಿರಿ. ಈ ಇಜ್ತೆಮಾಗಳು ತರಬೇತಿಯ ಮುಖ್ಯ ಮೂಲವಾಗಿದೆ. **(ಸದರ್ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಭಾರತ)**

## *127 ನೇ ಜಲ್ಸಾ ಸಾಲಾನ ಖಾದಿಯಾನ್*

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 127ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 23, 24 ಮತ್ತು 25ನೇ ಡಿಸೆಂಬರ್ 2022 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್.**

**(ನಾಝಿರ್ ಇಸ್ಲಾಹ್–ವ–ಇರ್‌ಶಾದ್ ಖಾದಿಯಾನ್)**

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.03, Thursday, 22 September 2022, Issue No. 38

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.600/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಐರ್ಲ್ಯಾಂಡ್ಡ ಪ್ರವಾಸ (ಸೆಪ್ಟೆಂಬರ್ 2014)*

(ಬದರ್ ಸಂಚಿಕೆ 37ರ ಉಳಿದ ಭಾಗ)

### 23 ಸೆಪ್ಟೆಂಬರ್ 2014 ಮಂಗಳವಾರ

ಹುಝೂರ್ ಅನ್ವರ್ (ಅಬಿಅ) ಅವರು ಮುಂಜಾನೆ 6 ಗಂಟೆಗೆ ಆಗಮಿಸಿ ಫಜರ್ ನಮಾಝ್ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ಹುಝೂರ್ ಅನ್ವರ್ ತನ್ನ ವಸತಿ ನಿಲಯಕ್ಕೆ ತೆರಳಿದರು.

ಮುಂಜಾನೆ ಹುಝೂರ್ ಅನ್ವರ್ ಲಂಡನ್ ಕೇಂದ್ರದಿಂದ ಬಂದ ಕಛೇರಿಯ ಪತ್ರಗಳನ್ನು ಪರಿಶೀಲಿಸಿದರು. ಮತ್ತು ವರದಿಗಳ ಮೇಲೆ ತನ್ನ ಹಸ್ತಾಕ್ಷರಗಳೊಂದಿಗೆ ನಿರ್ದೇಶನಗಳನ್ನು ಬರೆದರು.

**ಕುಟುಂಬ ಭೇಟಿಗಳು**

ಇಂದಿನ ಕಾರ್ಯಕ್ರಮ ಕುಟುಂಬಗಳನ್ನು ಭೇಟಿ ಮಾಡುವುದಾಗಿತ್ತು. ಭೇಟಿಯ ವ್ಯವಸ್ಥೆ castleknock ಹೋಟೆಲಿನ ಒಂದು ಭಾಗದಲ್ಲಿ ಮಾಡಲಾಗಿತ್ತು.

ಹುಝೂರೆ ಅನ್ವರ್ ಹನ್ನೊಂದೂವರೆ ಗಂಟೆಗೆ ಆಗಮಿಸಿದರು ಮತ್ತು ಕುಟುಂಬ ಭೇಟಿಗಳು ಪ್ರಾರಂಭವಾದವು. ಮುಂಜಾನೆಯ ಈ ಅಧಿವೇಶನದಲ್ಲಿ 29 ಕುಟುಂಬಗಳ 106 ಜನರು ಭೇಟಿ ಮಾಡುವ ಭಾಗ್ಯ ಪಡೆದರು. ಹುಝುರೆ ಅನ್ವರ್ ಅವರು ಪ್ರೀತಿಯಿಂದ ವಿದ್ಯೆ ಪಡೆಯುವ ವಿದ್ಯಾರ್ಥಿಗಳಿಗೆ ಮತ್ತು ವಿದ್ಯಾರ್ಥಿನಿಯರಿಗೆ ಲೇಖನಿಗಳನ್ನು ನೀಡಿದರು ಮತ್ತು ಸಣ್ಣ ಬಾಲಕ ಬಾಲಕಿಯರಿಗೆ ಚಾಕ್ಲೇಟ್‌ಗಳನ್ನು ನೀಡಿದರು. ಆ ಎಲ್ಲಾ ಕುಟುಂಬಗಳು ಹುಝೂರೆ ಅನ್ವರ್ ಅವರ ಜೊತೆಯಲ್ಲಿ ಭಾವಚಿತ್ರ ತೆಗೆಯಿಸಿಕೊಳ್ಳುವ ಭಾಗ್ಯ ಪಡೆದರು.

ಭೇಟಿ ಮಾಡಿದ ಆ ಕುಟುಂಬಗಳು ಡಬ್ಲಿನ್ ನಗರಗಳಲ್ಲದೇ ಸುತ್ತಮುತ್ತಲಿನ ವಿವಿಧ ನಗರಗಳ ಮತ್ತು ಕ್ಷೇತ್ರಗಳಾದ Celbridge, cavan, lucan, swords, Navan & Drogheda ದಿಂದ ಬಂದವರಾಗಿದ್ದರು.

ಇಂದು ಭೇಟಿ ಮಾಡುವವರಲ್ಲಿ ಕೆಲ ಭಾಗ್ಯವಂತ ಕುಟುಂಬಗಳು ತಮ್ಮ ಜೀವನದಲ್ಲಿ ಮೊದಲ ಬಾರಿಗೆ ತನ್ನ ಪ್ರೀತಿಯ ಇಮಾಮರೊಂದಿಗೆ ಭೇಟಿಯ ಭಾಗ್ಯ ಪಡೆಯುತ್ತಿದ್ದರು. ಮತ್ತು ಅತ್ಯಂತ ಸಮೀಪದಿಂದ ತನ್ನ ನೇತಾರರ ದರ್ಶನ ಮತ್ತು ಕಾರುಣ್ಯಗಳಿಂದ ಅನುಗ್ರಹಿತರಾಗುವವರಿದ್ದರು.

ಅವರಿಗೆ ಇಂದಿನ ದಿನವು ಅತ್ಯಂತ ಸಂತೋಷದ ದಿನವಾಗಿತ್ತು. ಮತ್ತು ತನ್ನ ಪ್ರೀತಿಯ ಇಮಾಮರೊಂದಿಗೆ ಸಾಮೀಪ್ಯದ ಈ ಕ್ಷಣಗಳು ಅವರ ಜೀವನದ ಬಂಡವಾಳವಾಗಿದ್ದವು. ಅವರ ಪೀಳಿಗೆಯೂ ಸಹ ಆ ಬಂಡವಾಳವನ್ನು ಸದಾ ಗೌರವದ ದೃಷ್ಟಿಯಿಂದ ಕಾಣುವರು.

ಭೇಟಿಗಳ ಈ ಕಾರ್ಯಕ್ರಮ ಮಧ್ಯಾಹ್ನ ಎರಡೂ ಗಂಟೆಯವರೆಗೆ ಜಾರಿಯಲ್ಲಿತ್ತು.

**ಆಮೀನ್ ಸಮಾರಂಭ**

ಅನಂತರ ಹುಝೂರೆ ಅನ್ವರ್(ಅಬಿಅ) ಝುಹರ್ ಅಸರ್ ನಿರ್ವಹಣೆಗೆ ವ್ಯವಸ್ಥೆ ಮಾಡಿದ ಆ ಸಭಾಂಗಣಕ್ಕೆ ಆಗಮಿಸಿದರು.

ನಮಾಝ್ ನಿರ್ವಹಣೆಯ ಮುಂಚೆ ಆಮೀನ್ ಸಮಾರಂಭ ಏರ್ಪಟ್ಟಿತ್ತು. ಹುಝೂರೆ ಅನ್ವರ್ ಇಪ್ಪತ್ತು ಬಾಲಕ ಬಾಲಕಿಯರಿಂದ ಪವಿತ್ರ ಖುರ್‌ಆನ್‌ನ ಒಂದೊಂದು ವಚನ ಆಲಿಸಿದರು ಮತ್ತು ಕೊನೆಯಲ್ಲಿ ಪ್ರಾರ್ಥಿಸಿದರು.

ಈ ಕೆಳಗೆ ಆ ಭಾಗ್ಯವಂತ ಬಾಲಕ ಬಾಲಕಿಯರ ಅಂದರೆ ಆ ಸಮಾರಂಭದಲ್ಲಿ ಭಾಗವಹಿಸಿದವರ ಹೆಸರುಗಳಿವೆ. ಹೆಸರುಗಳು ಇಂತಿವೆ ಅಝೀಝು ಉರೂಸ ಮಹ್ಮೂದ್, ಈಮಾನ್ ಬುಶ್ರ ಮಲಿಕ್, ಸಬೀಕ ಇಹ್ಸಾನ್, ಗಝಾಲ ಹಬೀಬ್, ಅಲೀಶಾಹ್ ಭಟ್, ಅನೀಲ ಅಸದ್, ಅಝೀಝುಮ್ ರೂಹಾನ್ ಮಸ್ರೂರ್ ಮಲಿಕ್, ಫಾರಾನ್ ಇಫ್ತಿಖಾರ್, ಅರಮ್‌ಗಾನ್ ಮುಝುಫ್ಫರ್, ಅರ್ಸ್ಲಾನ್ ಮಲಿಕ್, ಅಝೀಝುಮ್ ಅಫೀ ಅಲಿ ಅಹ್ಮದ್, ಅಬ್ದುಲ್ ಬಾಸಿತ್ ಜಂಜೂಅ, ಅರ್ಸ್ಲಾನ್ ಅಹ್ಮದ್, ಇಬ್ರಾಹೀಮ್ ಜಂಜೂಅ, ಫರ್‌ಸಾದ್ ಅಹ್ಮದ್ ಕಾಮ್ರಾನ್, ಅಹ್ಸನ್ ಮಲಿಕ್, ಫಹದ್ ಇಫ್ತಿಖಾರ್, ತಸ್ಲೀಮ್ ಅಹ್ಮದ್, ಅಝೀಝುಮ್ ಅರೀಸಸ್ ಅಹ್ಮದ್ ಮಲಿಕ್, ಅಝೀಝುಮ್ ಖವೀಮ್ ಅಹ್ಮದ್.

ಆಮೀನ್ ಸಮಾರಂಭ ನಂತರ ಹುಝೂರೆ ಅನ್ವರ್ ಝುಹರ್ ಅಸರ್ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ಹುಝೂರೆ ಅನ್ವರ್ ತನ್ನ ವಸತಿಯೆಡೆ ತೆರಳಿ ಕಚೇರಿ ಕೆಲಸ ನಿರ್ವಹಿಸುವುದರಲ್ಲಿ ಮಗ್ನರಾಗಿದ್ದರು.

**ಕುಟುಂಬ ಭೇಟಿಗಳು**

ಕಾರ್ಯಕ್ರಮದನ್ವಯ ಆರು ಮುಕ್ಕಾಲು ಗಂಟೆಗೆ ಹುಝೂರೆ ಅನ್ವರ್ ಆಗಮಿಸಿದರು ಮತ್ತು ಕುಟುಂಬ ಭೇಟಿಗಳು ಪ್ರಾರಂಭವಾದವು.

ಇಂದು ಸಂಜೆ ಈ ಅಧಿವೇಶನದಲ್ಲಿ ಡಬ್ಲಿನ್ ಅಲ್ಲದೇ Longford, partlaise, Dundalk, waterford, ಮತ್ತು Navan ನ ಕ್ಷೇತ್ರಗಳಿಂದ ಬಂದಿರುವ 22 ಕುಟುಂಬಗಳ 96 ಜನರು ತನ್ನ ಪ್ರೀತಿಯ ಇಮಾಮರೊಂದಿಗೆ ಭೇಟಿಯ ಭಾಗ್ಯ ಪಡೆದರು. ಆ ಎಲ್ಲಾ ಕುಟುಂಬಗಳು ಮತ್ತು ಬಾಂಧವರು ತನ್ನ ಪ್ರೀತಿಯ ನೇತಾರರೊಂದಿಗೆ ಚಿತ್ರ ತೆಗೆಯಿಸಿಕೊಳ್ಳುವ ಭಾಗ್ಯ ಪಡೆದರು.

ಹುಝೂರೆ ಅನ್ವರ್ ಪ್ರೀತಿಪೂರ್ವಕವಾಗಿ ವಿದ್ಯೆ ಪಡೆಯುತ್ತಿರುವ ಬಾಲಕ ಬಾಲಕಿಯರಿಗೆ ಲೇಖನಿಗಳನ್ನು ( ಪೆನ್) ನೀಡಿದರು. ಮತ್ತು ಸಣ್ಣ ವಯಸ್ಸಿನ ಬಾಲಕ ಬಾಲಕಿಯರಿಗೆ ಚಾಕ್ಲೇಟುಗಳನ್ನು ನೀಡಿದರು.

ಭೇಟಿಯ ಈ ಕಾರ್ಯಕ್ರಮವು ಎಂಟೂವರೆ ಗಂಟೆಯವರೆಗೆ ಜಾರಿಯಲ್ಲಿತ್ತು. ಅನಂತರ ಹುಝೂರೆ ಅನ್ವರ್ ಮಗ್ರಿಬ್ ಇಶಾಅ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ಹುಝೂರೇ ಅನ್ವರ್ ತನ್ನ ವಸತಿ ವಿಭಾಗಕ್ಕೆ ತೆರಳಿದರು.

### 24 ಸೆಪ್ಟೆಂಬರ್ 2014 ಬುಧವಾರ

ಹುಝೂರೆ ಅನ್ವರ್ ಮುಂಜಾನೆ ಆರು ಗಂಟೆಗೆ ಆಗಮಿಸಿ ಫಜರ್ ನಮಾಝ್ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ಹುಝೂರೆ ಅನ್ವರ್ ತನ್ನ ವಸತಿ ನಿಲಯಕ್ಕೆ ತೆರಳಿದರು.

ಮುಂಜಾನೆ ಹುಝೂರೆ ಅನ್ವರ್ ಅಂಚೆಪತ್ರಗಳನ್ನು ಮತ್ತು ವರದಿಗಳನ್ನು ಪರಿಶೀಲಿಸಿದರು ಮತ್ತು ನಿರ್ದೇಶನಗಳನ್ನು ನೀಡಿದರು.

ಸಂಸದ್ ಭವನದಲ್ಲಿ speaker ಮತ್ತು ಇತರ ಸಂಸದ್ ಸದಸ್ಯರೊಂದಿಗೆ ಹುಝೂರೆ ಅನ್ವರ್ ಅವರ ಭೇಟಿ

ಇಂದು ಕಾರ್ಯಕ್ರಮದನ್ವಯ ಸಂಸದ್ ಭವನಕ್ಕೆ ತೆರಳಬೇಕಾಗಿತ್ತು. ಅಲ್ಲಿ ನ್ಯಾಷನಲ್ ಅಸೆಂಬ್ಲಿ ಐರ್ಲ್ಯಾಂಡ್‌ನ ಸ್ಪೀಕರ್ ಮತ್ತು ಇತರ ಸಂಘದ ಸದಸ್ಯರ ಮತ್ತು ಸೆನೆಟರ್‌ರೊಂದಿಗೆ ಹುಝೂರೆ ಅನ್ವರ್ ಅವರೊಂದಿಗೆ ಭೇಟಿಯ ಕಾರ್ಯಕ್ರಮ ನಿಗಧಿಯಾಗಿತ್ತು.

**(ಮುಂದುವರಿಯುವುದು)**

**ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್**

**ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:**

"ಎಲ್ಲ ಪ್ರವಾದಿಗಳಲ್ಲಿ ಅತ್ಯಂತ ಪರಿಪೂರ್ಣ ಉಪದೇಶಗಳನ್ನು ನೀಡಿದವರು, ಅತ್ಯುನ್ನತ ಮಟ್ಟದ ಪರಿಶುದ್ಧತೆ ಹಾಗು ಜಾಣ್ಮೆಯಿಂದ ಕೂಡಿದ ಉಪದೇಶ ನೀಡಿದವರು ಮತ್ತು ಅತ್ಯುತ್ತಮ ಮಾನವೀಯ ಗುಣಗಳನ್ನು ತನ್ನ ಜೀವಿತದಲ್ಲಿ ಅಳವಡಿಸಿ ಲೋಕಕ್ಕೆ ಅತ್ಯುತ್ತಮ ಮಾದರಿಯಾಗಿ ತೋರಿಸಿಕೊಟ್ಟವರು ನಮ್ಮ ನಾಯಕರೂ ನಮ್ಮ ಮಾಲಿಕರೂ ಆದ ಹಝ್ರತ್ ಮುಹಮ್ಮದ್(ಸ) ಆಗಿರುವರು ಎಂದು ನನಗೆ ಮನವರಿಕೆ ಮಾಡಿಕೊಡಲಾಗಿದೆ." ***(ಅರ್‌ಬಈನ್ ನಂಪುಟ-1 ರೂಹಾನಿ ಖಝಾಇನ್ ಸಂಪುಟ 17, ಪುಟ 345)***

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**

**NATIONAL TOLL FREE : 1800-103-2131**

**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**

**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.